# ಮಕ್ಕಬಿಯರ ಮೊದಲನೆಯ ಗ್ರಂಥ

## ಮುನ್ನುಡಿ

ಕ್ರಿ. ಪೂ. 175ರಿಂದ ಕ್ರಿ.ಪೂ. 134ರವರೆಗೆ, ಅಂದರೆ ಅರಸ ಅಂತಿಯೋಕ ಎಪಿಫನೆಸನ ಕಾಲದಿಂದ ಅರಸ ಯೊವಾನ್ನ ಹಿರ್ಕಾನನ ಕಾಲದವರೆಗಿನ ಯೆಹೂದ್ಯ ಇತಿಹಾಸದ ಘಟನೆಗಳನ್ನು ಮಕ್ಕಬಿಯರ ಮೊದಲ ಗ್ರಂಥ ವಿವರಿಸುತ್ತದೆ.

ಐತಿಹಾಸಿಕ ದೃಷ್ಟಿಯಿಂದ ಈ ಗ್ರಂಥ ಹಸ್ಮೋನೇಯರ ಅಥವಾ ಮಕ್ಕಬಿಯರ ಕುಟುಂಬಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಇಸ್ರಯೇಲ್ ರಾಷ್ಟ್ರವನ್ನು ರಕ್ಷಿಸುವುದಕ್ಕಾಗಿ ದೇವರು ಮಕ್ಕಬಿಯರ ಕುಟುಂಬವನ್ನು ಆರಿಸಿಕೊಂಡರು ಎಂಬ ಅಭಿಪ್ರಾಯವನ್ನು ದೃಢೀಕರಿಸುತ್ತದೆ. ದೇವರು ಚರಿತ್ರೆಯಲ್ಲಿ ಕಾರ್ಯೋನ್ಮುಖರಾಗಿದ್ದು, ತಮಗೆ ಪ್ರಾಮಾಣಿಕರಾಗಿ ಬಾಳುವವರಿಗೆ ಜಯವನ್ನು ಸಂಭಾವನೆಯಾಗಿ ದಯಪಾಲಿಸುತ್ತಾರೆ ಎಂಬುದು ಈ ಗ್ರಂಥದ ವಿಶಿಷ್ಟವಾದ ಧಾರ್ಮಿಕ ವಿಷಯ.

## ಪರಿವಿಡಿ


| | | | | |
|---|---|---|---|---|
| ಮತ್ತಾತಿಯನ ಚಿತ್ರಹಿಂಸೆ ಹಾಗೂ ದಂಗೆ | – | 1.1 | – | 2.70 |
| ಯೂದ ಮಕ್ಕಬಿಯನ ನಾಯಕತ್ವ | – | 3.1 | – | 9.22 |
| ಯೋನಾತನನ ನಾಯಕತ್ವ | – | 9.23 | – | 12.53 |
| ಸಿಮೋನನ ನಾಯಕತ್ವ | – | 13.1 | – | 16.24 |


### ಅಲೆಕ್ಸಾಂಡರ್ ಮಹಾಶಯ

**1** ಮ್ಯಾಸಿಡೋನಿಯದವನೂ ಫಿಲಿಪ್ಪನ ಮಗನೂ ಆದ ಅಲೆಕ್ಸಾಂಡರನು ಸೈಪ್ರಸ್ಸಿನಿಂದ ಬಂದು
ಪರ್ಷಿಯನ್ನರ ಮತ್ತು ಮೇದ್ಯರ ರಾಜನಾಗಿದ್ದ ಡೇರಿಯಸ್ಸನನ್ನು ಸೋಲಿಸಿದನು. ಅವನ ಸಿಂಹಾಸನವನ್ನು
ಆಕ್ರಮಿಸಿಕೊಂಡನು. 2ಗ್ರೀಸ್ ದೇಶದ ರಾಜನಾಗಿದ್ದ ಇವನು ಅನೇಕ ಯುದ್ಧಗಳನ್ನು ಮಾಡಿ,
ಕೋಟೆಕೊತ್ತಲಗಳನ್ನು ಸ್ವಾಧೀನಮಾಡಿಕೊಂಡು, ಸ್ಥಳೀಯ ರಾಜರನ್ನು ಸಂಹರಿಸಿದ್ದನು. 3ಭೂಮಿಯ
ತುತ್ತತುದಿಯವರೆಗೂ ದಂಡಯಾತ್ರೆ ಕೈಗೊಂಡು ರಾಷ್ಟ್ರಗಳನ್ನು ಒಂದಾದ ಮೇಲೆ ಒಂದಾಗಿ ಸುಲಿಗೆ
ಮಾಡಿದನು. ಇಡೀ ಜಗತ್ತೆ ಇವನ ಮುಂದೆ ಮಾತೆತ್ತದಂತಾಯಿತು. ಹೀಗೆ ಘನತೆಯಿಂದ ಘನತೆಗೆ ಏರಿದ
ಇವನು ಬಹಳವಾಗಿ ಉಬ್ಬಿಹೋದನು. 4ಬಲಾಢ್ಯ ಸೈನ್ಯ ಇವನಿಗಿತ್ತು. ನಾನಾ ರಾಷ್ಟ್ರ, ಜನಾಂಗ ಹಾಗು
ಅರಸರು ಇವನಿಗೆ ಅಧೀನರಾಗಿ ಕಪ್ಪ ಕಾಣಿಕೆ ಸಲ್ಲಿಸುವವರಾದರು.

5 ಹೀಗಿರಲು ಇವನು ಅಸ್ವಸ್ಥನಾದನು. ತನ್ನ ಮರಣಕಾಲ ಸಮೀಪಿಸಿತೆಂದು ತಿಳಿದುಕೊಂಡನು.
6ಆದ್ದರಿಂದ ಯೌವನಾರಭ್ಯ ತನ್ನ ಜೊತೆಯಲ್ಲೇ ಬೆಳೆದ ಗೌರವಾನ್ವಿತ ಅಧಿಕಾರಿಗಳನ್ನು ಕರೆದು, ತಾನು
ಜೀವಂತನಾಗಿರುವಾಗಲೇ ತನ್ನ ಸಾಮ್ರಾಜ್ಯವನ್ನೆಲ್ಲ ಅವರಿಗೆ ಹಂಚಿಕೊಟ್ಟನು. 7ಅಲೆಕ್ಸಾಂಡರನು ಹನ್ನೆರಡು
ವರ್ಷ ರಾಜ್ಯವಾಳಿ ಕಾಲವಾದನು.

8 ಅವನ ಅಧಿಕಾರಿಗಳು ತಮ್ಮ ತಮ್ಮ ಪ್ರಾಂತ್ಯಗಳಲ್ಲೇ ರಾಜ್ಯಭಾರ ಮಾಡತೊಡಗಿದರು. 9ಅವನ
ಮರಣಾನಂತರ ಅವರೆಲ್ಲರು ಕಿರೀಟಧಾರಣೆ ಮಾಡಿಕೊಂಡರು. ಅವರ ತರುವಾಯ ಅವರ ಮಕ್ಕಳೂ
ಅನೇಕ ವರ್ಷಗಳವರೆಗೆ ಹಾಗೆಯೇ ಮಾಡಿದರು. ನಾಡಿನಲ್ಲಿ ಅನೇಕ ದುಷ್ಟತನಕ್ಕೂ ಕಾರಣರಾದರು.

## ಅಂತಿಯೋಕ ಎಪಿಫನೆಸ್ ಮತ್ತು ಧರ್ಮಭ್ರಷ್ಟರಾದ ಯೆಹೂದ್ಯರು

(2 ಮಕ್ಕಬಿ 4.7–17)

10 ಈ ಅಧಿಕಾರಿಗಳಿಂದ ವಿಷಲತೆಯ ಬೇರೊಂದು ಚಿಗುರಿಕೊಂಡಿತು. ಇವನೇ ಅಂತಿಯೋಕ ಎಪಿಫನೆಸ್ ಎಂಬವನು. ಇವನು 'ಅಂತಿಯೋಕ' ಎಂಬ ರಾಜನ ಮಗ; ರೋಂ ನಗರದಲ್ಲಿ ಒತ್ತೆಯಾಳಾಗಿ ಬಿದ್ದಿದ್ದ. ಗ್ರೀಕ್ ರಾಜ್ಯದ 137ರಲ್ಲಿ ಇವನು ಪಟ್ಟಕ್ಕೆ ಬಂದ. 11ಆ ದಿನಗಳಲ್ಲಿ ಧರ್ಮಶಾಸ್ತ್ರವನ್ನು ಮೀರಿ ನಡೆಯುತ್ತಿದ್ದ ಕೆಲವರು ಇಸ್ರಯೇಲಿನಲ್ಲಿ ತಲೆಯೆತ್ತಿಕೊಂಡರು. ಇವರು, "ನಮ್ಮ ಸುತ್ತಮುತ್ತಲಿನ ಅನ್ಯಜನರ ಸಂಗಡ ಸಂಧಾನ ಮಾಡಿಕೊಳ್ಳೋಣ ಬನ್ನಿ; ನಾವು ಅವರಿಂದ ಬೇರೆಯಾದಾಗಿನಿಂದ ಬಹಳ ಸಂಕಟಗಳಿಗೆ ಈಡಾಗಿದ್ದೇವೆ," ಎಂದು ಹೇಳುತ್ತಾ ಅನೇಕರನ್ನು ತಪ್ಪುದಾರಿಗೆ ಎಳೆದರು. 12ಹಲವರಿಗೆ ಈ ಸಲಹೆ ಹಿತರಕವಾಗಿಯೇ ಕಂಡಿತು. 13ಕೆಲವು ಮಂದಿ ಅರಸನವರೆಗೂ ಹೋದರು. ಅರಸನೂ ಅವರಿಗೆ ಅನ್ಯಜನರ ಆಚಾರವಿಚಾರಗಳನ್ನು ಅನುಸರಿಸಲು ಅಪ್ಪಣೆಕೊಟ್ಟನು. 14ಪರಿಣಾಮವಾಗಿ, ಅವರು ಹೋಗಿ ಅನ್ಯಜನರ ಸಂಪ್ರದಾಯದಂತೆ ಜೆರುಸಲೇಮಿನಲ್ಲೆ ಒಂದು ವ್ಯಾಯಾಮ ಶಾಲೆಯನ್ನು ಕಟ್ಟಿಸಿದರು. 15ಸುನ್ನತಿ ಚಿಹ್ನೆಗಳನ್ನು ಮರೆಮಾಚಿದರು, ಪವಿತ್ರ ಒಡಂಬಡಿಕೆಯನ್ನು ಮೀರಿದರು, ಅನ್ಯಜನರೊಡನೆ ಮಿಶ್ರವಾದರು, ದುಷ್ಟತನಕ್ಕೆ ದಾಸರಾದರು.

## ಈಜಿಪ್ಟಿನ ಮೇಲೆ ಅಂತಿಯೋಕನ ಧಾಳಿ

16 ರಾಜ್ಯದಲ್ಲೆಲ್ಲಾ ತನ್ನ ಪರಿಪಾಲನೆ ಸುಸ್ಥಿರ ಆಗಿರುವುದನ್ನು ಕಂಡ ಅಂತಿಯೋಕನು ಈಜಿಪ್ಟನ್ನೂ ಆಳಬೇಕೆಂದು ಅಪೇಕ್ಷಿಸಿದನು. 17ರಥ, ಆನೆ, ರಾಹುತ, ನಾವಿಕರನ್ನೊಳಗೊಂಡ ಮಹಾಸೈನ್ಯದೊಡನೆ ಈಜಿಪ್ಟಿನ ಮೇಲೆ ದಂಡೆತ್ತಿ ಹೋದನು. 18ಈಜಿಪ್ಟಿನ ಅರಸ ಪ್ಟೊಲೆಮೇಯನೊಡನೆ ಯುದ್ಧ ನಡೆಯಿತು. ಪ್ಟೊಲೆಮೇಯನು ಸೋತು ಪಲಾಯನ ಗೈದನು. ಸೈನಿಕರನೇಕರು ಗಾಯಗೊಂಡು ಸತ್ತರು. 19ಅಂತಿಯೋಕನ ಸೈನಿಕರು ಈಜಿಪ್ಟಿನ ಅನೇಕ ಕೋಟೆಕೊತ್ತಲಗಳನ್ನು ಸ್ವಾಧೀನಪಡಿಸಿಕೊಂಡರು; ಈಜಿಪ್ಟನ್ನು ಸೂರೆಮಾಡಿದರು.

## ಮಹಾದೇವಾಲಯದ ಸುಲಿಗೆ

20 ಹೀಗೆ ಈಜಿಪ್ಟನ್ನು 143ನೇ ವರ್ಷದಲ್ಲಿ ಜಯಿಸಿದ ಮೇಲೆ ಅಂತಿಯೋಕನು ಮಹಾಸೈನ್ಯದೊಡನೆ ಇಸ್ರಯೇಲಿನ ವಿರುದ್ಧ ದಂಡೆತ್ತಿ ಬಂದು ಜೆರುಸಲೇಮ್ ಪಟ್ಟಣಕ್ಕೆ ಮುತ್ತಿಗೆಹಾಕಿದನು. 21ಸೊಕ್ಕಿನಿಂದ ಪವಿತ್ರ ಮಹಾದೇವಾಲಯವನ್ನೇ ಹೊಕ್ಕು, ಅದರೊಳಗಿದ್ದ ಚಿನ್ನದ ಪೀಠವನ್ನು, ದೀಪವೃಕ್ಷವನ್ನು, ಅದಕ್ಕೆ ಸಂಬಂಧಿಸಿದ ಎಲ್ಲ ಉಪಕರಣಗಳನ್ನು, ನೈವೇದ್ಯದ ರೊಟ್ಟಿಗಳನ್ನು ಇಡುವ ಮೇಜನ್ನು, ಪಾನದ್ರವ್ಯಗಳನ್ನು ಅರ್ಪಿಸುವುದಕ್ಕೆ ಇಟ್ಟಿದ್ದ ಬಟ್ಟಲುಗಳನ್ನು, ಹರಿವಾಣಗಳನ್ನು, ಚಿನ್ನದ ಧೂಪಾರತಿಗಳನ್ನು, ಅಲ್ಲಿದ್ದ ತೆರೆಯನ್ನು, ಕಿರೀಟಗಳನ್ನೂ ತೆಗೆದುಕೊಂಡನು. 22ಇವೂ ಅಲ್ಲದೆ ದೇವಾಲಯದ ಮುಂಭಾಗವನ್ನು ಶೃಂಗರಿಸಿದ್ದ ಚಿನ್ನದ ಎಲ್ಲ ಒಡವೆ ವಸ್ತುಗಳನ್ನು ಕೆತ್ತಿಸಿ ತೆಗೆದುಕೊಂಡನು. 23ಇವುಗಳಲ್ಲದೆ, ಅಲ್ಲಿದ್ದ ಬೆಳ್ಳಿ ಬಂಗಾರದ ಅಮೂಲ್ಯ ಪಾತ್ರೆಗಳನ್ನು ಹುದುಗಿಸಿಟ್ಟಿದ್ದ ನಿಧಿಯನ್ನೂ ತೆಗೆದುಕೊಂಡನು. 24ಇವುಗಳನ್ನೆಲ್ಲ ತೆಗೆದುಕೊಂಡು ಸ್ವದೇಶಕ್ಕೆ ಹಿಂದಿರುಗುವುದಕ್ಕೆ ಮುಂಚೆ ಅಲ್ಲಿ ಅನೇಕರನ್ನು ಕೊಲೆಮಾಡಿದನಲ್ಲದೆ ದುರಹಂಕಾರದ ಮಾತುಗಳನ್ನೂ ಆಡಿದನು. 25ಆಗ ನಾಡಿನಾದ್ಯಂತ ಇಸ್ರಯೇಲಿಗಾಗಿ ಶೋಕಾಚರಣೆಯಿತ್ತು:

26 ದುಃಖದಿಂದ ನರಳಿದರು ಅರಸರು, ಹಿರಿಯರು
ಸೊರಗಿಹೋದರು ಯುವಕಯುವತಿಯರು
ಕಳೆಗುಂದಿಹೋದರು ಹೆಂಗಳೆಯರೆಲ್ಲರು.

27 ಅತ್ತು ಪ್ರಲಾಪಿಸಿದನು ಪ್ರತಿಯೊಬ್ಬ
ಮದುಮಗನು
ಶೋಕಭಾರದಿಂದ ಕುಸಿದಳು ಮನೆಯ
ಮದುಮಗಳು.

28 ನಾಡಿಗೆ ನಾಡೇ ಮರುಗಿತು ತನ್ನ
ನಿವಾಸಿಗಳಿಗಾಗಿ
ಇಸ್ರಯೇಲಿನ ಇಡೀ ಕುಟೀರ ನಾಚಿತು
ಮುಖಮಾಚಿ.

**ಕಪ್ಪವಸೂಲಿಯ ಸೋಗು – ನಗರದ ಲೂಟಿ**

29 ಇದಾಗಿ ಎರಡು ವರ್ಷಗಳಾದನಂತರ ಅರಸ ಅಂತಿಯೋಕನು ಕಪ್ಪವಸೂಲಿಗಾಗಿ
ಮುಖ್ಯಾಧಿಕಾರಿಯನ್ನು ಜುದೇಯದ ಪಟ್ಟಣಗಳಿಗೆ ಕಳುಹಿಸಿದನು. ಇವನು ದೊಡ್ಡ ಜನಸಮೂಹದೊಂದಿಗೆ
ಜೆರುಸಲೇಮಿಗೆ ಬಂದನು. 30ಅವನ ಹೃದಯ ಕಪಟದಿಂದ ಕೂಡಿತ್ತಾದರೂ ಅಲ್ಲಿಯ ಜನರೊಂದಿಗೆ
ಮೊದಮೊದಲು ಶಾಂತಿ ಸಮಾಧಾನದ ಮಾತುಗಳನ್ನು ಆಡಿದನು. ಜನರು ಅವನನ್ನು ನಂಬಿದರು.
ತರುವಾಯ ಅವನು ತಟ್ಟನೆ ಪಟ್ಟಣದ ಮೇಲೆ ಬಿದ್ದು ಲೂಟಿ ಮಾಡಿದನು; ಇಸ್ರಯೇಲರ ಬಹುಜನರನ್ನು
ಸಂಹರಿಸಿದನು. 31ಪಟ್ಟಣವನ್ನು ಸೂರೆಮಾಡಿ, ಅದಕ್ಕೆ ಬೆಂಕಿಹಚ್ಚಿ, ಮನೆಗಳನ್ನೂ ಕೋಟೆಯ
ಗೋಡೆಯನ್ನೂ ಕೆಡವಿಬಿಟ್ಟನು. 32ಇದಲ್ಲದೆ, ಅಲ್ಲಿನ ಹೆಂಗಸರನ್ನೂ ಮಕ್ಕಳನ್ನೂ ಸೆರೆಹಿಡಿದು, ಅವರ
ದನಕರುಗಳನ್ನು ಅವನೂ ಅವನ ಪರಿವಾರದವರೂ ವಶಪಡಿಸಿಕೊಂಡರು. 33ತರುವಾಯ ಅವರು
ಬಲವಾದ ಗೋಡೆ ಹಾಗು ಬುರುಜುಗಳನ್ನು ಕಟ್ಟಿ, ದಾವೀದ ನಗರವನ್ನು ಮತ್ತೆ ನಿರ್ಮಿಸಿದರು. ಅದೇ
ಅವರಿಗೆ ದುರ್ಗವಾಯಿತು. 34ಧರ್ಮಮೀರಿ ನಡೆಯುತ್ತಿದ್ದ ದುಷ್ಕರ್ಮಿಗಳನ್ನು ಅದರೊಳಗೆ
ತಂದಿರಿಸಿಕೊಂಡು ತಮ್ಮ ಪಕ್ಷವನ್ನು ಬಲಪಡಿಸಿಕೊಂಡರು. 35ಅಲ್ಲೇ ಆಯುಧಗಳನ್ನೂ
ಆಹಾರಸಾಮಾಗ್ರಿಗಳನ್ನೂ ಕೂಡಿಸಿಟ್ಟುಕೊಂಡರು. ಜೆರುಸಲೇಮಿನಿಂದ ದೋಚಿಕೊಂಡಿದ್ದ ಕೊಳ್ಳೆಯನ್ನೆಲ್ಲಾ
ಅಲ್ಲೇ ಇರಿಸಿಕೊಂಡರು. ಹೀಗೆ ಆ ದುರ್ಗ, ನಗರಕ್ಕೆ ಮಹಾ ವಿಪತ್ತಾಗಿ ಮಾರ್ಪಟ್ಟಿತು.

36 ಅದಾಯಿತು ಒಂದು ಹೊಂಚುಪಡೆ
ಮಹಾಪವಿತ್ರಾಲಯಕ್ಕೆ
ನಿತ್ಯವೈರಿಗಳಾಗಿ ನಿಂತರವರು ಇಸ್ರಯೇಲರಿಗೆ.
37 ನಿರಪರಾಧಿಗಳ ನೆತ್ತರನು ಸುರಿಸಿದರಾ
ಪವಿತ್ರಾಲಯದ ಸುತ್ತಲು
ಹೊಲಸು ಕೃತ್ಯಗಳಿಂದ ಅಮಂಗಲ ಮಾಡಿದರಾ
ಆಲಯವನು.
38 ಎಂದೇ ಊರುಬಿಟ್ಟು ಓಡಿದರು ಜೆರುಸಲೇಮಿನ
ಜನ
ಅದಾಯಿತು ಮಣ್ಣಿನ ಮಕ್ಕಳಿಗೆ ಪರಸ್ಥಳ.
ಪರಕೀಯರಿಗೆ ವಾಸಸ್ಥಳ.
39 ಮಾರ್ಪಟ್ಟವು, ಪವಿತ್ರಾಲಯ ಅರಣ್ಯವಾಗಿ
ಹಬ್ಬಗಳು ಗೋಳಾಟವಾಗಿ,
ಸಬ್ಬತ್‍ಗಳು ನಿಂದೆದೂಷಣೆಗಳಾಗಿ
ಕೀರ್ತಿಗೌರವಗಳು ಅವಮಾನ
ಅಪಹಾಸ್ಯಗಳಾಗಿ.
40 ಹಿರಿದಾದ ಖ್ಯಾತಿ ತಿರುಗಿತು ಅವಹೇಳನಕೆ
ಉನ್ನತ ಸ್ಥಿತಿ ಇಳಿಯಿತು ಅಧೋಗತಿಗೆ.

ಅನ್ಯಧರ್ಮೀಯರ ಪೂಜಾಪದ್ಧತಿ

41 ತರುವಾಯ ಅರಸ ಅಂತಿಯೋಕನು, "ಎಲ್ಲರು ಒಂದೇ ಜನಾಂಗದಂತೆ ಬಾಳಬೇಕು; 42ಪ್ರತಿಯೊಬ್ಬನು ತನ್ನ ಸ್ವಂತ ಧರ್ಮವನ್ನು ಬಿಟ್ಟುಬಿಡಬೇಕು," ಎಂದು ಪ್ರಕಟಿಸಿದನು. 43ಎಲ್ಲ ಜನಾಂಗದವರು ಅರಸನ ಮಾತಿಗೆ ಓಗೊಟ್ಟಿದ್ದರು. ಇಸ್ರಯೇಲರಲ್ಲಿ ಅನೇಕರು ಅವನ ಪೂಜೆಮಾಡಲು ಒಪ್ಪಿ, ಮೂರ್ತಿಗಳಿಗೆ ಬಲಿ ಅರ್ಪಿಸಿದರು; ಸಬ್ಬತ್‍ದಿನವನ್ನು ಅಪವಿತ್ರಗೊಳಿಸಿದರು. 44ಅರಸನು ಜೆರುಸಲೇಮಿನಲ್ಲೂ ಜುದೇಯದ ಇತರ ಊರುಗಳಲ್ಲೂ ವಾಸಿಸುತ್ತಿದ್ದ ಜನರಿಗೆ ತನ್ನ ಸುದ್ದಿಗಾರರ ಮೂಲಕ ಓಲೆಗಳನ್ನು ಕಳುಹಿಸಿ ಹೀಗೆಂದು ತಿಳಿಸಿದನು: "ನೀವು ನಿಮ್ಮ ನಾಡಿಗೆ ಪರಕೀಯವಾದ ನಿಬಂಧನೆಗಳಿಗೆ ಒಳಗಾಗಬೇಕು. 45ಪವಿತ್ರಾಲಯದಲ್ಲಿ ಅರ್ಪಿತವಾಗುವ ಎಲ್ಲ ದಹನಬಲಿ, ಯಜ್ಞ, ಪಾನದ್ರವ್ಯಾರ್ಪಣೆಗಳನ್ನು ನಿಲ್ಲಿಸಿಬಿಡಬೇಕು; ಸಬ್ಬತ್‍ದಿನಗಳನ್ನೂ ಹಬ್ಬಗಳನ್ನೂ ಪವಿತ್ರ ಎಂದು ಆಚರಿಸಬೇಕಾಗಿಲ್ಲ; 46ಪವಿತ್ರ ಸ್ಥಾನವನ್ನೂ ಪೂಜ್ಯ ವ್ಯಕ್ತಿಗಳನ್ನೂ ಗೌರವಿಸಬೇಕಾಗಿಲ್ಲ; 47ವಿಗ್ರಹಗಳಿಗೆ ಮಂಟಪಗಳನ್ನೂ ಗುಡಿಗುಡಾರಗಳನ್ನೂ ಕಟ್ಟಿಸಬೇಕು; ಹಂದಿಯ ಮಾಂಸದ ಮತ್ತು ಇತರ ಅಶುದ್ಧ ಪ್ರಾಣಿಗಳ ಯಜ್ಞಗಳನ್ನು ಅಲ್ಲಿ ಅರ್ಪಿಸಬೇಕು; 48ಮಕ್ಕಳಿಗೆ ಸುನ್ನತಿ ಮಾಡಿಸಬಾರದು; ಎಲ್ಲ ಬಗೆಯ ಧಾರ್ಮಿಕ ನಿಯಮ ಹಾಗು ಶುದ್ಧಾಚರಣೆಗಳನ್ನು ತೊರೆದುಬಿಡಬೇಕು; 49ಹೀಗೆ ಧರ್ಮಶಾಸ್ತ್ರವನ್ನು ಮರೆತು ಎಲ್ಲ ವಿಧಿನಿಯಮಗಳನ್ನು ಬದಲುಮಾಡಿಕೊಳ್ಳಬೇಕು; 50ಅರಸನ ಈ ಶಾಸನಕ್ಕೆ ಸರಿಯಾಗಿ ಯಾರು ನಡೆದುಕೊಳ್ಳುವುದಿಲ್ಲವೋ ಅವರಿಗೆ ಮರಣ ದಂಡನೆ ಆಗುವುದು," ಎಂದು ಅರುಹಿಸಿದನು.

51 ಇದೇ ಮೇರೆಗೆ ತನ್ನ ರಾಜ್ಯದ ಎಲ್ಲಾ ಕಡೆಗೂ ಬರೆದು ಕಳುಹಿಸಿದನು. ಎಲ್ಲಾ ಜನರ ಮೇಲೆಯೂ ಮೇಲ್ವಿಚಾರಕರನ್ನು ನೇಮಿಸಿದನು. ಜುದೇಯದ ಊರುಗಳಲ್ಲಿ, ಒಂದಾದ ಮೇಲೊಂದು ಎಲ್ಲರು ಅನ್ಯಧರ್ಮೀಯ ಯಜ್ಞಗಳನ್ನು ಒಪ್ಪಿಸಬೇಕೆಂದು ಆಜ್ಞಾಪಿಸಿದನು. 52ಯೆಹೂದ್ಯರಲ್ಲಿ ಅನೇಕರು ಧರ್ಮಶಾಸ್ತ್ರವನ್ನು ಮೀರಿ, ಅನ್ಯರೊಂದಿಗೆ ಕೂಡಕೊಂಡು, ನಾಡಿನಲ್ಲಿ ಆ ದುಷ್ಟತನವನ್ನು ನಡೆಸಲು ಹಿಂಜರಿಯಲಿಲ್ಲ. 53ಇದರಿಂದಾಗಿ, ಧರ್ಮನಿಷ್ಠ ಇಸ್ರಯೇಲರು ಆಶ್ರಯ ದೊರೆತಲ್ಲಿಗೆ ಹೋಗಿ ಅವಿತುಕೊಳ್ಳಬೇಕಾಯಿತು.

54 145ನೇ ವರ್ಷದ ಮಾರ್ಗಶಿರ ಮಾಸದ ಹದಿನೈದನೆಯ ದಿನದಂದು 'ವಿನಾಶಕರ ವಿಕಟ ಮೂರ್ತಿ'ಯನ್ನು ಬಲಿಪೀಠದ ಮೇಲೆ ಸ್ಥಾಪಿಸಿದನು. ಜುದೇಯದ ಊರುಕೇರಿಗಳಲ್ಲಿ ಎಲ್ಲೆಲ್ಲೂ ವಿಗ್ರಹಗಳಿಗೆ ಪೀಠಗಳನ್ನು ನಿರ್ಮಿಸಲಾಯಿತು. 55ಮನೆಯ ಬಾಗಿಲುಗಳಲ್ಲೂ ಊರಬೀದಿಗಳಲ್ಲೂ ಧೂಪಾರತಿಗಳನ್ನು ಎತ್ತಿಸಲಾಯಿತು. 56ಕೈಗೆ ಸಿಕ್ಕಿದ ಧರ್ಮಶಾಸ್ತ್ರ ಗ್ರಂಥಗಳನ್ನು ಹರಿದು ಬೆಂಕಿಗೆ ಹಾಕಲಾಯಿತು. 57ಯಾರಾರಲ್ಲಿ ಒಡಂಬಡಿಕೆಯ ಗ್ರಂಥವಿತ್ತೋ ಯಾರಾರು ಧರ್ಮಶಾಸ್ತ್ರಕ್ಕೆ ಬದ್ಧರಾಗಿದ್ದರೋ ಅವರನ್ನು ರಾಜಾಜ್ಞೆಯಂತೆ ಮರಣಕ್ಕೆ ಗುರಿಮಾಡಲಾಯಿತು. 58ಹೀಗೆ ಪಟ್ಟಣಗಳಲ್ಲಿ ಸಿಕ್ಕಿಬಿದ್ದ ಇಸ್ರಯೇಲರೆಲ್ಲರಿಗು, ತಿಂಗಳಾದ ಮೇಲೆ ತಿಂಗಳು, ಅಧಿಕಾರಬಲದಿಂದ ಶಿಕ್ಷೆ ವಿಧಿಸುತ್ತಾ ಬಂದನು.

59 ಇದಲ್ಲದೆ, ದೇವರ ಬಲಿಪೀಠದ ಮೇಲೆ ಕಟ್ಟಲಾಗಿದ್ದ ವಿಗ್ರಹವೇದಿಕೆಯ ಮೇಲೆ, ಅದೇ ತಿಂಗಳಿನ ಇಪ್ಪತ್ತೈದನೆಯ ದಿನದಂದು ಆ ದುಷ್ಟ ಜನರು ಬಲಿಯನ್ನು ಅರ್ಪಿಸಿದರು. 60ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಿದ್ದ ತಾಯಂದಿರನ್ನೆಲ್ಲಾ ರಾಜಾಜ್ಞೆಗನುಸಾರ ಕೊಂದುಹಾಕಿ, ಆ ಕೂಸುಗಳನ್ನು ಅವರ ಕುತ್ತಿಗೆಗೇ ನೇತು ಹಾಕಿದರು. 61ಅವರ ಮನೆಗಳನ್ನು ಹಾಳುಮಾಡಿ, ಸುನ್ನತಿಮಾಡಿದವರನ್ನು ಸಂಹರಿಸಿದರು.

62 ಆದರೂ ಇಸ್ರಯೇಲರಲ್ಲಿ ಅನೇಕರು ರಾಜಾಜ್ಞೆಯನ್ನು ಪ್ರತಿಭಟಿಸಿ, ಅಶುದ್ಧ ಆಹಾರವನ್ನು ತಿನ್ನಲು ನಿರಾಕರಿಸಿದರು. 63ಪವಿತ್ರ ಒಡಂಬಡಿಕೆಯನ್ನು ಮೀರಿ ಅಂಥ ಆಹಾರವನ್ನು ತಿನ್ನುವುದಕ್ಕಿಂತ ಸಾಯುವುದೇ ಲೇಸೆಂದು ಎಣಿಸಿ ಸಾವಿಗೆ ಸಿದ್ಧರಾದರು. ಅಂತೆಯೇ ಹಲವರು ಪ್ರಾಣತ್ಯಾಗ ಮಾಡಿದರು. 64ಆಗ ಭೀಕರ ಕೋಪಾಗ್ನಿ ಇಸ್ರಯೇಲಿನ ಮೇಲೆ ಉರಿಯ ಹತ್ತಿತು.

## ಮತ್ತಾತಿಯನ ಧರ್ಮನಿಷ್ಠೆ

**2** ಆ ದಿನಗಳಲ್ಲಿ ಮತ್ತಾತಿಯ ಎಂಬ ಒಬ್ಬನಿದ್ದನು. ಇವನು ಜೆರುಸಲೇಮಿನ ಯೆಹೋಯಾರೀಬನ
ಸಂತತಿಗೆ ಸೇರಿದ ಯಾಜಕ ಸಿಮೆಯೋನನ ಮೊಮ್ಮಗ ಹಾಗು ಯೊವಾನ್ನನ ಮಗ. ಈ ಮತ್ತಾತಿಯನು
ಮೋದಿನ್ ಎಂಬಲ್ಲಿ ವಾಸಮಾಡುತ್ತಿದ್ದನು. 2ಇವನಿಗೆ ಐವರು ಮಕ್ಕಳು: ಗದ್ದೀ ಎಂಬ ಯೊವಾನ್ನ, 3ತಸ್ಸೀ
ಎಂಬ ಸಿಮೋನ, 4ಮಕ್ಕಬಿ ಎಂಬ ಯೂದ, 5ಅವ್ರಾನ್ ಎಂಬ ಎಲ್ಲಾಜರ್ ಮತ್ತು ಅಫಸ್ ಎಂಬ
ಯೋನಾತನ ಇವರೇ.

6 ಜುದೇಯದಲ್ಲೂ ಜೆರುಸಲೇಮಿನಲ್ಲೂ ನಡೆಯುತ್ತಿದ್ದ ದೇವದೂಷಣಾಕಾರ್ಯಗಳನ್ನು
ಮತ್ತಾತಿಯನು ನೋಡಿದ್ದನು. 7ಆಗ ಅವನು ಮನಮರುಗಿ:

"ಅಯ್ಯೋ ನಾನು ಹುಟ್ಟಿದುದೇಕೆ?
ನನ್ನ ಜನರ ಹಾಗು ಪರಿಶುದ್ಧ ನಗರದ ಅಳಿವನ್ನು
ನಾನು ನೋಡಬೇಕಾಯಿತಲ್ಲಾ;
ಊರು ಶತ್ರುವಶವಾದ ಮೇಲೆ ನಾನಿಲ್ಲಿ
ವಾಸಮಾಡಬೇಕಾಯಿತಲ್ಲಾ;
ಮಹಾಪವಿತ್ರಾಲಯವೂ ಪರಕೀಯರ
ಪಾಲಾಯಿತಲ್ಲಾ;
8 ಪವಿತ್ರಾಲಯ ಮಾನಹೀನ
ಮನುಷ್ಯನಂತಾಯಿತಲ್ಲಾ;
9 ಅದರ ಅಮೂಲ್ಯ ಪಾತ್ರೆಗಳು
ಕೊಳ್ಳೆಯಾದುವಲ್ಲಾ;
ಅದರ ಹಸುಗೂಸುಗಳೂ ಹಾದಿಬೀದಿಯಲ್ಲಿ
ಹತವಾದುವಲ್ಲಾ;
10 ಅದರ ಯುವಕರು ವೈರಿಗಳ ಕತ್ತಿಗೆ
ತುತ್ತಾದರಲ್ಲಾ;
ಅದರ ಅರಮನೆಗಳನ್ನು ವಶಪಡಿಸಿಕೊಳ್ಳದ
ಜನಾಂಗವುಂಟೇ?
ಅದರ ಕೊಳ್ಳೆಯನ್ನು ಹಂಚಿಕೊಳ್ಳದ
ಜನಾಂಗವುಂಟೇ?
11 ಸುಲಿಗೆಯಾಗಿ ಹೋಯಿತು ಅದರ
ಸಿಂಗಾರವೆಲ್ಲಾ
ಸ್ವಾತಂತ್ರ್ಯವಿಲ್ಲದ ತೊತ್ತಿನಂತಾಯಿತು
ನಗರವೆಲ್ಲಾ;
12 ನಶಿಸಿಹೋಗಿವೆ ನೋಡಿ, ನಮ್ಮ ಒಡವೆ
ವಸ್ತುಗಳು
ನಮ್ಮ ಸರ್ವಸೌಂದರ್ಯ ವೈಭವಾದಿಗಳು;
13 ಅನ್ಯರು ಅವುಗಳನ್ನು ಅಶುದ್ಧಮಾಡಿದ ಮೇಲೆ
ಇನ್ನು ನಾವು ಜೀವಿಸುವುದಾದರು ಏತಕ್ಕೆ?"

14 ಹೀಗೆ ಮನನೊಂದುಕೊಂಡರು ಮತ್ತಾತಿಯನು ಮತ್ತು ಅವನ ಮಕ್ಕಳು. ಮಾತ್ರವಲ್ಲ,
ದುಃಖದಿಂದ ತಮ್ಮ ಬಟ್ಟೆಗಳನ್ನು ಹರಿದುಕೊಂಡು, ಗೋಣಿತಟ್ಟನ್ನು ಉಟ್ಟುಕೊಂಡು ಬಹಳವಾಗಿ
ಗೋಳಾಡಿದರು.

## ಮೋದೀನ್ ಊರಿನಲ್ಲಿ ವಿಷಮ ಪರೀಕ್ಷೆ

15 ಅದೇ ಸಮಯಕ್ಕೆ ಧರ್ಮವಿರೋಧ ಕಾರ್ಯಗಳಲ್ಲಿ ತೊಡಗಿದ್ದ ಅರಸನ ಅಧಿಕಾರಿಗಳು ಯಜ್ಞ ಅರ್ಪಿಸುವುದಕ್ಕಾಗಿ ಮೋದೀನ್ ಊರಿಗೆ ಬಂದರು. 16ಅನೇಕ ಜನ ಇಸ್ರಯೇಲರು ಅದೇ ಎಡೆಗೆ ಬಂದರು. ಮತ್ತಾತಿಯನೂ ಅವನ ಮಕ್ಕಳೂ ಅಲ್ಲಿಗೆ ಬಂದರು. 17ಅರಸನ ಅಧಿಕಾರಿಗಳು ಮತ್ತಾತಿಯನನ್ನು ಉದ್ದೇಶಿಸಿ, "ನೀನು ಈ ಊರಿಗೆ ಮುಖ್ಯಸ್ಥ, ಸನ್ಮಾನಿತ ಹಾಗು ಹಿರಿಯವನು. ನಿನ್ನ ಮಕ್ಕಳ ಹಾಗು ಬಂಧುಬಳಗದವರ ಬೆಂಬಲ ನಿನಗಿದೆ. 18ಆದುದರಿಂದ ನೀನೇ ಮುಂದಾಳಾಗಿ ನಿಂತು, ಎಲ್ಲ ಜನಾಂಗದವರು, ಜುದೇಯದ ನಿವಾಸಿಗಳು ಹಾಗು ಜೆರುಸಲೇಮಿನಲ್ಲಿ ಉಳಿದಿರುವವರು ಮಾಡಿದಂತೆ, ಅರಸನ ಅಪ್ಪಣೆಯ ಮೇರೆಗೆ ನಡೆದುಕೋ; ಆಗ ನೀನೂ ನಿನ್ನ ಮನೆಯವರೂ ಅರಸನ ಮಿತ್ರರೆಂದು ಪರಿಗಣಿತರಾಗುವಿರಿ; ನಿನಗೂ ನಿನ್ನ ಮಕ್ಕಳಿಗೂ ಬೆಳ್ಳಿ, ಬಂಗಾರ ಮತ್ತಿತರ ಸಂಭಾವನೆಗಳನ್ನು ಗೌರವಾರ್ಥವಾಗಿ ಕೊಡಲಾಗುವುದು," ಎಂದು ಹೇಳಿದರು. 19ಆಗ ಮತ್ತಾತಿಯನು ಉದ್ವೇಗದಿಂದ, "ಅರಸನ ಸಾಮ್ರಾಜ್ಯದಲ್ಲಿರುವ ಎಲ್ಲ ಜನಾಂಗಗಳು ಬೇಕಾದರೆ ಆತನ ಮಾತನ್ನು ಕೇಳಲಿ; ಪ್ರತಿಯೊಬ್ಬನು ತನ್ನ ಪೂರ್ವಜರ ಪೂಜಾಕ್ರಮಗಳನ್ನು ತೊರೆದು, ಅರಸನ ಆಜ್ಞೆಯ ಮೇರೆಗೆ ಬೇಕಾದರೆ ನಡೆಯಲಿ; 20ಆದರೆ ನಾನು, ನನ್ನ ಮಕ್ಕಳು, ನನ್ನ ಬಂಧುಬಳಗದವರು ನಮ್ಮ ಪಿತೃಗಳ ಒಡಂಬಡಿಕೆಯ ಪ್ರಕಾರವೇ ನಡೆಯುತ್ತೇವೆ. 21ಧರ್ಮಶಾಸ್ತ್ರದ ನಿಬಂಧನೆಗಳನ್ನು ನಾವು ಉಲ್ಲಂಘಿಸಲಾರೆವು. ಇಲ್ಲ, ಎಂದಿಗೂ ಇಲ್ಲ; 22ಅರಸನ ಮಾತನ್ನು ಕೇಳಿ, ನಾವು ನಮ್ಮ ಆರಾಧನಾ ವಿಧಿಗಳನ್ನು ಬಿಟ್ಟು ಎಡಕ್ಕಾಗಲಿ, ಬಲಕ್ಕಾಗಲಿ ಹೋಗುವುದಿಲ್ಲ," ಎಂದು ಗಟ್ಟಿಯಾಗಿ ಹೇಳಿದನು.

23 ಅವನು ಈ ಮಾತುಗಳನ್ನಾಡಿ ಮುಗಿಸುವಷ್ಟರಲ್ಲಿ ಒಬ್ಬ ಯೆಹೂದ್ಯನು, ಮೋದೀನದ ಒಂದು ಜಗಲಿಯ ಮೇಲೆ ಅರಸನ ಅಪ್ಪಣೆಯ ಮೇರೆಗೆ ಏರ್ಪಡಿಸಲಾಗಿದ್ದ ಯಜ್ಞವನ್ನು ಅರ್ಪಿಸಲು ಅಲ್ಲಿಗೆ ಬಂದು ಎಲ್ಲರ ಮುಂದೆ ನಿಂತನು. 24ಮತ್ತಾತಿಯನು ಅದನ್ನು ನೋಡಿ ಆವೇಶಪೂರಿತನಾದನು; ಅವನ ಮೈ ನಡುಗಿತು. ನ್ಯಾಯ ಪ್ರಮಾಣಕ್ಕನುಸಾರ ತನ್ನ ಕೋಪವನ್ನು ತೋರಿಸಲು ಓಡಿಹೋಗಿ, ಅದೇ ಜಗಲಿಯ ಮೇಲೆ ಆ ವ್ಯಕ್ತಿಯನ್ನು ಕಡಿದುಹಾಕಿದನು. 25ಅಂಥ ಯಜ್ಞವನ್ನು ಅರ್ಪಿಸಲು ಜನರನ್ನು ಒತ್ತಾಯಪಡಿಸಿದ್ದ ಅಧಿಕಾರಿಯನ್ನು ಕೂಡ ಕೊಂದುಹಾಕಿದನು; ಆ ಜಗಲಿಯನ್ನೂ ಕೆಡವಿಹಾಕಿದನು. 26ಸಾಲು ಎಂಬವನ ಮಗ ಜಿಮ್ರಿಯೆಂಬವನಿಗೆ ಫಿನೆಹಾಸನು ಮಾಡಿದಂತೆಯೇ ಇವನೂ ಧರ್ಮಶಾಸ್ತ್ರದ ಬಗ್ಗೆ ಅಭಿಮಾನವುಳ್ಳವನಾಗಿದ್ದನು.

## ಮತ್ತಾತಿಯನು ನಡೆಸಿದ ಕಾಳಗ–ಅಡವಿಯಲ್ಲಿ ಸಬ್ಬತ್ ಆಚರಣೆ

27 ತರುವಾಯ ಮತ್ತಾತಿಯನು ಊರಲ್ಲೆಲ್ಲಾ ಘಂಟಾಘೋಷವಾಗಿ, "ಧರ್ಮಶಾಸ್ತ್ರದ ಬಗ್ಗೆ ಅಭಿಮಾನವುಳ್ಳವನು, ಒಡಂಬಡಿಕೆಯನ್ನು ಕಾಪಾಡಿಕೊಳ್ಳಲು ಆಶಿಸುವವನು, ನನ್ನ ಹಿಂದೆ ಬರಲಿ," ಎಂದು ಕರೆಕೊಟ್ಟನು. 28ಅನಂತರ ಅವನೂ ಅವನ ಮಕ್ಕಳೂ ಊರಲ್ಲಿ ತಮಗಿದ್ದುದನ್ನೆಲ್ಲ ಅಲ್ಲೇ ಬಿಟ್ಟು ಗುಡ್ಡಗಳಿಗೆ ಓಡಿಹೋದರು. 29ಇವರಂತೆಯೇ ನ್ಯಾಯನೀತಿಯನ್ನು ಅರಸುತ್ತಿದ್ದ ಅನೇಕರು ಕಾಡುಸೇರಿ ಅಲ್ಲೇ ಬೀಡುಮಾಡಿದರು. 30ಅವರೊಂದಿಗೆ ಅವರ ಮಡದಿ ಮಕ್ಕಳು, ದನಕರುಗಳೂ ಹೊರಟವು. ಅವರಿಗೆ ಬಂದೊದಗಿದ ಕಷ್ಟಸಂಕಟಗಳು ಅಷ್ಟು ಅಗಾಧವಾಗಿದ್ದವು. ಅರಸನ ಅಪ್ಪಣೆಯನ್ನು ಉಲ್ಲಂಘಿಸಿದ ಕೆಲವು ಜನರು ಅಡವಿಯಲ್ಲಿನ ಗುಪ್ತಸ್ಥಳಗಳಿಗೆ ಹೋಗುತ್ತಿದ್ದಾರೆಂಬ ಸುದ್ದಿ ಜೆರುಸಲೇಮಿನಲ್ಲಿದ್ದ ಅಂದರೆ, ದಾವೀದ ನಗರದಲ್ಲಿದ್ದ ಅಧಿಪತಿಗಳಿಗೂ ಸೈನಿಕರಿಗೂ ಮುಟ್ಟಿತು. 31ಕೂಡಲೆ ಅವರು ಆ ಜನರನ್ನು ಬೆನ್ನಟ್ಟಿ, ಸಂಧಿಸಿ, ಅವರಿಗೆ ಎದುರಾಗಿಯೇ ಪಾಳೆಯ ಮಾಡಿದರು. 32ಸಬ್ಬತ್ ದಿನದಲ್ಲೇ ಅವರಿಗೆ ವಿರುದ್ಧ ಯುದ್ಧ ಸನ್ನದ್ಧರಾದರು. 33"ನಡೆದದ್ದು ನಡೆದು ಹೋಯಿತು, ಈಗಲಾದರೂ ಹೊರಗೆಬಂದು ಅರಸನ ಅಪ್ಪಣೆ ಮೇರೆಗೆ ನಡೆಯಿರಿ; ಆಗ ನೀವು ಬದುಕುವಿರಿ," ಎಂದು ಆ ಜನರನ್ನು ಪುಸಲಾಯಿಸಿದರು. 34ಅದಕ್ಕೆ ಅವರು, "ನಾವು ಹೊರಗೆ ಬರುವುದಿಲ್ಲ; ಅರಸನ ಮಾತಿನಂತೆ ನಡೆದು ಸಬ್ಬತ್‌ದಿನವನ್ನು ಅಪವಿತ್ರ ಮಾಡುವುದಿಲ್ಲ," ಎಂದು ಉತ್ತರಕೊಟ್ಟರು. 35ಕೂಡಲೇ ಶತ್ರುಗಳು ಅವರ ಮೇಲೆ ಯುದ್ಧ ಮಾಡಲಾರಂಭಿಸಿದರು. 36ಯೆಹೂದ್ಯರೋ ಅದಕ್ಕೆ ಯಾವ ಪ್ರತೀಕಾರವನ್ನೂ ತೋರಿಸಲಿಲ್ಲ. ಆ ಶತ್ರುಗಳ

ಮೇಲೆ ಒಂದು ಕಲ್ಲನ್ನೂ ಬೀಸಲಿಲ್ಲ. ತಾವಿದ್ದ ಗುಪ್ತಸ್ಥಳಗಳನ್ನು ಮುಚ್ಚಿಕೊಳ್ಳಲೂ ಇಲ್ಲ. 37ಬದಲಿಗೆ ಅವರು, "ನಾವು ನಿರ್ದೋಷಿಗಳು, ನಿರ್ದೋಷಿಗಳಾಗಿಯೇ ಪ್ರಾಣಬಿಡೋಣ; ನೀವಾದರೋ ವಿಚಾರಣೆಮಾಡದೆ ನಮ್ಮನ್ನು ಕೊಲ್ಲುತ್ತಾ ಇದ್ದೀರಿ; ಇದಕ್ಕೆ ಆಕಾಶ ಭೂಮಿಗಳೇ ಸಾಕ್ಷಿ," ಎಂದುಕೊಂಡರು. 38ಶತ್ರುಗಳು ಹೊರಗೆ ಬಂದು ಸಬ್ಬತ್‍ದಿನದಲ್ಲೇ ಅವರಿಗೆ ವಿರುದ್ಧ ಯುದ್ಧ ಹೂಡಿದರು. ಆ ದಿನ ತಮ್ಮ ಮಡದಿ ಮಕ್ಕಳ ಹಾಗು ದನಕರುಗಳ ಸಮೇತ ಹತರಾದ ಯೆಹೂದ್ಯರು ಸುಮಾರು ಸಾವಿರ ಮಂದಿ.

## ಮತ್ತಾತಿಯನ ಹಾಗು ಅವನ ಸಂಗಡಿಗರ ಧರ್ಮನಿಷ್ಠೆ

39 ಮತ್ತಾತಿಯನೂ ಅವನ ಸ್ನೇಹಿತರೂ ಈ ಸುದ್ದಿಯನ್ನು ಕೇಳಿ ಸತ್ತವರಿಗಾಗಿ ಬಹಳವಾಗಿ ಗೋಳಾಡಿದರು. 40"ನಮ್ಮ ಪ್ರಾಣರಕ್ಷಣೆಗಾಗಿ ಹಾಗು ಆಜ್ಞಾವಿಧಿಗಳ ಪರವಾಗಿ ನಮ್ಮ ಸಹೋದರರಂತೆ ನಾವೂ ಈ ಅನ್ಯಜನರ ಸಂಗಡ ಯುದ್ಧಮಾಡದೆ ಬಿಟ್ಟರೆ ಇವರು ಸ್ವಲ್ಪ ಕಾಲದಲ್ಲೇ ನಮ್ಮನ್ನೂ ನಾಶಮಾಡಿ, ನಾವು ಭೂಮಿಯ ಮೇಲಿಂದ ಕಣ್ಮರೆಯಾಗುವಂತೆ ಮಾಡುವರು," ಎಂದು ಒಬ್ಬರ ಸಂಗಡ ಒಬ್ಬರು ಮಾತಾಡಿಕೊಂಡರು. 41ಹೀಗೆ ಎಲ್ಲರೂ ಸಮಾಲೋಚನೆ ಮಾಡಿ, "ಸಬ್ಬತ್ ದಿನದಲ್ಲಿ ಯಾರಾದರು ನಮ್ಮ ವಿರುದ್ಧ ಯುದ್ಧಮಾಡಲು ಬಂದರೆ ನಾವೂ ಯುದ್ಧ ಮಾಡಬೇಕು; ಗುಪ್ತಸ್ಥಳಗಳಲ್ಲಿ ನಮ್ಮ ಸಹೋದರರು ಸತ್ತುಹೋದಂತೆ ನಾವೂ ಸಾಯಬಾರದು," ಎಂದು ತೀರ್ಮಾನಿಸಿಕೊಂಡರು. 42ಇದಾದಮೇಲೆ ಇಸ್ರಯೇಲರ ಬಲಾಢ್ಯ ಪುರುಷರಾದ ಹಸಿದಿಯರ ಗುಂಪೊಂದು ಇವರನ್ನು ಕೂಡಕೊಂಡಿತು. ಇವರಲ್ಲಿ ಪ್ರತಿಯೊಬ್ಬನು ಧರ್ಮಶಾಸ್ತ್ರಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡಿದ್ದನು. 43ಅಂತೆಯೇ ಹಿಂಸೆಬಾಧೆಗಳಿಂದ ತಲೆತಪ್ಪಿಸಿಕೊಂಡು ಓಡಿಹೋಗುತ್ತಿದ್ದ ಜನರೆಲ್ಲರು ಅವರನ್ನು ಸೇರಿಕೊಂಡು ಅವರಿಗೆ ಬೆಂಬಲವಾದರು. 44ಹೀಗೆ ಅವರು ಒಂದು ಸೈನ್ಯವನ್ನೇ ಕಟ್ಟಿಕೊಂಡು ಕೋಪೋದ್ರೇಕದಿಂದ ಪಾಪಾತ್ಮರೂ ಅಧರ್ಮಿಗಳೂ ಆದವರ ಮೇಲೆ ದಾಳಿಮಾಡಿದರು. ತಪ್ಪಿಸಿಕೊಂಡವರು ಆಶ್ರಯಕ್ಕಾಗಿ ಅನ್ಯಜನಗಳ ಬಳಿಗೆ ಓಡಿಹೋದರು. 45ಮತ್ತಾತಿಯನು ಮತ್ತು ಅವನ ಸ್ನೇಹಿತರು ಸುತ್ತಮುತ್ತಲು ಹೋಗಿ ಯಜ್ಞವೇದಿಗಳನ್ನು ಕೆಡವಿಹಾಕಿದರು. 46ಇಸ್ರಯೇಲಿನ ಪ್ರದೇಶಗಳಲ್ಲಿ ಸಿಕ್ಕಿದಷ್ಟು ಸುನ್ನತಿಯಿಲ್ಲದ ಮಕ್ಕಳನ್ನು ಹಿಡಿದು ಬಲವಂತವಾಗಿ ಅವರಿಗೆ ಸುನ್ನತಿಮಾಡಿದರು. 47ಸೊಕ್ಕಿನ ಅಧಿಕಾರಿಗಳನ್ನು ಬೆನ್ನಟ್ಟಿ ವಿಜಯ ಸಾಧಿಸಿದರು. 48ಅನ್ಯರ ಕೈಯಿಂದಲೂ ಅರಸನ ಕೈಯಿಂದಲೂ ಧರ್ಮವನ್ನು ಬಿಡುಗಡೆಮಾಡಿದರು. ಪಾಪಾತ್ಮರು ಜಯಗಳಿಸಲು ಬಿಡಲಿಲ್ಲ.

## ಮತ್ತಾತಿಯನ ಮರಣ

49 ಮತ್ತಾತಿಯನ ಮರಣಕಾಲ ಸಮೀಪಿಸಿತು. ಅವನು ತನ್ನ ಮಕ್ಕಳನ್ನು ಕರೆದು, "ಸೊಕ್ಕು, ನಿಂದೆ ದೂಷಣೆಗಳು ಹೆಚ್ಚುತ್ತಿರುವ ಕಾಲವಿದು; ನಮ್ಮ ಅವನತಿಯ ಸಮಯ; ಕೋಪ ವಿಕೋಪಕ್ಕೆ ಏರುವ ವೇಳೆ. 50ಆದುದರಿಂದ, ನನ್ನ ಮಕ್ಕಳೇ, ಧರ್ಮಶಾಸ್ತ್ರದ ಅಭಿಮಾನಿಗಳಾಗಿರಿ. ನಿಮ್ಮ ಪಿತೃಗಳ ಒಡಂಬಡಿಕೆಗಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗಿರಿ. 51ನಮ್ಮ ಪೂರ್ವಜರು ಅವರವರ ಕಾಲದಲ್ಲಿ ಮಾಡಿದ ಕಾರ್ಯಗಳನ್ನು ಸ್ಮರಣೆಗೆ ತಂದುಕೊಳ್ಳಿ. ನೀವೂ ಮಹಾಕೀರ್ತಿಯನ್ನು ಸಂಪಾದಿಸಿಕೊಳ್ಳಿ, ಶಾಶ್ವತವಾದ ಹೆಸರನ್ನು ಗಳಿಸಿಕೊಳ್ಳಿ.

52 "ಅಬ್ರಹಾಮನು ಪರೀಕ್ಷೆಗೆ ಗುರಿಯಾದಾಗ
    ನಂಬಿಗಸ್ತನಾಗಿ ಕಂಡುಬರಲಿಲ್ಲವೆ?
  ಅದು ಸತ್ಸಂಬಂಧವಾಗಿ
    ಪರಿಗಣಿಕೆಯಾಗಲಿಲ್ಲವೆ?
53 ಜೋಸೆಫನು ತನ್ನ ಇಕ್ಕಟ್ಟಿನ ಕಾಲದಲ್ಲಿ
    ದೇವರ ಆಜ್ಞೆಯನ್ನು ಪಾಲಿಸಿದ;
  ಆದುದರಿಂದಲೆ ಈಜಿಪ್ಟಿಗೆ ದೊರೆಯಾದ.
54 ನಮ್ಮ ತಂದೆ ಫಿನೆಹಾಸನು
    ಮಹಾಭಿಮಾನಿಯಾಗಿದ್ದ;
  ಆದ್ದರಿಂದಲೆ ಶಾಶ್ವತ ಯಾಜಕತ್ವದ

ಒಡಂಬಡಿಕೆಯನ್ನು ಪಡೆದುಕೊಂಡ.
55 ಯೆಹೋಶುವನು ದೇವರ ಮಾತಿನಂತೆ
ನಡೆದ;
ಆದ್ದರಿಂದಲೆ ಇಸ್ರಯೇಲರಲ್ಲಿ
ನ್ಯಾಯಸ್ಥಾಪಕನಾದ.
56 ಕಾಲೇಬನು ಸಭೆಯಲ್ಲಿ ಸಾಕ್ಷಿಕೊಟ್ಟ;
ಆದ್ದರಿಂದಲೆ ನಾಡಿನಲ್ಲಿ ಸೊತ್ತನ್ನು
ಪಡೆದುಕೊಂಡ.
57 ದಾವೀದನು ಕರುಣೆ ತೋರಿಸಿದ;
ಆದ್ದರಿಂದಲೆ ಸಾಮ್ರಾಜ್ಯದ ಸೊತ್ತನ್ನು
ಶಾಶ್ವತವಾಗಿ ಪಡೆದುಕೊಂಡ.
58 ಎಲೀಯನು ಧರ್ಮಶಾಸ್ತ್ರದ ವಿಷಯದಲ್ಲಿ
ಅತ್ಯಾಸಕ್ತಿಯುಳ್ಳವನಾಗಿದ್ದ;
ಆದ್ದರಿಂದಲೆ ಪರಲೋಕಕ್ಕೆ ಒಯ್ಯಲ್ಪಟ್ಟ.
59 ಹನನ್ಯ, ಅಜರ್ಯ, ಮಿಶಾಯೇಲರು
ನಂಬಿಗಸ್ತರಾಗಿದ್ದರು;
ಆದ್ದರಿಂದಲೆ ಬೆಂಕಿಯಿಂದ ಸುರಕ್ಷಿತರಾದರು.
60 ದಾನಿಯೇಲನು ನಿರ್ದೋಷಿಯಾಗಿದ್ದ;
ಆದ್ದರಿಂದಲೆ ಸಿಂಹಗಳ ಬಾಯಿಂದ
ಸುರಕ್ಷಿತನಾದ.
61 ಹೀಗೆ ಆಯಾ ತಲೆಮಾರುಗಳನ್ನು ಆಲೋಚಿಸಿ
ದೇವರ ಮೇಲೆ ನಿರೀಕ್ಷೆಯಿಡುವವರು
ಎಂದಿಗೂ ನಿರ್ಬಲರಾಗುವುದಿಲ್ಲವೆಂದು
ತಿಳಿಯಿರಿ.
62 ಪಾಪಾತ್ಮನ ಮಾತುಗಳಿಗೆ ಅಂಜಬೇಡಿ;
ಅವನ ಗೌರವ ತಿಪ್ಪೆಹುಳುಗಳ
ಪಾಲಾಗುವುದು.
63 ಇಂದು ಅವನು ಮೇಲೇರುತ್ತಾನೆ;
ನಾಳೆ ಯಾವ ರೀತಿಯಲ್ಲೂ
ಕಾಣದೆಹೋಗುತ್ತಾನೆ;
ಕಾರಣ, ತನ್ನ ಮಣ್ಣಿಗೆ ಮರಳುತ್ತಾನೆ;
ಅವನ ಆಲೋಚನೆಗಳೆಲ್ಲಾ ಲಯವಾಗುತ್ತವೆ.
64 ಮಕ್ಕಳೇ, ನೀವಾದರೋ ಧೈರ್ಯದಿಂದಿರಿ
ಧರ್ಮಶಾಸ್ತ್ರದ ಬಗ್ಗೆ ಶೂರರಾಗಿರಿ
ಇದರಲ್ಲೆ ನೀವು ಕೀರ್ತಿಯನ್ನು ಪಡೆಯುವಿರಿ.

65 “ನಿಮ್ಮ ಅಣ್ಣ ಸಿಮೋನನು ವಿಚಾರವಂತನೆಂದು ನಾನು ಬಲ್ಲೆ; ಯಾವಾಗಲು ಅವನ ಮಾತಿಗೆ ಗಮನದಿಂದ ಕಿವಿಗೊಡಿ. ಅವನು ನಿಮಗೆ ತಂದೆಯಂತೆ ಇರುವನು. 66ಯೂದ ಮಕ್ಕಬಿಯನು ಯೌವನಾರಭ್ಯ ಗಟ್ಟಿಗ ಮತ್ತು ಬಲಶಾಲಿ. ಅವನು ನಿಮ್ಮ ಸೇನಾನಾಯಕನಾಗಿ ಇರಲಿ. ಅವನೇ ನಿಮ್ಮ ಜನರ ಯುದ್ಧಗಳನ್ನು ನಡೆಸುವನು. 67ಧರ್ಮಶಾಸ್ತ್ರದ ಅಧೀನರನ್ನೆಲ್ಲ ನಿಮ್ಮ ಕಡೆಗೆ ಸೇರಿಸಿಕೊಂಡು ನಿಮ್ಮ

ಜನಾಂಗಕ್ಕೆ ಆದ ಅನ್ಯಾಯದ ಸೇಡನ್ನು ತೀರಿಸಿಕೊಳ್ಳಿ. ಅನ್ಯರಿಗೆ ಮುಯ್ಯಿತೀರಿಸಿರಿ. 68ಧರ್ಮಶಾಸ್ತ್ರದ
ನಿಬಂಧನೆಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿ."

69 ಹೀಗೆ ಮತ್ತಾತಿಯನು ತನ್ನ ಮಕ್ಕಳನ್ನು ಆಶೀರ್ವದಿಸಿ, ನಿಧನನಾಗಿ ತನ್ನ ಪಿತೃಗಳ ಬಳಿಗೆ ಸೇರಿದನು. 146ನೇ ವರ್ಷದಲ್ಲಿ ಅವನು ಕಾಲವಾದನು. ಅವನ ಮಕ್ಕಳು ಮೋದೀನದಲ್ಲಿದ್ದ ಅವರ ಪೂರ್ವಜರ ಸಮಾಧಿಯಲ್ಲೇ ಅವನ ಪಾರ್ಥಿವ ಶರೀರವನ್ನು ಭೂಸ್ಥಾಪನೆ ಮಾಡಿದರು. ಅವನಿಗಾಗಿ ಇಸ್ರಯೇಲರೆಲ್ಲರು ಬಹಳ ಶೋಕತಪ್ತರಾಗಿ ಮರುಗಿದರು.

## ಯೂದ ಮಕ್ಕಬಿಯನು

(2 ಮಕ್ಕಬಿ 8.1–7)

**3** ತರುವಾಯ, ಮಕ್ಕಬಿ ಎಂದು ಹೆಸರುಗೊಂಡ ಯೂದನು ತಂದೆಗೆ ಬದಲಾಗಿ ಮುಂದಾಳಾಗಿ ನಿಂತನು.
2ಅವನ ಎಲ್ಲ ಸಹೋದರರು ಅವನಿಗೆ ಸಹಾಯಮಾಡಿದರು. ಅವರಂತೆಯೇ ಅವನ ತಂದೆಯನ್ನು
ಹೊಂದುಕೊಂಡಿದ್ದ ಎಲ್ಲರೂ ಅವನಿಗೆ ಬೆಂಬಲವಿತ್ತರು. 3ಎಲ್ಲರು ಉತ್ಸಾಹದಿಂದ ಇಸ್ರಯೇಲರ ಪರವಾಗಿ
ಯುದ್ಧಮಾಡಿದರು. ಯೂದನು ತನ್ನ ಜನರಿಗೆ ದೊಡ್ಡ ಕೀರ್ತಿಯನ್ನು ಸಂಪಾದಿಸಿಕೊಟ್ಟನು. ಅವನೇ ಒಬ್ಬ
ಯೋಧನಂತೆ ಕವಚವನ್ನು ಹಾಕಿಕೊಂಡು, ಸಮರ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡು, ಯುದ್ಧಕ್ಕೆ ಸನ್ನದ್ಧನಾಗಿ
ಕತ್ತಿಯಿಂದ ತನ್ನ ಸೈನ್ಯವನ್ನು ರಕ್ಷಿಸುತ್ತಿದ್ದನು.

4 ಅವನಿದ್ದನು ತನ್ನ ಕೆಲಸಕಾರ್ಯಗಳಲ್ಲಿ
ಕೇಸರಿಯಂತೆ
ಬೇಟೆಗಾಗಿ ಗರ್ಜಿಸುತ್ತಿದ್ದ ಸಿಂಹದ
ಮರಿಯಂತೆ.
5 ಹುಡುಕುತ್ತಾ ಬೆನ್ನಟ್ಟುತ್ತಿದ್ದನು
ಅಧರ್ಮಿಗಳನು
ಸುಟ್ಟುಬಿಡುವನು ತನ್ನ ಜನಾಂಗವನು
ಪೀಡಿಸುತ್ತಿದ್ದವರನು.
6 ಅಧರ್ಮಿಗಳಂತು ಅವನಿಗೆ ಹೆದರಿ
ಹಿಪ್ಪೆಯಾದರು
ಅನಾಚಾರ ನಡೆಸುತ್ತಿದ್ದವರು
ತಲ್ಲಣಿಸಿಹೋದರು
ರಕ್ಷಣಾಕಾರ್ಯವೂ ಅವನಿಂದ ಕೈಗೂಡಿತು.
7 ಕೆರಳಿಸಿದನವನು ಅನೇಕ ಅರಸರುಗಳನು
ಆನಂದಗೊಳಿಸಿದನು ತನ್ನ ಕೃತ್ಯಗಳಿಂದ
ಇಸ್ರಯೇಲನನು
ಸದಾ ಸ್ತುತ್ಯವಾದುದು ಅವನ ಸ್ಮರಣೆಯು!
8 ತೊಲಗಿಸಿದನು ಇಸ್ರಯೇಲರ ಮೇಲಿದ್ದ
ಕೋಪವನ್ನೆಲ್ಲಾ
ಜುದೇಯದ ಊರುಕೇರಿಗಳನು ಸಂಚರಿಸುತ್ತಾ
ಅಧರ್ಮಿಗಳನ್ನು ಅವುಗಳಿಂದ ಹೊರದೂಡಿ
ಅಳಿಸಿಹಾಕುತ್ತಾ.
9 ಈ ಪರಿ ನಾಡಿನಲ್ಲೆಲ್ಲಾ ಹೆಸರುವಾಸಿಯಾದನು
ನಿರ್ಗತಿಕರನು ಒಟ್ಟುಗೂಡಿಸಿದನು.

10 ಇತ್ತ ಅಪೊಲ್ಲೋನಿಯಸ್ಸನು ಇಸ್ರಯೇಲರ ಮೇಲೆ ಯುದ್ಧಮಾಡಲು ಅನ್ಯರನೇಕರನ್ನು ಸಂಘಟನೆ ಮಾಡಿದನು. ಸಮಾರಿಯದೊಳಗಿಂದ ಒಂದು ದೊಡ್ಡ ಪಡೆಯನ್ನೇ ಕೂಡಿಸಿಕೊಂಡನು. 11ಯೂದನು ಇದನ್ನರಿತು ಅವನನ್ನು ಎದುರುಗೊಂಡು, ಸೋಲಿಸಿ, ಅವನನ್ನು ಕೊಂದು ಹಾಕಿದನು. ಅನೇಕರು ಸಾಯುವಷ್ಟು ಗಾಯಗೊಂಡರು; ಉಳಿದವರು ಪಲಾಯನ ಮಾಡಿದರು. 12ಇಸ್ರಯೇಲರು ಅವರ ಕೊಳ್ಳೆಯನ್ನು ತೆಗೆದುಕೊಂಡರು; ಯೂದನು ಅಪೊಲ್ಲೋನಿಯಸ್ಸನ ಖಡ್ಗವನ್ನು ತೆಗೆದುಕೊಂಡು ತನ್ನ ಜೀವಮಾನ ಕಾಲವೆಲ್ಲಾ ಅದರಿಂದಲೇ ಯುದ್ಧ ಮಾಡಿದನು.

13 ಯೂದನು ನಂಬಿಗಸ್ತ ಜನರನ್ನೂ ಯುದ್ಧ ಸನ್ನದ್ಧರಾದವರನ್ನೂ ಒಟ್ಟಿಗೆ ಕೂಡಿಸಿದ್ದಾನೆಂಬ ಸುದ್ದಿಯನ್ನು ಸಿರಿಯಾದವರ ಸೇನಾನಿಯಾದ ಸೇರೋನನು ಕೇಳಿದನು. 14ರಾಜಾಜ್ಞೆಯನ್ನು ಮೀರಿದ ಯೂದನೊಂದಿಗೆ ಮತ್ತು ಅವನ ಅನುಯಾಯಿಗಳೊಂದಿಗೆ ಯುದ್ಧಮಾಡಿ, ರಾಜ್ಯದಲ್ಲೆಲ್ಲಾ ಕೀರ್ತಿಯನ್ನೂ ಹೆಸರನ್ನೂ ಗಳಿಸಿಕೊಳ್ಳುವೆನೆಂದುಕೊಂಡನು. 15ಇಸ್ರಯೇಲರ ಮೇಲೆ ಸೇಡುತೀರಿಸಿಕೊಳ್ಳಲು ಅನ್ಯಜನರ ದೊಡ್ಡದೊಂದು ಸೈನ್ಯವೇ ಅವನ ನೆರವಿಗೆ ಒದಗಿತು. 16ಅವನು ಬೇತ್‌ಹೋರೋನ್ ಎಂಬ ಘಟ್ಟದ ಮಾರ್ಗದ ಸಮೀಪಕ್ಕೆ ಬಂದನು. ಯೂದನು ಚಿಕ್ಕದೊಂದು ಗುಂಪಿನೊಡನೆ ಅವನಿಗೆ ಎದುರಾಗಲು ಹೊರಟನು. 17ಆದರೆ ಯೂದನ ಜನರು ತಮಗೆ ಎದುರಾಗಿ ಬರುತ್ತಿದ್ದ ಸೈನ್ಯವನ್ನು ಕಂಡು ಅವನಿಗೆ, “ಒಡೆಯಾ, ಸ್ವಲ್ಪ ಜನರಾದ ನಾವು ಇಂಥ ದೊಡ್ಡ ಮತ್ತು ಬಲಾಢ್ಯ ಸೈನ್ಯವನ್ನು ಎದುರಿಸುವುದು ಸಾಧ್ಯವೇ? ಮೇಲಾಗಿ ಇಡೀ ದಿನ ನಾವು ಕೂಳಿಲ್ಲದೆ ಬಳಲಿ ಬೆಂಡಾಗಿದ್ದೇವೆ,” ಎಂದರು. 18ಅದಕ್ಕೆ ಯೂದನು, “ಬಹು ಜನರು ಇದ್ದರೂ ಸ್ವಲ್ಪ ಜನರ ಕೈಯಲ್ಲಿ ಸಿಕ್ಕಿ ಬೀಳುವುದು ಕಷ್ಟವೇನೂ ಅಲ್ಲ; ಪರಲೋಕ (ದೇವರ) ದೃಷ್ಟಿಯಲ್ಲಿ ಹಲವರ ಕೈಯಿಂದ ಅಥವಾ ಕೆಲವರ ಕೈಯಿಂದ ರಕ್ಷಿಸುವುದು ಒಂದೇ. 19ಏಕೆಂದರೆ, ಯುದ್ಧದಲ್ಲಿ ಜಯ ಜನಸಮುದಾಯದಿಂದ ಆಗುವುದಿಲ್ಲ; ಆ ಶಕ್ತಿ ಪರಲೋಕದಿಂದಲೇ ಬರುವಂಥದು. 20ಮತಾಂಧತೆಯಿಂದ ಹಾಗು ಅಧಮತನದಿಂದ ನಮ್ಮ ಮೇಲೆ ಬಿದ್ದು ನಮ್ಮನ್ನೂ ನಮ್ಮ ಮಡದಿಮಕ್ಕಳನ್ನೂ ನಾಶಮಾಡಿ, ನಮ್ಮನ್ನು ಸುಲಿದುಕೊಂಡು ಹೋಗುವುದಕ್ಕೆ ಅವರು ಬರುತ್ತಿದ್ದಾರೆ. 21ನಾವಾದರೋ, ನಮ್ಮ ಪ್ರಾಣ ಹಾಗೂ ಧರ್ಮಗಳ ರಕ್ಷಣೆಗಾಗಿ ಹೋರಾಡುತ್ತಿದ್ದೇವೆ. 22ಹೀಗಿರುವುದರಿಂದ ದೇವರು ನಮ್ಮ ಕಣ್ಣೆದುರಿನಲ್ಲಿಯೇ ಅವರನ್ನು ಸಂಹಾರಮಾಡುವರು; ನೀವಾದರೋ ಅವರಿಗೆ ಬೆದರಬೇಡಿ!” ಎಂದು ಹೇಳಿದನು. 23ಅವನು ಮಾತಾಡುವುದನ್ನು ಮುಗಿಸಿದ ಕೂಡಲೆ ಅವರ ಮೇಲೆ ಬಿದ್ದನು. ಸೇರೋನನೂ ಅವನ ಸೈನ್ಯದವರೂ ಸೋತುಹೋದರು. 24ಅವನು ಬೇತ್ ಹೋರೋನಿನ ಇಳುಕಲಿನಿಂದ ಬಯಲಿಗೆ ಬೀಳುವವರೆಗೂ ಅವರನ್ನು ಬೆನ್ನಟ್ಟಿದನು. ಅವರಲ್ಲಿ ಸುಮಾರು ಎಂಟುನೂರು ಜನರು ಅಂದು ಹತರಾದರು; ಉಳಿದವರು ಫಿಲಿಷ್ಟಿಯರ ನಾಡಿಗೆ ಓಡಿಹೋದರು.

25 ಬಳಿಕ ಯೂದನ ಮತ್ತು ಅವನ ಸಹೋದರರ ಭಯಭೀತಿ ಹಾಗು ಪ್ರಭಾವ ಅವರ ಸುತ್ತಮುತ್ತಲಿನ ಜನಾಂಗಗಳಲ್ಲಿ ಹಬ್ಬ ತೊಡಗಿತು. 26ಅವನ ಹೆಸರು ಅರಸನವರೆಗೂ ಹೋಯಿತು. ಪ್ರತಿಯೊಂದು ಜನಾಂಗದಲ್ಲೂ ಜನರು ಯೂದನ ಯುದ್ಧ ಸಾಮರ್ಥ್ಯವನ್ನೇ ಕುರಿತು ಮಾತಾಡಿಕೊಳ್ಳುತ್ತಿದ್ದರು.

### ರಾಜ್ಯಪಾಲನಾಗಿ ಲೂಸ್ಯನ ನೇಮಕ

27 ಈ ಮಾತುಗಳನ್ನು ಅಂತಿಯೋಕನು ಕೇಳಿ ಕಿಡಿಕಿಡಿಯಾದನು. ತನ್ನ ಸಾಮ್ರಾಜ್ಯದೊಳಗಿದ್ದ ಎಲ್ಲ ಸೈನ್ಯಗಳನ್ನೂ ಕರೆಯಿಸಿ, ಒಂದುಗೂಡಿಸಿ, ಒಂದು ಬಲಾಢ್ಯ ಸೈನ್ಯವನ್ನು ಸಂಗ್ರಹಿಸಿದನು. 28ತರುವಾಯ ತನ್ನ ಭಂಡಾರವನ್ನು ತೆರೆದು, ತನ್ನ ಸೈನ್ಯಕ್ಕೆಲ್ಲ ಒಂದು ವರ್ಷದ ವೇತನವನ್ನು ಮುಂಗಡವಾಗಿ ಹಂಚಿದನು; ಅಗತ್ಯಬಿದ್ದಾಗ ಸಿದ್ಧರಾಗಿರಬೇಕೆಂದು ಅವರಿಗೆ ಅಪ್ಪಣೆಮಾಡಿದನು. 29ಆಗ ತನ್ನ ಭಂಡಾರವೆಲ್ಲಾ ಬರಿದಾಯಿತೆಂದು ಅವನಿಗೆ ತಿಳಿಯಿತು. ಇದಲ್ಲದೆ, ಪುರಾತನ ಕಾಲದಿಂದಲು ವಾಡಿಕೆಯಲ್ಲಿದ್ದ ಧಾರ್ಮಿಕ ನಿಯಮಗಳನ್ನು ತೆಗೆದುಹಾಕುವ ಪ್ರಯತ್ನದ ಫಲವಾಗಿ ದೇಶದಲ್ಲೆಲ್ಲ ಅಂತಃಕಲಹಗಳೂ ಚಳುವಳಿಗಳೂ ಹರಡಿಕೊಂಡಿವೆ; ಆದ್ದರಿಂದಲೇ ಕಂದಾಯದ ಉತ್ಪನ್ನವೂ ಕಡಿಮೆಯಾಗಿದೆ ಎಂದು ಅವನಿಗೆ ಅರಿವಾಯಿತು. 30ಹಿಂದೆ ತಾನು ಕೊಡುಗೆಗಳನ್ನೂ ಸಂಬಳ – ಉಂಬಳಿಗಳನ್ನೂ ಕೊಡುತ್ತಾ, ತನ್ನ ಹಿಂದಿನ ಅರಸರುಗಳಿಗಿಂತ ಧಾರಾಳವಾಗಿ ಖರ್ಚು ಮಾಡುತ್ತಿದ್ದಂತೆ ಈಗ ಮಾಡಲು ಸಾಕಷ್ಟು ಇಲ್ಲ ಎಂಬುದನ್ನು

ಕಂಡು ಬೆದರಿದನು, ತಬ್ಬಿಬ್ಬಾದನು. 31ಆದುದರಿಂದ ಪರ್ಷಿಯಾ ದೇಶಕ್ಕೆ ಹೋಗಿ ಆ ಸೀಮೆಗಳಿಂದ
ಕಪ್ಪಕಾಣಿಕೆಗಳನ್ನು ಕೂಡಿಸಿ ದೊಡ್ಡ ನಿಧಿಯನ್ನು ಸಂಗ್ರಹಿಸಲು ನಿಶ್ಚಯಮಾಡಿದನು. 32ರಾಜಕಾರಣ
ಪಟುವೂ ರಾಜವಂಶಜನೂ ಆದ ಲೂಸ್ಯನೆಂಬವನಿಗೆ ಈಜಿಪ್ಟಿನ ಗಡಿನಾಡಿನಿಂದ ಯೂಫ್ರೆಟಿಸ್
ನದಿಯವರೆಗಿದ್ದ ತನ್ನ ರಾಜ್ಯದ ಆಡಳಿತವನ್ನು ಒಪ್ಪಿಸಿದನು. 33ತಾನು ಹಿಂದಿರುಗಿ ಬರುವವರೆಗೆ ತನ್ನ
ಮಗನಾದ ಅಂತಿಯೋಕನ ಸಂರಕ್ಷಣೆಯ ಭಾರವನ್ನೂ ಒಪ್ಪಿಸಿದನು. 34ಇದಲ್ಲದೆ, ತನ್ನ ಸೈನ್ಯದ
ಅರ್ಧಭಾಗವನ್ನೂ ಆನೆಗಳನ್ನೂ ಅವನ ವಶಕ್ಕೆ ಕೊಟ್ಟನು. ತಾನು ಕೈಗೊಂಡಿದ್ದ ಎಲ್ಲಾ ಕಾರ್ಯಗಳನ್ನು,
ಮುಖ್ಯವಾಗಿ ಜುದೇಯ ಮತ್ತು ಜೆರುಸಲೇಮಿನಲ್ಲಿದ್ದವರ ವಿಚಾರವನ್ನು ಅವನಿಗೆ ಒಪ್ಪಿಸಿದನು; 35ಅಂದರೆ,
ಅವರ ಮೇಲೆ ದಂಡು ಕಳುಹಿಸಿ, ಇಸ್ರಯೇಲರನ್ನೂ ಜೆರುಸಲೇಮಿನಲ್ಲಿದ್ದ ಅವರ ಸಂತಾನವನ್ನೂ ಮೂಲ
ಸಮೇತ ನಾಶಮಾಡಿ, ಅವರ ಸೊಕ್ಕನ್ನು ಮುರಿದು, ಅಲ್ಲಿಂದ ಅವರ ಗುರುತನ್ನೂ ತೆಗೆದುಹಾಕಬೇಕು.
36ಅವರ ಗಡಿ ನಾಡಿನಲ್ಲೆಲ್ಲ ಪರಕೀಯರು ವಾಸಿಸುವಂತೆ ಮಾಡಿ, ಆ ನಾಡನ್ನೆಲ್ಲ ಅವರಿಗೆ
ಹಂಚಿಕೊಡಬೇಕು. ಈ ಎಲ್ಲ ಕೆಲಸವನ್ನು ಅವನಿಗೆ ಒಪ್ಪಿಸಿದನು. 37ತರುವಾಯ 147ನೆಯ ವರ್ಷ ಅರಸನು
ಉಳಿದ ಅರ್ಧ ಸೈನ್ಯವನ್ನು ಕಟ್ಟಿಕೊಂಡು, ತನ್ನ ರಾಜಧಾನಿಯಾದ ಅಂತಿಯೋಕ್ಯದಿಂದ ಹೊರಟು,
ಯೂಫ್ರೆಟಿಸ್ ನದಿಯನ್ನು ದಾಟಿ, ಮಲೆನಾಡಿನಲ್ಲಿ ಪ್ರಯಾಣ ಬೆಳೆಸಿದನು.

**ಜುದೇಯದ ಮೇಲೆ ಸಿರಿಯಾದವರ ದಾಳಿ**

(2 ಮಕ್ಕಬಿ 8.8–29, 34–36)

38 ಇತ್ತ ಲೂಸ್ಯನು ಅರಸನ ಸ್ನೇಹಿತರಲ್ಲಿ ಬಲಾಢ್ಯರಾದ ಡೊರಿಮೆನೀಸನ ಮಗ ಪ್ತೊಲೆಮೇಯ,
ನಿಕಾನೋರ್ ಹಾಗು ಗೊರ್ಗಿಯ ಎಂಬವರನ್ನು ಆಯ್ದುಕೊಂಡನು. 39ನಾಲ್ವತ್ತು ಸಾವಿರ ಕಾಲಾಳುಗಳನ್ನೂ
ಏಳು ಸಾವಿರ ರಾಹುತರನ್ನೂ ಅವರ ವಶಕ್ಕೆ ಕೊಟ್ಟು, ಅರಸನ ಅಪ್ಪಣೆಯ ಮೇರೆಗೆ ಜುದೇಯ ನಾಡಿಗೆ
ಹೋಗಿ, ಅದನ್ನು ಹಾಳುಮಾಡಬೇಕೆಂದು ಹೇಳಿಕಳುಹಿಸಿದನು. 40ಅವರು ತಮ್ಮ ಇಡೀ ಸೈನ್ಯದೊಂದಿಗೆ
ಹೊರಟು, ಬಯಲುಸೀಮೆಯಲ್ಲಿದ್ದ ಎಮ್ಮಾವು ಎಂಬ ಊರಿನ ಬಳಿ ಬೀಡುಬಿಟ್ಟರು. 41ಆ ನಾಡಿನ
ವರ್ತಕರು ಅವರ ಕೀರ್ತಿಯನ್ನು ಕೇಳಿ, ಸೆರೆ ಸಿಕ್ಕುವ ಇಸ್ರಯೇಲ್ ಮಕ್ಕಳನ್ನು ಗುಲಾಮರನ್ನಾಗಿ
ಕೊಂಡುಕೊಳ್ಳುವ ಆಶೆಯಿಂದ ಬಹು ಬೆಳ್ಳಿಬಂಗಾರವನ್ನೂ ಬೇಡಿಗಳನ್ನೂ ತೆಗೆದುಕೊಂಡು ಅಲ್ಲಿನ ಚಾವಣಿಗೆ
ಬಂದರು. ಅತ್ತ ಇದುಮೇಯ ಮತ್ತು ಫಿಲಿಷ್ಟಿಯರ ಸೈನ್ಯವೂ ಅವರನ್ನು ಕೂಡಿಕೊಂಡಿತು.

42 ಇತ್ತ ಯೂದನೂ ಅವನ ಬಂಧುಗಳೂ ಕಷ್ಟಗಳು ಹೆಚ್ಚಾದುದನ್ನು, ಸೈನ್ಯಗಳು ತಮ್ಮ ಗಡಿಯಲ್ಲಿ
ಬೀಡುಬಿಟ್ಟದ್ದನ್ನು ಮತ್ತು ತಮ್ಮ ಜನರನ್ನೆಲ್ಲ ನಿರ್ನಾಮಮಾಡಬೇಕೆಂದು ಅರಸನು ಕೊಟ್ಟ ಅಪ್ಪಣೆಯನ್ನು
ಕುರಿತು ಪರಿಚಯಮಾಡಿಕೊಂಡರು. 43"ಬಿದ್ದು ಹೋದ ನಮ್ಮ ಜನರನ್ನು ಮೇಲಕ್ಕೆ ಎತ್ತೋಣ, ನಮ್ಮ
ಜನರ ಪರವಾಗಿಯೂ ಮಹಾಪವಿತ್ರಾಲಯದ ಸಲುವಾಗಿಯೂ ಹೋರಾಡೋಣ," ಎಂದು ತಮ್ಮ
ತಮ್ಮೊಳಗೆ ಮಾತಾಡಿಕೊಂಡರು. 44ಬಳಿಕ ಯುದ್ಧ ಸಿದ್ಧತೆಯನ್ನು ಮಾಡಿಕೊಳ್ಳುವುದಕ್ಕೂ ದೇವರ
ಕೃಪಾವರಗಳನ್ನು ಬೇಡಿಕೊಳ್ಳುವುದಕ್ಕೂ ಜನರೆಲ್ಲರೂ ಒಟ್ಟಿಗೆ ಸಭೆಸೇರಿದರು.

45 ಜೆರುಸಲೇಮ್ ಅರಣ್ಯದಂತಿತ್ತು
ನಿವಾಸಿಗಳಿಲ್ಲದೆ
ಸ್ಥಳೀಯರು ಹೋಗಿಬರುವ ಸುಳಿವೇ
ಅಲ್ಲಿಲ್ಲದೆ.
ತುಳಿತಕ್ಕೆ ಈಡಾಗಿತ್ತು ಮಹಾಪವಿತ್ರಾಲಯ
ಕೋಟೆಯಲ್ಲಿದ್ದವರು ಪರದೇಶಿಯರೇ
ಪೇಟೆಯಲ್ಲಿ ವಾಸಿಸಿದ್ದವರೂ ಅನ್ಯರೇ.
ಮಾಯವಾಗಿತ್ತು ಇಸ್ರಯೇಲಿನಲ್ಲಿದ್ದ
ಉಲ್ಲಾಸ
ಅಲ್ಲಿರಲಿಲ್ಲ ಇನ್ನು ಕೊಳಲು ಕಿನ್ನರಿಗಳ
ಇಂಚರ !

## ಮಿಚ್ಪೆಯಲ್ಲಿ ಯೆಹೂದ್ಯರ ಸಜ್ಜು

46 ಜನರೆಲ್ಲರೂ ಕೂಡಿ, ಜೆರುಸಲೇಮಿಗೆ ಎದುರಾಗಿದ್ದ ಮಿಚ್ಪೆಗೆ ಬಂದರು. ಏಕೆಂದರೆ ಇಸ್ರಯೇಲರ ಪ್ರಾರ್ಥನಾಸ್ಥಳ ಮೊದಲು ಇದ್ದುದು ಅಲ್ಲಿಯೇ. 47ಆ ದಿನ ಅವರೆಲ್ಲರೂ ಉಪವಾಸ ಮಾಡಿ, ಗೋಣಿತಟ್ಟನ್ನು ಸುತ್ತಿಕೊಂಡು, ತಲೆಯ ಮೇಲೆ ಬೂದಿಯನ್ನು ಸುರಿದುಕೊಂಡು, ಸಂತಾಪದಿಂದ ತಮ್ಮ ಬಟ್ಟೆಗಳನ್ನು ಹರಿದುಕೊಂಡರು. 48ಅನ್ಯರು ತಮ್ಮ ಮೂರ್ತಿಗಳಿಂದ ಭವಿಷ್ಯವನ್ನು ವಿಚಾರಿಸುತ್ತಿದ್ದ ಹಾಗೆ ಧರ್ಮಶಾಸ್ತ್ರವನ್ನು ತೆರೆದಿಟ್ಟು ವಿಚಾರಿಸಿದರು. 49ಇದಲ್ಲದೆ, ಯಾಜಕರ ವಸ್ತ್ರಗಳನ್ನೂ ಪ್ರಥಮ ಫಲವನ್ನೂ ದಶಮಾಂಶವನ್ನೂ ತಂದರು; ವ್ರತದ ದಿನಗಳನ್ನು ಪೂರೈಸಿದ್ದ ನಜರೇಯರನ್ನು ಹುರಿದುಂಬಿಸಿದರು. 50ಆಕಾಶದ ಕಡೆಗೆ ಮುಖವೆತ್ತಿ, ಗಟ್ಟಿಯಾಗಿ ಹೀಗೆ ಮೊರೆಯಿಟ್ಟರು: "ಇವುಗಳನ್ನೆಲ್ಲಾ ನಾವೇನು ಮಾಡೋಣ? 51ನಿಮ್ಮ ಪವಿತ್ರ ಸ್ಥಳವು ತುಳಿತದಿಂದ ಹೊಲೆಯಾಗಿದೆ; ನಿಮ್ಮ ಯಾಜಕರು ದುಃಖಭಾರದಿಂದ ಕುಗ್ಗಿಹೋಗಿದ್ದಾರೆ. 52ಇಗೋ, ನಮ್ಮನ್ನು ನಾಶಮಾಡುವುದಕ್ಕೆ ಅನ್ಯರೆಲ್ಲಾ ನಮಗೆ ವಿರೋಧವಾಗಿ ಕೂಡಿ ಬಂದಿದ್ದಾರೆ; 53ನಮಗೆ ವಿರುದ್ಧ ಅವರು ಮಾಡಿದ ಆಲೋಚನೆಗಳನ್ನೆಲ್ಲಾ ನೀವು ಬಲ್ಲವರಾಗಿದ್ದೀರಿ. 54ನೀವು ನಮಗೆ ಸಹಾಯಕರಾಗದಿದ್ದರೆ ನಾವು ಅವರ ಮುಂದೆ ನಿಲ್ಲುವುದೆಂತು?" ಎಂದು ಹೇಳಿ, ತುತೂರಿಗಳನ್ನು ಊದಿ, ಗಟ್ಟಿಯಾಗಿ ಮೊರೆಯಿಟ್ಟರು.

55 ತರುವಾಯ, ಯೂದನು ಸಾವಿರ, ನೂರು, ಐವತ್ತು ಮತ್ತು ಹತ್ತು ಜನರ ಮೇಲೆ ಅಧಿಪತಿಗಳನ್ನು ನಿಯಮಿಸಿದನು. 56ಆಮೇಲೆ ಅವನು ಮನೆ ಕಟ್ಟುತ್ತಿದ್ದವರಿಗೂ, ಮದುವೆ ಮಾಡಿಕೊಳ್ಳುತ್ತಿದ್ದವರಿಗೂ ದ್ರಾಕ್ಷಿತೋಟ ನೆಡುತ್ತಿದ್ದವರಿಗೂ ಹಾಗೂ ರಣಹೇಡಿಗಳಿಗೂ ನಿಯಮಶಾಸ್ತ್ರಾನುಸಾರ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿ ಹೋಗಲು ಅಪ್ಪಣೆಕೊಟ್ಟನು. 57ತರುವಾಯ ಸೈನ್ಯವು ಹೊರಟು ಎಮ್ಮಾವುನ ದಕ್ಷಿಣಕ್ಕೆ ಬೀಡುಬಿಟ್ಟಿತು. 58ಯೂದನು ಅವರಿಗೆ, "ನಡುಕಟ್ಟಿ ನಿಲ್ಲಿ, ಶೂರರಾಗಿರಿ! ನಮ್ಮನ್ನೂ ನಮ್ಮ ಪವಿತ್ರಾಲಯವನ್ನೂ ಹಾಳುಮಾಡುವ ಉದ್ದೇಶದಿಂದ ಇಲ್ಲಿ ಬಂದು ನೆರೆದಿರುವ ಈ ಅನ್ಯರ ವಿರುದ್ಧ ಕಾದಾಡಲು ಬೆಳಿಗ್ಗೆ ಸಿದ್ಧರಾಗಿರಿ. ಏಕೆಂದರೆ, ನಮ್ಮ ಜನಾಂಗಕ್ಕೂ ಪವಿತ್ರಾಲಯಕ್ಕೂ ಒದಗಲಿರುವ ದುರ್ದೆಸೆಯನ್ನು ನೋಡುವುದಕ್ಕಿಂತ ಯುದ್ಧದಲ್ಲಿ ಮಡಿಯುವುದೇ ಲೇಸು. ಇದರ ಮೇಲೆ ದೇವರು ತಮಗೆ ಸರಿಕಂಡದ್ದನ್ನು ಮಾಡಲಿ!" ಎಂದು ಹೇಳಿದನು.

## ಎಮ್ಮಾವುನಲ್ಲಿ ಕದನ

**4** ಗೊರ್ಗಿಯನು ಐದು ಸಾವಿರ ಕಾಲಾಳುಗಳನ್ನೂ ಒಂದು ಸಾವಿರ ಶ್ರೇಷ್ಠ ರಾಹುತರನ್ನೂ ತೆಗೆದುಕೊಂಡು ರಾತ್ರಿಯಲ್ಲಿ ತನ್ನ ಸ್ಥಳ ಬಿಟ್ಟನು. ತಾನು ಯೆಹೂದ್ಯರ ಮೇಲೆ ದಾಳಿ ಮಾಡಿ, ಅವರನ್ನು ಅನಿರೀಕ್ಷಿತವಾಗಿ ಸಂಹರಿಸಬೇಕೆಂದಿದ್ದನು. 2ಕೋಟೆಯಲ್ಲಿದ್ದ ಜನರು ಅವನಿಗೆ ಮಾರ್ಗದರ್ಶಕರಾಗಿದ್ದರು. 3–4ಯೂದನು ಈ ಸುದ್ದಿಯನ್ನು ಕೇಳಿ, ಅವನೂ ಅವನ ಯೋಧರೂ ಶತ್ರುಪಡೆಗಳು ಪಾಳೆಯವನ್ನು ಬಿಟ್ಟು ಚದರಿರುವಾಗಲೇ ಎಮ್ಮಾವುನಲ್ಲಿದ್ದ ಅರಸನ ದಂಡವನ್ನು ಹೊಡೆಯಬೇಕೆಂದು ಹೊರಟರು. 5ಗೊರ್ಗಿಯನು ರಾತ್ರಿಯಲ್ಲಿ ಯೂದನ ಚಾವಣಿಗೆ ಬಂದನು. ಆದರೆ ಅಲ್ಲಿ ಯಾರನ್ನೂ ಕಾಣಲಿಲ್ಲ. ಆಮೇಲೆ ಇವರು ತಮಗೆ ಅಂಜಿ ಓಡಿಹೋಗುತ್ತಿದ್ದಾರೆಂದು ನೆನಸಿ, ಗುಡ್ಡಗಳಲ್ಲಿ ಅವರನ್ನು ಹುಡುಕಿದನು.

6 ಬೆಳಗಾಗುತ್ತಲೇ ಯೂದನು ತನ್ನ ಮೂರು ಸಾವಿರ ಸೈನಿಕರೊಂದಿಗೆ ಬಯಲು ಪ್ರದೇಶದಲ್ಲಿ ಕಾಣಿಸಿಕೊಂಡನು; ಆದರೆ ಅವರ ಬಳಿ ತಕ್ಕ ಕವಚಗಳಾಗಲಿ, ಕತ್ತಿಗಳಾಗಲಿ ಇರಲಿಲ್ಲ. 7ಬದಲಿಗೆ, ಅನ್ಯರ ಶಿಬಿರದಲ್ಲಿ ಬಲವಾದ ವ್ಯೂಹ ರಚಿಸಲಾಗಿತ್ತು; ಅವರು ಯುದ್ಧದಲ್ಲಿ ನಿಪುಣರಾಗಿಯೇ ಕಂಡುಬಂದರು.

8 ಯೂದನು ತನ್ನ ಸಂಗಡ ಇದ್ದವರಿಗೆ, "ಅವರ ಸಂಖ್ಯೆಯನ್ನು ನೋಡಿ ಅಂಜಬೇಡಿ, ಅವರ ದಾಳಿಗೆ ಹೆದರಬೇಡಿ. 9ಫರೋಹನು ತನ್ನ ಸೈನ್ಯದೊಂದಿಗೆ ನಮ್ಮ ಪೂರ್ವಜರನ್ನು ಬೆನ್ನಟ್ಟಿ ಬಂದಾಗ, ಅವರು ಕೆಂಪು ಸಮುದ್ರದಲ್ಲಿ ಹೇಗೆ ರಕ್ಷಿಸಲ್ಪಟ್ಟರೆಂಬುದನ್ನು ಸ್ಮರಿಸಿಕೊಳ್ಳಿ. 10ನಾವೀಗ ದೇವರಿಗೆ ಮೊರೆಯಿಡೋಣ; ಅವರು ನಮ್ಮನ್ನು ಆಲೈಸಿ, ನಮ್ಮ ಪಿತೃಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ನೆನೆದುಕೊಂಡು, ಈ ದಿನ ನಮ್ಮ ಕಣ್ಮುಂದೆಯೇ ಆ ಸೈನ್ಯವನ್ನು ನಾಶಗೊಳಿಸಬಹುದು. 11ಹೀಗೆ,

ಇಸ್ರಯೇಲರನ್ನು ವಿಮೋಚಿಸಿ ಕಾಪಾಡುವಾತನು ಒಬ್ಬನಿದ್ದಾನೆ ಎಂದು ಅನ್ಯರೆಲ್ಲರೂ ಅರಿತುಕೊಳ್ಳುವರು," ಎಂದು ಹೇಳಿದನು. 12ಅನ್ಯರು ಕಣ್ಣೆತ್ತಿ ಇಸ್ರಯೇಲರು ತಮಗೆದುರಾಗಿ ಬರುತ್ತಿರುವುದನ್ನು ಕಂಡರು. 13ಅವರು ಯುದ್ಧಮಾಡುವುದಕ್ಕಾಗಿ ತಮ್ಮ ಪಾಳೆಯವನ್ನು ಬಿಟ್ಟು ಹೊರಡಲು, ಯೂದನ ಸಂಗಡ ಇದ್ದವರೂ ತುತೂರಿಗಳನ್ನು ಊದಿದರು. 14ಕೈಗೆ ಕೈ ಹತ್ತಲಾಗಿ ಅನ್ಯರು ಸೋತು ಬಯಲಿನ ಕಡೆಗೆ ಓಡಿಹೋದರು. ಹಿಂಬಾಗದ ಸೈನ್ಯವೆಲ್ಲಾ ಕತ್ತಿಗೆ ತುತ್ತಾಯಿತು. 15ಇಸ್ರಯೇಲರು ಅವರನ್ನು ಗಜರಾ, ಇದುಮೇಯದ ಬಯಲು, ಅಜೋತು ಮತ್ತು ಜಾಮ್ನಿಯದವರೆಗೂ ಬೆನ್ನಟ್ಟಿ ಹೋದರು. 16ಅಂದು ಅವರಲ್ಲಿ ಮೂರು ಸಾವಿರ ಜನರು ಹತರಾದರು. ತರುವಾಯ ಯೂದನೂ ಅವನ ದಳವೂ ಬೆನ್ನಟ್ಟುವುದನ್ನು ಬಿಟ್ಟು ಹಿಂದಿರುಗಿದರು. 17ಅವನು ತನ್ನವರಿಗೆ, "ಈಗಲೇ ಕೊಳ್ಳೆಗಾಗಿ ಆಶೆ ಪಡಬೇಡಿ, ನಾವು ಇನ್ನೂ ಯುದ್ಧ ಮಾಡುವುದಿದೆ. 18ಗೊರ್ಗಿಯನೂ ಅವನ ದಂಡೂ ನಮ್ಮ ಸಮೀಪ ಗುಡ್ಡಗಳಲ್ಲಿಯೇ ಇದ್ದಾರೆ. ಆದುದರಿಂದ ಈಗ ವೈರಿಗಳನ್ನು ಎದುರಿಸಿ ನಿಲ್ಲಿ; ಅವರೊಂದಿಗೆ ಕಾದಾಡಿರಿ; ಆಮೇಲೆ ಧೈರ್ಯದಿಂದ ಕೊಳ್ಳೆಗೆ ಕೈ ಹಾಕಿ," ಎಂದು ಹೇಳಿದನು. 19ಯೂದನು ಈ ಮಾತುಗಳನ್ನು ಹೇಳಿ ಮುಗಿಸುತ್ತಿರುವಾಗಲೇ ಶತ್ರುಗಳ ಒಂದು ಭಾಗ ಗುಡ್ಡದ ಮೇಲೆ ನಿಂತುಕೊಂಡು ನೋಡುತ್ತಿರುವುದು ಕಂಡಿತು. 20ಅವರು, ತಮ್ಮ ಸೈನ್ಯ ಪಲಾಯನ ಗೈದುದನ್ನೂ ತಮ್ಮ ಶಿಬಿರಕ್ಕೆ ಬೆಂಕಿ ಹಚ್ಚಿದುದನ್ನೂ ಕಂಡರು. ಆಡುತ್ತಿದ್ದ ಹೊಗೆಯೇ ನಡೆದುದನ್ನು ತೋರಿಸಿತು. ಅವರು ಈ ಘಟನೆಗಳನ್ನು ಕಂಡು ಭಯಭ್ರಾಂತರಾದರು. 21ಇದಲ್ಲದೆ, ಯೂದನ ಸೈನ್ಯವು ತಿರುಗಿ ಸಮರಕ್ಕೆ ಸಿದ್ಧವಾಗಿ ಬಯಲಲ್ಲಿ ನಿಂತಿರುವುದನ್ನು ಕಂಡು, 22ಎಲ್ಲರೂ ಫಿಲಿಷ್ಟಿಯರ ನಾಡಿಗೆ ಓಡಿಹೋದರು. 23ಯೂದನು ಅವರ ಶಿಬಿರವನ್ನು ಕೊಳ್ಳೆಹೊಡೆಯಲು ಬಂದನು. ಅಂದು ಅವರಿಗೆ ಬಹಳ ಬೆಳ್ಳಿ ಬಂಗಾರವೂ ನೀಲಿ ಮತ್ತು ನೇರಳೆ ಬಣ್ಣದ ರೇಶ್ಮೆಯ ವಸ್ತ್ರಗಳೂ ಅಪಾರ ಸಂಪತ್ತೂ ಸಿಕ್ಕಿತು. 24ಅವರು ಮನೆಗೆ ಹಿಂದಿರುಗಿ ಬಂದು ದೇವರನ್ನು ಸ್ತುತಿಸಿದರು; "ಆತ ಕರುಣಾಮೂರ್ತಿ, ಆತನ ಅಚಲ ಪ್ರೀತಿ ಶಾಶ್ವತ" ಎಂದು ಹೇಳುತ್ತಾ ಆತನನ್ನು ಕೊಂಡಾಡಿದರು. 25ಅಂದು ಇಸ್ರಯೇಲರಿಗೆ ಮಹಾವಿಮೋಚನೆ ದೊರಕಿತು.

## ಲೂಸ್ಯನ ಮೇಲೆ ವಿಜಯ

(2 ಮಕ್ಕಬಿ. 11.1–12)

26 ತಪ್ಪಿಸಿಕೊಂಡು ಹೋದ ಅನ್ಯರು ಲೂಸ್ಯನ ಬಳಿಗೆ ಬಂದು ನಡೆದ ಸಂಗತಿಯನ್ನೆಲ್ಲ ತಿಳಿಸಿದರು. 27ಅವನು ಇದನ್ನು ಕೇಳಿ, ದಿಗ್ಭ್ರಮೆಗೊಂಡು ಧೈರ್ಯಗೆಟ್ಟನು. ಏಕೆಂದರೆ ಇಸ್ರಯೇಲರಿಗೆ ತಾನು ಮಾಡಬೇಕೆಂದಿದ್ದ ಶಾಸ್ತಿಯಾಗಲಿ, ಅರಸನು ಆಜ್ಞಾಪಿಸಿದವುಗಳಾಗಲಿ ನೆರವೇರಲಿಲ್ಲ. 28ಮಾರನೆಯ ವರ್ಷ ಅವನು, ಇಸ್ರಯೇಲರನ್ನು ನಿಗ್ರಹಿಸಬೇಕೆಂದು ಅರವತ್ತು ಸಾವಿರ ಕಾಲಾಳುಗಳನ್ನೂ ಐದು ಸಾವಿರ ರಾಹುತರನ್ನೂ ಕೂಡಿಸಿದನು. 29ಅವರು ಎದೋಮಿಗೆ ಬಂದು ಬೇತ್ಸೂರ ಎಂಬಲ್ಲಿ ಬೀಡುಬಿಟ್ಟರು. ಯೂದನು ಹತ್ತು ಸಾವಿರ ಜನರೊಡನೆ ಅವರನ್ನು ಎದುರಿಸಿದನು. 30ಶತ್ರುದಳವು ಬಹು ಬಲಾಢ್ಯವಾಗಿರುವುದನ್ನು ಕಂಡು ಹೀಗೆ ಪ್ರಾರ್ಥಿಸಿದನು: "ಹೇ ಇಸ್ರಯೇಲರ ಉದ್ಧಾರಕನೇ, ತಾವು ಸುವಂದ್ಯರು! ಬಲಾಢ್ಯನೊಬ್ಬನ ಉಪಟಳವನ್ನು ನಿಮ್ಮ ದಾಸ ದಾವೀದನ ಮೂಲಕ ಅಡಗಿಸಿದವರು! ಫಿಲಿಷ್ಟಿಯರ ಸೈನ್ಯವನ್ನು ಸೌಲನ ಮಗ ಯೋನಾತನನ ಹಾಗು ಅವನ ಆಯುಧ ವಾಹಕನ ಕೈಗೆ ಕೊಟ್ಟವರು! 31ಈ ಸೈನ್ಯವನ್ನು ನಿಮ್ಮ ಜನರಾದ ಇಸ್ರಯೇಲರ ಕೈಗೆ ಕೊಟ್ಟು ಬಿಡಿ. ಶತ್ರುಗಳು ತಾವು ತಂದ ಸೈನ್ಯದ ಹಾಗೂ ರಾಹುತರ ನಿಮಿತ್ತ ನಾಚಿಕೊಳ್ಳುವಂತಾಗಲಿ. 32ಅವರನ್ನು ಹೇಡಿಗಳನ್ನಾಗಿ ಮಾಡಿ; ಅವರ ಶಕ್ತಿಯನ್ನೂ ಧೈರ್ಯವನ್ನೂ ಕುಂದಿಸಿಬಿಡಿ. ಅವರು ತಮ್ಮ ನಾಶವನ್ನು ಕಂಡು ನಡುಗಲಿ. 33ನಿಮ್ಮನ್ನು ಪ್ರೀತಿಸುವವರ ಕತ್ತಿಯಿಂದ ಅವರನ್ನು ಸಂಹಾರ ಮಾಡಿ ನಿಮ್ಮ ನಾಮಮಹತ್ತನ್ನು ನೋಡುವವರೆಲ್ಲರೂ ನಿಮಗೆ ಕೃತಜ್ಞತಾಸ್ತುತಿ ಸಲ್ಲಿಸುವಂತಾಗಲಿ!" ಎಂದನು.

34 ಆಮೇಲೆ ಅವರು ಯುದ್ಧವನ್ನು ಆರಂಭಿಸಿದರು. ಅಂದು ಲೂಸ್ಯನ ಸೈನ್ಯದಲ್ಲಿ ಐದುಸಾವಿರ ಜನರು ಹತರಾದರು. 35ಅವರ ಕಣ್ಣೆದುರಿನಲ್ಲಿಯೇ ಶತ್ರುಗಳು ನೆಲಕ್ಕುರುಳಿದರು. ಲೂಸ್ಯನು, ತನ್ನ ಸೈನ್ಯವು ಕಾಲ್ಕಿತ್ತುದನ್ನೂ ತಮ್ಮನ್ನು ಎದುರಿಸಿದ ಯೂದನ ಅನುಯಾಯಿಗಳಲ್ಲಿ ತುಂಬಿದ್ದ ಧೈರ್ಯವನ್ನೂ ಅವರು

ಮಾನದಿಂದ ಜೀವಿಸುವುದಕ್ಕೂ ಸಾಯುವುದಕ್ಕೂ ಸಿದ್ಧರಾಗಿದ್ದುದನ್ನೂ ಕಂಡು, ತನ್ನ ಸೈನ್ಯವನ್ನು ಜಮಾಯಿಸಿಕೊಂಡು ಅಂತಿಯೋಕ್ಯಕ್ಕೆ ಹಿಂದಿರುಗಿದನು. ಅದಕ್ಕಿಂತಲೂ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಜುದೇಯದ ಮೇಲೆ ದಂಡೆತ್ತಿ ಹೋಗಬೇಕೆಂದು ಬಾಡಿಗೆಯ ಸೈನ್ಯವನ್ನು ಕೂಡಿಸಿದನು.

### ಮಹಾದೇವಾಲಯದ ಶುದ್ಧೀಕರಣ

(2 ಮಕ್ಕಬಿ. 10.1–8)

36 ಇತ್ತ ಯೂದನೂ ಅವನ ಬಂಧುಗಳೂ, "ನಮ್ಮ ಶತ್ರುಗಳಂತೂ ಸೋತುಹೋದರು; ನಾವಿನ್ನು ಪವಿತ್ರಾಲಯವನ್ನು ಶುಚಿಮಾಡುವುದಕ್ಕೆ ಹೋಗೋಣ; ಅದನ್ನು ಹೊಸದಾಗಿ ಪ್ರತಿಷ್ಠಿಸೋಣ,"
ಎಂದುಕೊಂಡರು. 37ಸೈನ್ಯವೆಲ್ಲಾ ಮರಳಿ ಕೂಡಿಬರಲು, ಅವರೆಲ್ಲರು ಸಿಯೋನ್ ಗಿರಿಗೆ ಹೋದರು.
38ಅಲ್ಲಿಗೆ ಹೋಗಿ ನೋಡುವಾಗ ಪವಿತ್ರಾಲಯವು ಹಾಳಾಗಿಹೋಗಿತ್ತು; ಬಲಿಪೀಠವು ಅಮಂಗಲವಾಗಿತ್ತು;
ಮಹಾದ್ವಾರಗಳು ಸುಟ್ಟು ಹೋಗಿದ್ದವು; ಅಡವಿಯಲ್ಲಿ, ಇಲ್ಲವೇ ಗುಡ್ಡಗಳಲ್ಲಿ, ಬೆಳೆಯುವಂತೆ ಅದರ
ಪ್ರಾಕಾರದಲ್ಲೆಲ್ಲ ಗಿಡಗಂಟಿಗಳು ಬೆಳೆದಿದ್ದವು; ಯಾಜಕರ ಕೋಣೆಗಳನ್ನು ಕೆಡವಲಾಗಿತ್ತು. 39ಇದನ್ನೆಲ್ಲ ಕಂಡು,
ಅವರು ಸಿಟ್ಟಿನಿಂದ ತಮ್ಮ ಬಟ್ಟೆಗಳನ್ನು ಹರಿದುಕೊಂಡು, ಬಹಳವಾಗಿ ಗೋಳಾಡಿ, ತಮ್ಮ ತಲೆಯ ಮೇಲೆ
ಬೂದಿಯನ್ನು ಸುರಿದುಕೊಂಡರು. 40ನೆಲದಮೇಲೆ ಬೋರಲು ಬಿದ್ದು, ಘೋಷಣೆ ಹಾಕಿ, ತುತೂರಿಗಳನ್ನು
ಊದಿ, ದೇವರಿಗೆ ಮೊರೆಯಿಟ್ಟರು.

41 ತರುವಾಯ ಯೂದನು, ತಾನು ದೇವಾಲಯವನ್ನು ಶುಚಿಮಾಡುವವರೆಗೆ, ಕೋಟೆಯಲ್ಲಿದ್ದವರ ಸಂಗಡ ಕಾದಾಡುವುದಕ್ಕೆ ಕೆಲವು ಜನರನ್ನು ನೇಮಿಸಿದನು. 42ಧರ್ಮಶಾಸ್ತ್ರ ಪಾಲನೆಯಲ್ಲಿ
ಆನಂದಪಡುತ್ತಿದ್ದ ನಿರ್ದೋಷಿಗಳಾದ ಕೆಲವು ಯಾಜಕರನ್ನು ಆರಿಸಿಕೊಂಡನು.

43 ಇವರು ಪವಿತ್ರಾಲಯವನ್ನು ಶುದ್ಧೀಕರಿಸಿದರು, ಮತ್ತು ಹೊಲೆಯಾಗಿದ್ದ ಕಲ್ಲುಗಳನ್ನೆಲ್ಲ ತೆಗೆದುಕೊಂಡು ಹೋಗಿ, ಅಶುದ್ಧ ಸ್ಥಳದಲ್ಲಿ ಬಿಸಾಡಿದರು. 44ಅನಂತರ ಅಶುದ್ಧವಾಗಿದ್ದ ದಹನ
ಬಲಿಪೀಠವನ್ನು ಏನು ಮಾಡಬೇಕೆಂದು ಆಲೋಚನೆಮಾಡಿದರು. 45ಆಗ ಅವರಿಗೆ ಒಂದು ಒಳ್ಳೆಯ
ಆಲೋಚನೆ ಹೊಳೆಯಿತು; ಅದು ನಿಂದೆಗೆ ಕಾರಣವಾಗುವುದು; ಆದುದರಿಂದ ಅದನ್ನು ಕೆಡವಿಬಿಡಬೇಕೆಂದೇ
ತೀರ್ಮಾನಿಸಿದರು. ಅದರಂತೆ ಅದನ್ನು ಕೆಡವಿಬಿಟ್ಟರು. 46ಅದರ ಕಲ್ಲುಗಳನ್ನು ಕುರಿತು ಉತ್ತರ ಹೇಳುವುದಕ್ಕೆ
ಒಬ್ಬ ಪ್ರವಾದಿ ಏಳುವವರೆಗೆ ಅವು ಇರಲಿ ಎಂದು ಹೇಳಿ, ಅವುಗಳನ್ನು ಆಲಯವಿದ್ದ ಗುಡ್ಡದಲ್ಲಿಯೇ,
ಅನುಕೂಲವಾದ ಸ್ಥಳದಲ್ಲಿ ಇಟ್ಟರು. 47ಆಮೇಲೆ ಅವರು ಧರ್ಮಶಾಸ್ತ್ರದ ಪ್ರಕಾರ ಹೊಸ ಒರಟುಮೊರಟು
ಕಲ್ಲುಗಳನ್ನು ತೆಗೆದುಕೊಂಡು, ಮೊದಲಿನದರಂತೆ ಹೊಸದೊಂದು ಬಲಿಪೀಠವನ್ನು ಕಟ್ಟಿದರು. 48ಇದಲ್ಲದೆ
ಪವಿತ್ರಸ್ಥಾನವನ್ನೂ ಆಲಯದ ಒಳಭಾಗವನ್ನೂ ಕಟ್ಟಿ, ಪ್ರಾಕಾರಗಳನ್ನು ಹಸನು ಮಾಡಿದರು. 49ಹೊಸ
ಪವಿತ್ರ ಪಾತ್ರೆಗಳನ್ನೂ ಮಾಡಿಸಿದರು. ದೀಪವೃಕ್ಷವನ್ನು, ದಹನಬಲಿಪೀಠವನ್ನು, ಧೂಪಪೀಠವನ್ನು ಹಾಗು
ಮೇಜನ್ನು ಆಲಯದೊಳಗೆ ತಂದಿಟ್ಟರು. 50ತರುವಾಯ ಧೂಪಪೀಠದ ಮೇಲೆ ಸಾಂಬ್ರಾಣಿಯನ್ನು ಸುಟ್ಟು,
ದೀಪವೃಕ್ಷದಲ್ಲಿದ್ದ ದೀವಿಗೆಗಳನ್ನು ಹಚ್ಚಿ, ದೇವಾಲಯವನ್ನು ಬೆಳಗಿಸಿದರು. 51ಮೇಜಿನ ಮೇಲೆ ನೈವೇದ್ಯದ
ರೊಟ್ಟಿಗಳನ್ನು ತಂದಿಟ್ಟರು; ಪರದೆಗಳನ್ನು ಇಳಿಬಿಟ್ಟರು; ಈ ರೀತಿ ತಮ್ಮ ಕೆಲಸವನ್ನೆಲ್ಲ ಪೂರ್ತಿ ಮಾಡಿದರು.

52 ಅವರು 148ನೇ ವರ್ಷದ ಒಂಬತ್ತನೆಯ ತಿಂಗಳಾದ ಮಾರ್ಗಶಿರ ಮಾಸದ ಇಪ್ಪತ್ತೈದನೆಯ ದಿವಸ ನಸುಕಿನಲ್ಲಿಯೇ ಎದ್ದು 53ತಾವು ಹೊಸದಾಗಿ ರಚಿಸಿದ್ದ ದಹನಬಲಿಪೀಠದ ಮೇಲೆ ಧರ್ಮಶಾಸ್ತ್ರಕ್ಕೆ
ಸರಿಯಾಗಿ ಬಲಿಯನ್ನು ಅರ್ಪಿಸಿದರು. 54ಯಾವ ದಿನ ಮತ್ತು ಯಾವ ಗಳಿಗೆಯಲ್ಲಿ ಅನ್ಯರು ಅದನ್ನು
ಹೊಲೆಮಾಡಿದ್ದರೋ ಅದೇ ದಿನ ಗಾಯನ, ವೀಣೆ, ಕಿನ್ನರಿ, ತಾಳಗಳ ಸಂಭ್ರಮದಿಂದ ಅದನ್ನು ಹೊಸದಾಗಿ
ಪ್ರತಿಷ್ಠಿಸಿದರು. 55ಜನರೆಲ್ಲರು ಬೋರಲು ಬಿದ್ದು, ತಮಗೆ ಜಯವನ್ನು ಕೊಟ್ಟ ದೇವರನ್ನು ಕೊಂಡಾಡಿ
ಆರಾಧಿಸಿದರು. 56ಬಲಿಪೀಠದ ಪ್ರತಿಷ್ಠೆಯ ಹಬ್ಬವನ್ನು ಎಂಟು ದಿನಗಳವರೆಗೆ ಆಚರಿಸಿದರು. ಉಲ್ಲಾಸದಿಂದ
ದಹನಬಲಿಗಳನ್ನು ಅರ್ಪಿಸಿದರು. ವಿಮೋಚನಾ ಮತ್ತು ಕೃತಜ್ಞತಾಸ್ತುತಿಯ ಬಲಿಯನ್ನು ಅರ್ಪಿಸಿದರು.
57ದೇವಾಲಯದ ಮುಂಭಾಗವನ್ನು ಚಿನ್ನದ ಮುಕುಟಗಳಿಂದಲೂ ಸಣ್ಣ ಸಣ್ಣ ಗುಬುಟುಗಳಿಂದಲೂ
ಶೃಂಗರಿಸಿ, ಅದರ ಮಹಾದ್ವಾರಗಳನ್ನೂ ಯಾಜಕರ ಕೋಣೆಗಳನ್ನೂ ಪ್ರತಿಷ್ಠಿಸಿ, ಅವುಗಳಿಗೆ ಕದಗಳನ್ನು

ಹಚ್ಚಿದರು. 58ಜನರಲ್ಲಿ ಉತ್ಸಾಹವು ತುಂಬಿತು; ಅನ್ಯ ಜನರಿಂದಾಗಿದ್ದ ಅಪಮಾನವು ದೂರ ಆಯಿತು.
59ತರುವಾಯ ಯೂದನು, ಅವನ ಬಂಧುಗಳು ಹಾಗು ಇಸ್ರಯೇಲರ ಸಭೆಯೆಲ್ಲವು ಕೂಡಿ, ಬಲಿಪೀಠದ ಪ್ರತಿಷ್ಠೆಯ ದಿನಗಳನ್ನು ಪ್ರತಿವರ್ಷ ಇದೇ ಕಾಲದಲ್ಲಿ ಅಂದರೆ, ಮಾರ್ಗಶಿರ ಮಾಸದ ಇಪ್ಪತ್ತೈದನೆಯ ದಿವಸದಿಂದ ಎಂಟು ದಿನಗಳವರೆಗೆ ಅತಿ ಸಂಭ್ರಮ ಸಂತೋಷದಿಂದ ಆಚರಿಸಬೇಕೆಂದು ಗೊತ್ತುಮಾಡಿದರು.
60ಹಿಂದೆ ಅನ್ಯಜನರು ಬಂದು ಸಿಯೋನ್ ಗಿರಿಯನ್ನು ತುಳಿದಾಡಿದಂತೆ ಮುಂದೆ ಮಾಡಲು ಸಾಧ್ಯವಾಗಬಾರದೆಂದು ಅದರ ಸುತ್ತಲೂ ಎತ್ತರವಾದ ಗೋಡೆಯನ್ನೂ ಬಲವಾದ ಬುರುಜುಗಳನ್ನೂ, ಆ ಕಾಲದಲ್ಲೇ ಕಟ್ಟಿಸಿದರು. 61ಇದುಮೇಯರ ಉಪಟಳದಿಂದ ಜನರು ಸುರಕ್ಷಿತವಾಗಿರಲೆಂದು ಅದನ್ನು ಕಾಯುವುದಕ್ಕೆ ಒಂದು ಸೈನ್ಯವನ್ನು ಇಟ್ಟಿದ್ದಲ್ಲದೆ ಬೇತ್ಸೂರನ್ನೂ ಭದ್ರಗೊಳಿಸಿದರು.

## ನೆರೆರಾಜ್ಯಗಳೊಡನೆ ಯುದ್ಧ

(2 ಮಕ್ಕಬಿ. 10.14–33; 12.10–45)

**5** ಬಲಿಪೀಠವನ್ನು ಕಟ್ಟಿಯಾಯಿತೆಂದೂ ಪವಿತ್ರಾಲಯವು ಮೊದಲಿನಂತೆ ಪ್ರತಿಷ್ಠಿತವಾಯಿತೆಂದೂ ನೆರೆಹೊರೆಯಲ್ಲಿದ್ದ ಅನ್ಯಜನರು ಕೇಳಿ, ರೋಷಾವೇಶಗೊಂಡರು. 2ಮಾತ್ರವಲ್ಲದೆ, ತಮ್ಮ ಮಧ್ಯೆಯಿದ್ದ ಇಸ್ರಯೇಲ ವಂಶವನ್ನೇ ನಿರ್ಮೂಲ ಮಾಡುವ ಸಂಕಲ್ಪ ಮಾಡಿದರು. ದೇವಜನರಲ್ಲಿ ಕೆಲವರನ್ನು ಕೊಲ್ಲಿಸುವುದಕ್ಕೂ ನಾಶಮಾಡುವುದಕ್ಕೂ ಆರಂಭಿಸಿದರು. 3ಇತ್ತ ಏಸಾವನ ಸಂತಾನದವರು ಇಸ್ರಯೇಲರನ್ನು ಮುತ್ತಿದರು. ಯೂದನು ಇದುಮೇಯದಲ್ಲಿದ್ದ ಅಕ್ರಬತ್ತಿನೆ ಎಂಬಲ್ಲಿ ಅವರೊಂದಿಗೆ ಯುದ್ಧಮಾಡಿ ಅವರಲ್ಲಿಯ ಬಹು ಜನರನ್ನು ಸಂಹರಿಸಿ, ಅವರ ಸೊಕ್ಕನ್ನು ಮುರಿದು, ಸೂರೆಮಾಡಿಕೊಂಡು ಹೋದನು. 4ಅವನು ಬೀನನ ಸಂತಾನದವರ ದುರುಳತನವನ್ನೂ ಸ್ಮರಿಸಿಕೊಂಡನು. ಅವರು ಹಾದಿಗಳಲ್ಲಿ ಹೊಂಚುಹಾಕಿ ಕೂರುತ್ತಿದ್ದರು; ಇಸ್ರಯೇಲ್ ಜನಕ್ಕೆ ದೊಡ್ಡ ಉರುಲೂ ಆತಂಕವೂ ಆಗಿದ್ದರು.
5ಆದುದರಿಂದ ಅವನು ಅವರನ್ನು ಅವರ ಕೊತ್ತಲಗಳಲ್ಲಿಯೇ ಬಂಧಿಸಿಟ್ಟನು; ಅವರ ಸುತ್ತಲೂ ಮುತ್ತಿಗೆ ಹಾಕಿ, ಅವರನ್ನು ನಾಶಕ್ಕೆ ಗುರಿಮಾಡಿದನು; ಅಲ್ಲಿದ್ದ ಕೊತ್ತಲಗಳಿಗೆ ಕೊಳ್ಳಿಯಿಟ್ಟು ಅವುಗಳನ್ನೂ ಅವುಗಳಲ್ಲಿ ಇದ್ದವರೆಲ್ಲರನ್ನೂ ಸುಟ್ಟುಬಿಟ್ಟನು. 6ಅಲ್ಲಿಂದ ಅವನು ಅಮ್ಮೋನ್ಯರ ಸೀಮೆಗೆ ಹಾದು ಹೋದನು. ಅಲ್ಲಿ ತಿಮೊಥೆಯನೆಂಬ ದಂಡನಾಯಕನ ಕೆಳಗೆ ಬಹುಜನರು ಕೂಡಿಕೊಂಡಿದ್ದು ದೊಡ್ಡದೊಂದು ದಂಡೇ ಇರುವುದನ್ನು ಕಂಡನು. 7ಅವನು ಅವರೊಂದಿಗೆ ಅನೇಕ ಸಾರಿ ಕಾದಾಡಿ, ಸೋಲಿಸಿ, ಕಡೆಗೆ ಅವರನ್ನು ಸಂಹರಿಸಿದನು. 8ಇದಲ್ಲದೆ, ಯಗೇಜರನ್ನೂ ಅದಕ್ಕೆ ಸಂಬಂಧಿಸಿದ ಊರು ಗ್ರಾಮಗಳನ್ನೂ ಕೈವಶಮಾಡಿಕೊಂಡು ಜುದೇಯಕ್ಕೆ ಹಿಂದಿರುಗಿದನು.

9 ಇತ್ತ ಗಿಲ್ಯಾದ ಸೀಮೆಯಲ್ಲಿ ವಾಸವಾಗಿದ್ದ ಅನ್ಯಜನರು ತಮ್ಮ ಗಡಿನಾಡಿನಲ್ಲಿ ವಾಸವಾಗಿದ್ದ ಇಸ್ರಯೇಲರನ್ನು ಸಂಹರಿಸಬೇಕೆಂದು ಒಟ್ಟಾಗಿ ಕೂಡಿಕೊಂಡರು. ಅಲ್ಲಿನ ಇಸ್ರಯೇಲರು ದಾತಮಾ ದುರ್ಗಕ್ಕೆ ಓಡಿಹೋಗಿ, 10ಯೂದನಿಗೂ ಅವನ ಸಹೋದರರಿಗೂ ಕಾಗದಗಳನ್ನು ಕಳುಹಿಸಿ, "ನಮ್ಮ ನೆರೆಹೊರೆಯಲ್ಲಿರುವ ಅನ್ಯಜನರು ನಮ್ಮನ್ನು ಸಂಹರಿಸಬೇಕೆಂದು ಒಟ್ಟಾಗಿ ಕೂಡಿಕೊಂಡಿದ್ದಾರೆ. 11ಅಲ್ಲದೆ ಆಶ್ರಯಕ್ಕಾಗಿ ನಾವು ಓಡಿಬಂದಿರುವ ಈ ದುರ್ಗವನ್ನೂ ಕೈವಶಮಾಡಿಕೊಳ್ಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ತಿಮೊಥೆಯನೆಂಬವನು ಅವರ ದಂಡಿಗೆ ನಾಯಕನಾಗಿದ್ದಾನೆ; 12ನಮ್ಮಲ್ಲಿಯ ಅನೇಕರು ಆಗಲೇ ಬಿದ್ದುಹೋಗಿದ್ದಾರೆ. ಈ ಕಾರಣ ಬಂದು ಅವರ ಕೈಯಿಂದ ನಮ್ಮನ್ನು ಬಿಡಿಸಿ ರಕ್ಷಣೆಮಾಡಿ. 13ಟೋಬ್ ಸೀಮೆಯಲ್ಲಿದ್ದ ನಮ್ಮ ಸಹೋದರರನ್ನೆಲ್ಲಾ ಕೊಂದು ಹಾಕಿ, ಅವರ ಮಡದಿಮಕ್ಕಳನ್ನು ಅವರ ಆಸ್ತಿ ಸಹಿತವಾಗಿ ಸೆರೆಹಿಡಿದುಕೊಂಡು ಹೋಗಿದ್ದಾರೆ; 14ಅಲ್ಲಿ ಸುಮಾರು ಸಾವಿರ ಜನ ಗಂಡಸರನ್ನು ಸಂಹರಿಸಿದ್ದಾರೆ," ಎಂದು ತಿಳಿಸಿದರು. ಈ ಕಾಗದಗಳನ್ನು ಓದುತ್ತಿರುವಾಗಲೇ ಗಲಿಲೇಯದಿಂದ ಬೇರೆ ಸುದ್ದಿಗಾರರು, ದುಃಖದಿಂದ ತಮ್ಮ ಬಟ್ಟೆಗಳನ್ನು ಹರಿದುಕೊಂಡವರಾಗಿ ಬಂದು, "ಪ್ಟೊಲೆಮಾಯದ ಜನರೂ, ಟೈರ್, ಸಿದೋನಿನವರೂ 15ಅನ್ಯಜನಗಳಿರುವ ಗಲಿಲೇಯದವರೆಲ್ಲರೂ ನಮ್ಮನ್ನು ನಿರ್ಮೂಲಮಾಡಬೇಕೆಂದು ಒಟ್ಟುಗೂಡಿದ್ದಾರೆ," ಎಂದು ತಿಳಿಸಿದರು.

16 ಯೂದನೂ ಅವನ ಜನರೂ ಈ ಸುದ್ದಿಯನ್ನು ಕೇಳಿ, ಸಂಕಟಕ್ಕೊಳಗಾಗಿದ್ದ ಹಾಗೂ ಪರರ ದಾಳಿಗೆ ಈಡಾಗಿದ್ದ ತಮ್ಮ ಸಹೋದರರಿಗಾಗಿ ಏನು ಮಾಡಬೇಕೆಂದು ಆಲೋಚಿಸುವುದಕ್ಕಾಗಿ ದೊಡ್ಡದೊಂದು ಸಭೆಯನ್ನು ಕರೆಯಿಸಿದರು. 17ಆಗ ಯೂದನು ತನ್ನ ಅಣ್ಣನಾದ ಸಿಮೋನನಿಗೆ, "ನೀನು ಆಳುಗಳನ್ನು ಆಯ್ದುಕೊಂಡು ಗಲಿಲೇಯದಲ್ಲಿರುವ ನಿನ್ನ ನಾಡಿನವರನ್ನು ವಿಮೋಚನೆಮಾಡು; ನಾನೂ ತಮ್ಮನಾದ ಯೋನಾತನನೂ ಗಿಲ್ಯಾದ ಸೀಮೆಗೆ ಹೋಗುತ್ತೇವೆ," ಎಂದು ಹೇಳಿದನು. 18ತರುವಾಯ ಜುದೇಯವನ್ನು ಕಾಪಾಡಿಕೊಂಡಿರುವುದಕ್ಕೂ ಜನರ ಮುಂದಾಳಾಗಿರುವುದಕ್ಕೂ ಜಕರಿಯನ ಮಗನಾದ ಜೋಸೆಫನನ್ನೂ ಅಜರ್ಯನನ್ನೂ ಇನ್ನುಳಿದ ದಂಡಿನೊಂದಿಗೆ ಅಲ್ಲಿಯೇ ಬಿಟ್ಟನು. 19ಅನಂತರ ಅವರಿಗೆ, "ನೀವು ಈ ಜನರನ್ನು ನೋಡಿಕೊಂಡಿರಿ; ನಾವು ತಿರುಗಿ ಬರುವವರೆಗೆ ಅನ್ಯಜನಗಳೊಂದಿಗೆ ಯುದ್ಧಹೂಡಬೇಡಿ," ಎಂದು ಆಜ್ಞಾಪಿಸಿದನು. 20ಬಳಿಕ ಸಿಮೋನನೊಂದಿಗೆ ಗಲಿಲೇಯಕ್ಕೆ ಹೋಗಲು ಮೂರು ಸಾವಿರ ಜನರನ್ನೂ ಯೂದನೊಂದಿಗೆ ಗಿಲ್ಯಾದ ಸೀಮೆಗೆ ಹೋಗಲು ಎಂಟು ಸಾವಿರ ಜನರನ್ನೂ ಬೇರೆ ಬೇರೆ ಮಾಡಿದರು.

### ಗಲಿಲೇಯ ಮತ್ತು ಗಿಲ್ಯಾದ ಪ್ರಾಂತ್ಯಗಳಲ್ಲಿ ಹೋರಾಟ

21 ಸಿಮೋನನು ಗಲಿಲೇಯಕ್ಕೆ ಹೋಗಿ ಅನ್ಯಜನಗಳೊಂದಿಗೆ ಅನೇಕ ಯುದ್ಧಗಳನ್ನು ಮಾಡಿದನು; ಅವರು ಅವನ ಮುಂದೆ ನಿಲ್ಲಲಾಗದೆ ಸೋತುಹೋದರು. 22ಅವನು ಅವರನ್ನು ಪ್ತೊಲೆಮಾಯದ ಹೆಬ್ಬಾಗಿಲಿನವರೆಗೂ ಬೆನ್ನಟ್ಟಿದನು. ಅಂದು ಅನ್ಯರಲ್ಲಿ ಮೂರು ಸಾವಿರ ಜನರು ಹತರಾದರು. 23ಅವನು ಅವರನ್ನು ಸೂರೆ ಮಾಡಿದನು. ಅನಂತರ ಅವರು ಗಲಿಲೇಯ ಪ್ರಾಂತ್ಯದಲ್ಲಿಯೂ ಅರ್ಬಟ್ಟ ಎಂಬಲ್ಲಿಯೂ ಇದ್ದ ಯೆಹೂದ್ಯರನ್ನು, ಅವರ ಮಡದಿಮಕ್ಕಳು, ಆಸ್ತಿಪಾಸ್ತಿ ಮೊದಲಾದವುಗಳೊಂದಿಗೆ ಕರೆದುಕೊಂಡು ಬಹು ಸಂಭ್ರಮದಿಂದ ಜುದೇಯಕ್ಕೆ ಹಿಂದಿರುಗಿ ಬಂದರು.

24 ಯೂದಮಕ್ಕಬಿಯನು ಮತ್ತು ಅವನ ತಮ್ಮ ಯೋನಾತನನು ಜೋರ್ಡನ್ ನದಿಯನ್ನು ದಾಟಿ, 25ಮೂರು ದಿನ ಮರುಭೂಮಿಯಲ್ಲಿ ಪ್ರಯಾಣ ಮಾಡಿದನಂತರ ನಬತಾಯರನ್ನು ಸಂಧಿಸಿದರು; ಅವರು ಸಮಾಧಾನದಿಂದ ಇವರ ಬಳಿಗೆ ಬಂದು, ಗಿಲ್ಯಾದ ಪ್ರಾಂತ್ಯದಲ್ಲಿದ್ದ ಇವರ ಸಹೋದರರಿಗೆ ಸಂಭವಿಸಿದುದೆಲ್ಲವನ್ನೂ ತಿಳಿಯಪಡಿಸಿದರು. 26ಅವರಲ್ಲಿ ಅನೇಕರು, ಬೋಚ್ರ, ಬೊಸೋರ್, ಎಲೆಮ, ಕಾಸ್ಫೋರ್, ಮಾಕೇಡ್ ಮತ್ತು ಕರ್ನಯಿಮ್ ಎಂಬೀ ಪ್ರಬಲವಾದ ಮಹಾನಗರಗಳಲ್ಲಿ ಹೇಗೆ ಬಂಧಿತರಾದರೆಂಬುದನ್ನು, ಅವರು ಗಿಲ್ಯಾದ್ ಪ್ರಾಂತ್ಯದ ಉಳಿದ ಪಟ್ಟಣಗಳಲ್ಲಿ ಹೇಗೆ ತಡೆಹಾಕಲ್ಪಟ್ಟರೆಂಬುದನ್ನು 27ಹಾಗು ನಾಳಿನ ದಿನವೇ ಶತ್ರುಗಳು ಅವರ ದುರ್ಗಗಳ ಬಳಿ ಬೀಡುಬಿಟ್ಟುಕೊಂಡು ಅವರನ್ನು ಹಿಡಿದು ಒಂದೇ ದಿನದಲ್ಲಿ ಸಂಹರಿಸಿಬಿಡಬೇಕೆಂದಿದ್ದಾರೆ ಎಂಬುದನ್ನೂ ವಿವರಿಸಿದರು. 28ಇದನ್ನು ಕೇಳಿ ಯೂದನೂ ಅವನ ಯೋಧರೂ ಇದ್ದಕ್ಕಿದ್ದಂತೆಯೇ ಅರಣ್ಯಮಾರ್ಗವಾಗಿ ಬೋಚ್ರದ ಕಡೆಗೆ ತಿರುಗಿ ಆ ಪಟ್ಟಣವನ್ನು ಹಿಡಿದುಕೊಂಡರು. ಅಲ್ಲಿದ್ದ ಗಂಡಾಳುಗಳನ್ನೆಲ್ಲಾ ಕತ್ತಿಯಿಂದ ಸಂಹರಿಸಿದರು. ಆ ಪಟ್ಟಣವನ್ನು ಸುಟ್ಟುಬಿಟ್ಟರು. 29ತರುವಾಯ ಅವನು ರಾತ್ರಿಯಲ್ಲಿಯೇ ಅಲ್ಲಿಂದ ಹೊರಟು ದಾತೆಮಾ ದುರ್ಗವನ್ನು ಮುಟ್ಟುವವರೆಗೆ ಪ್ರಯಾಣ ಮಾಡಿದನು. 30ಹೊತ್ತುಹರಿದಾಗ ಅವರು ಕಣ್ಣೆತ್ತಿ ನೋಡಲು, ಏಣಿಗಳನ್ನೂ ಯುದ್ಧ ಯಂತ್ರಗಳನ್ನೂ ಸಜ್ಜುಮಾಡಿಕೊಂಡು ಆ ದುರ್ಗವನ್ನು ಹಿಡಿದುಕೊಳ್ಳಬೇಕೆಂದು ಅಲ್ಲಿದ್ದವರ ಮೇಲೆ ಯುದ್ಧಮಾಡುತ್ತಿದ್ದ ಅಸಂಖ್ಯ ಜನರ ಗುಂಪೊಂದು ಅವರ ಕಣ್ಣಿಗೆ ಬಿದ್ದಿತು. 31ಯೂದನು, ಯುದ್ಧವು ಆಗಲೇ ಆರಂಭವಾಗಿದ್ದುದನ್ನೂ ತುತೂರಿಯ ಧ್ವನಿಯೂ ಪಟ್ಟಣದವರ ಆರ್ತಸ್ವರವೂ ಆಕಾಶಕ್ಕೆ ಏರುತ್ತಿರುವುದನ್ನೂ ಕಂಡನು. 32ತನ್ನ ಸೈನಿಕರಿಗೆ, "ಇಂದು ನಿಮ್ಮ ಸಹೋದರರ ಪರವಾಗಿ ಹೋರಾಡಿ," ಎಂದು ಹೇಳಿದನು. 33ತರುವಾಯ ಅವನು ಅವರನ್ನು ಮೂರು ಗುಂಪುಮಾಡಿ, ಶತ್ರುಗಳ ಮೇಲೆ ದಾಳಿಮಾಡಹೋದನು. ಆಗ ಅವರು ತುತೂರಿಗಳನ್ನು ಊದಿ ದೇವರ ಹೆಸರನ್ನೆತ್ತಿ ಆರ್ಭಟಿಸಿದರು. 34ತಿಮೊಥೆಯನ ಸೈನ್ಯವು, ತಮ್ಮ ಹಿಂದೆ ಬಂದುದು ಮಕ್ಕಬಿಯನ ಸೈನ್ಯವೆಂದು ಅರಿತೊಡನೆ, ಅಲ್ಲಿಂದ ಪಲಾಯನ ಮಾಡಿತು. ಯೂದನು ಬಹುಜನರನ್ನು ಸಂಹರಿಸಿದನು. ಅಂದು ಅವರಲ್ಲಿ ಎಂಟು ಸಾವಿರ ಜನರು ಹತರಾದರು. 35ಅಲ್ಲಿಂದ ಅವನು ಮಾಫದ ಕಡೆಗೆ ತಿರುಗಿಕೊಂಡು

ಯುದ್ಧಮಾಡಿ ಅದನ್ನು ಕೈವಶಮಾಡಿಕೊಂಡು ಅಲ್ಲಿದ್ದ ಗಂಡಸರನ್ನೆಲ್ಲಾ ಸಂಹರಿಸಿ, ಅದನ್ನು ಸುಲಿಗೆಮಾಡಿ, ಸುಟ್ಟು ಬಿಟ್ಟನು. 36ಅಲ್ಲಿಂದ ಅವನು ಹೊರಟು ಗಿಲ್ಯಾದ ಸೀಮೆಯಲ್ಲಿದ್ದ ಕಾಸ್ಫೋರ್, ಮಾಕೇಡ್, ಬೊಸೋರ್ ಮುಂತಾದ ಪಟ್ಟಣಗಳನ್ನು ಹಿಡಿದುಕೊಂಡನು. 37ಇವುಗಳಾದ ಮೇಲೆ ತಿಮೊಥೆಯನು ಮತ್ತೊಂದು ದಂಡನ್ನು ಕೂಡಿಸಿಕೊಂಡು ಹಳ್ಳದ ಆಚೆಯಿದ್ದ ರಾಫೋನಿನ ಎದುರಾಗಿ ಇಳಿದುಕೊಂಡನು. 38ಯೂದನು ಆ ಸೈನ್ಯದ ರಹಸ್ಯವನ್ನು ತಿಳಿದುಕೊಂಡುಬರಲು ಜನರನ್ನು ಕಳುಹಿಸಿದನು. ಅವರು, "ನಮ್ಮ ಸುತ್ತಮುತ್ತಲಿರುವ ಅನ್ಯಜನಗಳೆಲ್ಲಾ ಅವರನ್ನು ಕೂಡಿಕೊಂಡಿದ್ದಾರೆ; ಅತಿ ದೊಡ್ಡದಾದ ಸೈನ್ಯವದು. 39ಇದಲ್ಲದೆ, ತಮ್ಮ ನೆರವಿಗಾಗಿ ಅರಬ್ಬಿಯರನ್ನು ಸಂಬಳ ಕೊಟ್ಟು ಇಟ್ಟುಕೊಂಡಿದ್ದಾರೆ; ಅವರೆಲ್ಲಾ ಹಳ್ಳದ ಆಚೆ ಬೀಡುಬಿಟ್ಟುಕೊಂಡಿದ್ದು ನಿಮ್ಮ ಮೇಲೆ ಯುದ್ಧಕ್ಕೆ ಬರಲು ಸಿದ್ಧರಾಗಿದ್ದಾರೆ," ಎಂದು ಹೇಳಿದರು. ಆಗ ಯೂದನು ಅವರನ್ನು ಸಂಧಿಸಲು ಹೋದನು. 40ಯೂದನೂ ಅವನ ಸೈನ್ಯದವರೂ ಹಳ್ಳದ ಸಮೀಪಕ್ಕೆ ಬಂದಾಗ ತಿಮೊಥೆಯನು ತನ್ನ ದಳವಾಯಿಗಳಿಗೆ, "ಅವನು ಮುಂದಾಗಿ ಹಳ್ಳವನ್ನು ದಾಟಿ, ನಮ್ಮ ಕಡೆಗೆ ಬಂದಲ್ಲಿ ಅವನನ್ನು ಎದುರಿಸಲು ನಾವು ಶಕ್ತರಾಗುವುದಿಲ್ಲ; ಏಕೆಂದರೆ ಅವನು ನಮ್ಮನ್ನು ಪೂರ್ತಿಯಾಗಿ ಸೋಲಿಸುವನು. 41ಆದರೆ ಅವನು ಅಂಜಿಕೊಂಡು ಹಳ್ಳದ ಆಚೆಯೇ ದಂಡಿಳಿಸಿದಲ್ಲಿ, ನಾವು ಅವನ ಕಡೆಗೆ ದಾಟಿ ಹೋಗಿ ಅವನನ್ನು ಹತ್ತಿಕ್ಕೋಣ," ಎಂದು ಹೇಳಿದನು.

42 ಯೂದನು ಹಳ್ಳದ ಸಮೀಪಕ್ಕೆ ಬಂದಾಗ ಸಹಾಯಕ ಅಧಿಕಾರಿಗಳನ್ನು ಹಳ್ಳದ ಬದಿಯಲ್ಲಿಯೇ ಇರುವಂತೆ ಮಾಡಿ ಅವರಿಗೆ, "ಒಬ್ಬನೂ ಇಲ್ಲಿ ನೆಲಸದಂತೆ ನೋಡಿಕೊಳ್ಳಿ, ಎಲ್ಲರೂ ಯುದ್ಧಕ್ಕೆ ಬರಲಿ," ಎಂದು ಅಪ್ಪಣೆಕೊಟ್ಟು, ತಾನು ಮುಂದಾಗಿ ಹಳ್ಳವನ್ನು ದಾಟಿದನು. 43ಅವನ ಹಿಂದೆ ಎಲ್ಲ ಜನರೂ ದಾಟಿದರು. ಅನ್ಯಜನಗಳು ಎಲ್ಲರೂ ಅವನ ಮುಂದೆ ನಿಲ್ಲದೆ ಸೋತು ತಮ್ಮ ಆಯುಧಗಳನ್ನೆಲ್ಲಾ ಬಿಸಾಡಿ, ಕರ್ನಯಿಮ್ ಎಂಬಲ್ಲಿದ್ದ ಗುಡಿಯ ಕಡೆಗೆ ಓಡಿಹೋದರು. 44ಯೂದನ ಜನರು ಪಟ್ಟಣವನ್ನು ಹಿಡಿದುಕೊಂಡು ಆ ಗುಡಿಯನ್ನು ಅದರಲ್ಲಿದ್ದವರೊಂದಿಗೆ ಸುಟ್ಟುಬಿಟ್ಟರು. ಅಲ್ಲಿದ್ದವರಿಗೆ ಯೂದನ ಮುಂದೆ ಹೆಚ್ಚುಕಾಲ ತಡೆಯುವುದಕ್ಕಾಗಲಿಲ್ಲ. ಕರ್ನಯಿಮ್ ಕೈವಶವಾಯಿತು.

45 ತರುವಾಯ ಯೂದನು ಗಿಲ್ಯಾದ ಸೀಮೆಯಲ್ಲಿದ್ದ ಇಸ್ರಯೇಲರೆಲ್ಲರು ತಮ್ಮ ಮಡದಿ ಮಕ್ಕಳು ಮತ್ತು ಸೊತ್ತು ಸಹಿತವಾಗಿ ಜುದೇಯ ನಾಡಿಗೆ ಬರಬೇಕೆಂದು ಹೇಳಿ ಅವರಲ್ಲಿ ಉಚ್ಚರು, ನೀಚರು ಎನ್ನದೆ ಎಲ್ಲರನ್ನೂ ಒಟ್ಟಿಗೆ ಸೇರಿಸಿದನು; ಅವರದೊಂದು ದೊಡ್ಡ ಗುಂಪೇ ಆಯಿತು. ಅವರೆಲ್ಲರು ಎಫ್ರೋನದ ಕಡೆಗೆ ಬಂದರು. 46ಈ ಪಟ್ಟಣವು ದೊಡ್ಡದೂ ದುರ್ಗಮಯವೂ ಆಗಿದ್ದು, ಅವರು ಹೋಗಲಿದ್ದ ಹಾದಿಯಲ್ಲಿಯೇ ಇದ್ದಿತು. ಅವರು ಅದನ್ನು ಬಿಟ್ಟು ಬಲಕ್ಕಾದರೂ ಎಡಕ್ಕಾದರೂ ಹೋಗಲಿಕ್ಕೆ ಆಗುತ್ತಿರಲಿಲ್ಲ. ಅದರ ನಡುವೆಯೇ ಹಾದುಹೋಗಬೇಕಾಗಿತ್ತು. 47ಆದರೆ ಆ ಪಟ್ಟಣಿಗರು ಅವರಿಗೆದುರಾಗಿ ತಮ್ಮ ಹೆಬ್ಬಾಗಿಲುಗಳನ್ನು ಮುಚ್ಚಿ, ಅವುಗಳನ್ನು ಬಂಡೆಗಳಿಂದ ಭದ್ರಪಡಿಸಿದರು. 48ಯೂದನು ಅವರಿಗೆ, "ನಮ್ಮ ನಾಡಿಗೆ ಹೋಗುವ ಈ ವೇಳೆಯಲ್ಲಿ ನಿಮ್ಮ ಸೀಮೆಯನ್ನು ಹಾಯ್ದು ಹೋಗುತ್ತೇವೆ, ಅಷ್ಟೇ; ನಿಮಗೆ ಯಾವ ಕೇಡನ್ನೂ ಮಾಡುವುದಿಲ್ಲ; ನಾವು ಕಾಲುನಡಿಗೆಯಿಂದಲೇ ಹೋಗುತ್ತೇವೆ," ಎಂದು ಸಮಾಧಾನದ ಮಾತುಗಳನ್ನು ಹೇಳಿ ಕಳುಹಿಸಿದನು. ಆದರೂ ಅವರು ಬಾಗಿಲನ್ನು ತೆರೆಯಲೇ ಇಲ್ಲ. 49ಬಳಿಕ ಯೂದನು, "ಜನಸ್ತೋಮವೆಲ್ಲಾ ತಾವಿರುವಲ್ಲಿಯೇ ಬಿಡಾರ ಮಾಡಿಕೊಳ್ಳಲಿ," ಎಂದು ತನ್ನ ದಂಡಿನಲ್ಲಿ ಸಾರಿಹೇಳಲು ಆಜ್ಞಾಪಿಸಿದನು. 50ಆ ಸೈನಿಕರು ಬೀಡುಬಿಟ್ಟುಕೊಂಡು ಆ ದಿನ ಹಗಲೂ ಇರುಳೂ ಆ ಪಟ್ಟಣದ ಮೇಲೆ ದಾಳಿಮಾಡಿದರು. ಅದು ಅವರ ಕೈವಶವಾಯಿತು. 51ಅವನು ಅಲ್ಲಿದ್ದ ಗಂಡಸರನ್ನೆಲ್ಲಾ ಕತ್ತಿಯಿಂದ ಸಂಹರಿಸಿದನು ಮತ್ತು ಪಟ್ಟಣವನ್ನು ನಿರ್ಮೂಲಮಾಡಿ, ಅಲ್ಲಿ ಇದ್ದುದನ್ನೆಲ್ಲಾ ದೋಚಿಕೊಂಡು, ಅಲ್ಲಿ ಮಡಿದವರ ಶವಗಳನ್ನು ದಾಟಿ ಪಟ್ಟಣದೊಳಗೆ ಹಾದು ಹೋದನು. 52ಆಮೇಲೆ ಅವರು ಜೋರ್ಡನ್ ಹೊಳೆಯನ್ನು ದಾಟಿ, ಬೇತ್‌ಶಾನದ ಎದುರಿಗಿರುವ ದೊಡ್ಡ ಬಯಲಿಗೆ ಬಂದು ತಲುಪಿದರು. 53ಅಲ್ಲಿಂದ ಜುದೇಯ ಪ್ರಾಂತ್ಯವನ್ನು ಮುಟ್ಟುವವರೆಗೆ, ಹಿಂದೆ ಬಿದ್ದವರನ್ನು ಕೂಡಿಸಿಕೊಳ್ಳುತ್ತಾ ಜನರನ್ನು ಹುರಿದುಂಬಿಸುತ್ತಾ ಬಂದನು. 54ಅವರು ಆನಂದೋಲ್ಲಾಸದಿಂದ ಸಿಯೋನ್ ಗಿರಿಯ ಮೇಲೆ ಏರಿ, ತಾವೆಲ್ಲಾ ಸಮಾಧಾನದಿಂದ ಹಿಂದಿರುಗಿ ಬರುವವರೆಗೆ ತಮ್ಮಲ್ಲಿ ಒಬ್ಬರೂ ಅಳಿಯದೆ ಇದ್ದುದನ್ನು ಸ್ಮರಿಸಿಕೊಂಡು ದಹನಬಲಿದಾನಗಳನ್ನು ಸಮರ್ಪಿಸಿದರು.

## ಯಬ್ನೆಲಿನಲ್ಲಿ ಸೋಲು

55 ಯೂದನೂ ಯೋನಾತನನೂ ಗಿಲ್ಯಾದ ಸೀಮೆಯಲ್ಲಿ ಹಾಗು ಅವನ ಅಣ್ಣ ಸಿಮೋನನು ಪ್ತೊಲೆಮಾಯನ ವಿರುದ್ಧ ಗಲಿಲೇಯದಲ್ಲಿ ಹೋರಾಡುತ್ತಿದ್ದರು. 56ಆಗ ದುರ್ಗರಕ್ಷಕರ ನಾಯಕರಾಗಿದ್ದ ಜಕರಿಯನ ಮಗ ಜೋಸೆಫನು ಮತ್ತು ಅಜರ್ಯನು ಅವರು ಮಾಡಿದ ಸಾಹಸ, ಯುದ್ಧ ಮೊದಲಾದ ಎಲ್ಲ ಕಾರ್ಯಗಳ ಸಮಾಚಾರ ಕೇಳಿದ್ದರು. 57"ನಾವೂ ಹೆಸರು ಗಳಿಸೋಣ, ನಮ್ಮ ನೆರೆಹೊರೆಯಲ್ಲಿರುವ ಅನ್ಯ ಜನಗಳ ಸಂಗಡ ಯುದ್ಧಮಾಡೋಣ," ಎಂದುಕೊಂಡರು. 58ತಮ್ಮ ಬಳಿಯಲ್ಲಿದ್ದ ಸೈನಿಕರಿಗೆ ಅಪ್ಪಣೆಕೊಟ್ಟು ಯಮ್ನಿಯದ ಕಡೆಗೆ ನಡೆದರು. 59ಗೊರ್ಗಿಯನೂ ಅವನ ಜನರೂ ಅವರೊಂದಿಗೆ ಯುದ್ಧಮಾಡಲು ಪಟ್ಟಣದ ಹೊರಗೆ ಬಂದರು. 60ಜೋಸೆಫ ಮತ್ತು ಅಜರ್ಯ ಪಲಾಯನ ಮಾಡಿದುದಲ್ಲದೆ ಜುದೇಯದ ಗಡಿಯವರೆಗೂ ಬೆನ್ನಟ್ಟಲ್ಪಟ್ಟರು. ಅಂದು ಇಸ್ರಯೇಲರಲ್ಲಿ ಸುಮಾರು ಎರಡು ಸಾವಿರ ಜನರು ಹತರಾದರು. 61ಅವರು ಯೂದನ ಮತ್ತು ಅವನ ಸಹೋದರರ ಮಾತನ್ನು ಕೇಳದೆ, ತಾವೇ ಸಾಹಸಮಾಡಲು ಆಶೆಪಟ್ಟಿದ್ದರಿಂದ, ಜನರು ಈ ಅನಾಹುತಕ್ಕೆ ಒಳಗಾಗಬೇಕಾಯಿತು. 62ಏಕೆಂದರೆ, ಯಾರ ಕೈಯಿಂದ ಇಸ್ರಯೇಲರಿಗೆ ಬಿಡುಗಡೆ ಉಂಟಾಯಿತೋ ಅವರ ಬುಡಕಟ್ಟಿಗೆ ಇವರು ಸೇರಿದವರಾಗಿರಲಿಲ್ಲ.

## ಇದುಮೇಯ – ಫಿಲಿಷ್ಟಿಯಗಳಲ್ಲಿ ಮುನ್ನಡೆ

63 ಯೂದನೂ ಅವನ ಸಹೋದರರೂ ಎಲ್ಲ ಇಸ್ರಯೇಲರ ದೃಷ್ಟಿಯಲ್ಲಿ ಹಾಗು ಅವರ ಹೆಸರನ್ನು ಕೇಳಿದ ಎಲ್ಲ ಅನ್ಯಜನಗಳ ದೃಷ್ಟಿಯಲ್ಲಿ ದೊಡ್ಡ ಗೌರವಕ್ಕೆ ಪಾತ್ರರಾದರು. 64ಜನರು ಜಯಘೋಷದಿಂದ ಅವರನ್ನು ಸಂಧಿಸಲು ಬರುತ್ತಿದ್ದರು.

65 ಯೂದನೂ ಅವನ ಸಹೋದರರೂ ಏಸಾವನ ಸಂತತಿಯವರ ವಿರುದ್ಧ ದಂಡೆತ್ತಿ ಹೋಗಿ ಅವರೊಂದಿಗೆ ದಕ್ಷಿಣ ಸೀಮೆಯಲ್ಲಿ ಯುದ್ಧಮಾಡಿದರು. ಯೂದನು ಹೆಬ್ರೋನಿನ ಹಾಗು ಅದರ ನೆರೆಯಲ್ಲಿದ್ದ ಹಳ್ಳಿಗಳ ಮೇಲೆ ದಾಳಿಮಾಡಿ, ಅದರ ದುರ್ಗಗಳನ್ನು ಕೆಡವಿ, ಸುತ್ತಮುತ್ತಲಿದ್ದ ಬುರುಜುಗಳನ್ನು ಸುಟ್ಟುಬಿಟ್ಟನು. 66ಅಲ್ಲಿಂದ ಫಿಲಿಷ್ಟಿಯರ ಸೀಮೆಗೆ ಹೋಗಬೇಕೆಂದು ಹೊರಟು ಸಮಾರಿಯವನ್ನು ಹಾದುಹೋದನು. 67ಆ ದಿನದಲ್ಲಿ ಕೆಲವು ಜನ ಯಾಜಕರು, ಸಾಹಸಕಾರ್ಯಗಳನ್ನು ಮಾಡುವ ಆಶೆಯಿಂದ, ಮುಂದಾಲೋಚನೆಯಿಲ್ಲದೆ ಯುದ್ಧಕ್ಕೆ ಹೋಗಿ ಹತರಾದರು. 68ಯೂದನು ಫಿಲಿಷ್ಟಿಯರ ಸೀಮೆಯಲ್ಲಿರುವ ಅಜೋತಿನ ಕಡೆಗೆ ತಿರುಗಿಕೊಂಡು, ಅವರ ಬಲಿಪೀಠಗಳನ್ನು ಕೆಡವಿ, ಅವರ ದೇವರುಗಳ ವಿಗ್ರಹಗಳನ್ನು ಸುಟ್ಟು, ಪಟ್ಟಣಗಳನ್ನು ಸುಲಿದುಕೊಂಡು, ಜುದೇಯ ನಾಡಿಗೆ ಹಿಂದಿರುಗಿ ಬಂದನು.

## ನಾಲ್ಕನೇ ಅಂತಿಯೋಕನ ಮರಣ

(1 ಮಕ್ಕಬಿ 1.11–17; 9.1–29; 10.9–11)

**6** ಅರಸ ಅಂತಿಯೋಕನು ಮೆಸಪಟೋಮಿಯದಲ್ಲಿ ಸಂಚಾರಮಾಡುತ್ತಿದ್ದನು. ಪರ್ಷಿಯಾದಲ್ಲಿದ್ದ ಎಲಿಮಾ ಎಂಬಲ್ಲಿ ಒಂದು ಊರು ಸಿರಿಸಂಪತ್ತು. ಬೆಳ್ಳಿಬಂಗಾರಗಳಿಗೆ ಹೆಸರಾಗಿದೆ, ಅಲ್ಲಿದ್ದ ಒಂದು ದೇವಾಲಯ ಅಪಾರ ನಿಧಿಯುಳ್ಳದ್ದಾಗಿದೆ, 2ಮೊದಲು ಗ್ರೀಸ್ ದೇಶವನ್ನು ಆಳುತ್ತಿದ್ದ ಮ್ಯಾಸಿಡೋನಿಯದ ಅರಸ ಫಿಲಿಪ್ಪನ ಮಗ ಅಲೆಕ್ಸಾಂಡರನು ಬಿಟ್ಟುಹೋಗಿದ್ದ ಚಿನ್ನದ ಡಾಲೂ ಕವಚಗಳೂ ಅದರಲ್ಲಿಯೇ ಇವೆ ಎಂಬ ಸಮಾಚಾರವನ್ನು ಅವನು ಕೇಳಿದ್ದನು. 3ಆ ಊರನ್ನು ಹಿಡಿದುಕೊಂಡು ಸುಲಿಗೆ ಮಾಡಬೇಕೆಂಬ ಹವಣಿಕೆಯಿಂದ ಅಲ್ಲಿಗೆ ಬಂದನು. ಆದರೆ ಅವನಿಗೆ ಅದು ಸಾಧ್ಯವಾಗಲಿಲ್ಲ. 4ಏಕೆಂದರೆ ಈ ಸುದ್ದಿ ಆ ಊರೊಳಗಿದ್ದ ಜನರಿಗೆ ಮುಟ್ಟಲು ಅವರು ಅವನ ಸಂಗಡ ಯುದ್ಧ ಮಾಡಿದರು. ಅವನು ಬಹು ವ್ಯಸನಕ್ರಾಂತನಾಗಿ ಅಲ್ಲಿಂದ ಕಾಲುಕಿತ್ತು, ಬಾಬಿಲೋನಿಗೆ ಹಿಂದಿರುಗಿದನು.

5 ಇದಲ್ಲದೆ ಅಂತಿಯೋಕನು ಪರ್ಷಿಯಾದಲ್ಲಿದ್ದಾಗ ಒಬ್ಬನು ಬಂದು, ಅವನಿಗೆ ಹೀಗೆಂದು ವರದಿಮಾಡಿದನು: "ಜುದೇಯದ ವಿರುದ್ಧ ಹೋಗಿದ್ದ ಸೈನ್ಯವೆಲ್ಲಾ ಹಿಂದೂಡಲ್ಪಟ್ಟಿತು. 6ಮೊದಲು ಅಪಾರ

ಬಲದೊಂದಿಗೆ ಹೋದ ಲೂಸ್ಯನು ನಾಚಿಕೆಗೀಡಾಗಿ ಹಿಂದಿರುಗಿದನು. ಅವನ ಸೈನ್ಯದವರು ಬಿಟ್ಟುಹೋಗಿದ್ದ ಎಲ್ಲವನ್ನು ಜುದೇಯದವರು ದೋಚಿಕೊಂಡು ಹೋದರು. ಆದುದರಿಂದ ಈಗ ಅವರು ಶಸ್ತ್ರಾಸ್ತ್ರಗಳುಳ್ಳವರಾಗಿ ಪರಾಕ್ರಮದ ವಿಷಯಗಳಲ್ಲಿ ಯಾವ ಕೊರತೆಯೂ ಇಲ್ಲದೆ ಬಲಾಢ್ಯರಾಗಿದ್ದಾರೆ.
7ಜೆರುಸಲೇಮಿನಲ್ಲಿದ್ದ ಬಲಿಪೀಠದ ಮೇಲೆ ನೀವು ಕಟ್ಟಿಸಿದ್ದ 'ವಿನಾಶಕರ ವಿಕಟಮೂರ್ತಿ'ಯನ್ನು ಕೆಡವಿ ಹಾಕಿದ್ದಾರೆ. ದೇವಾಲಯದ ಸುತ್ತಲೂ ಮೊದಲಿನಂತೆ ಎತ್ತರವಾದ ಗೋಡೆಗಳನ್ನು ಕಟ್ಟಿಸಿದ್ದಾರೆ. ಇದಲ್ಲದೆ, ನಿಮಗೆ ಸೇರಿದ ಬೇತ್ಸೂರ ಊರನ್ನು ಭದ್ರಗೊಳಿಸಿದ್ದಾರೆ," ಎಂದರು.
8ಅರಸನು ಈ ಸುದ್ದಿಯನ್ನು ಕೇಳಿ ಆಶ್ಚರ್ಯ ಚಕಿತನಾದನು ಹಾಗು ಬಹು ಖಿನ್ನನಾದನು. ತಾನು ಹಾರೈಸಿದಂತೆ ಆಗದಿದ್ದುದನ್ನು ಕಂಡು ದುಃಖಕ್ರಾಂತನಾಗಿ ನೊಂದು, ಹಾಸಿಗೆ ಹಿಡಿದನು.
9ಅವನು ಬಹು ದುಃಖಿತನಾಗಿ ಇನ್ನು ಸಾಯುವುದೇ ಲೇಸೆಂದೆಣಿಸಿ ಅಲ್ಲಿಯೇ ಬಹುದಿನದವರೆಗೆ ನಿಂತುಬಿಟ್ಟನು.
10ತನ್ನ ಸ್ನೇಹಿತರನ್ನು ಅಲ್ಲಿಗೆ ಕರೆಸಿಕೊಂಡನು.
11ಅವರಿಗೆ, "ನನ್ನ ಕಣ್ಣಿಗೆ ನಿದ್ರೆಯಿಲ್ಲ; ಚಿಂತೆಯಿಂದ ನನ್ನ ಅಂತರಂಗವು ಕುಂದಿಹೋಗಿದೆ. ನಾನು ನನ್ನ ಅಧಿಕಾರದಲ್ಲಿ ಮೆರೆಯುತ್ತಿದ್ದಾಗ ಜನೋಪಕಾರಿಯೂ ಪ್ರೀತಿ ಪಾತ್ರನೂ ಆಗಿದ್ದೆ; ಆದರೆ ಈಗ ಎಂತಹ ವಿಪತ್ತಿಗೆ ನಾನು ಗುರಿಯಾದೆ; ಎಂತಹ ಮಹಾ ಪ್ರವಾಹದಲ್ಲಿ ನಾನೀಗ ಸಿಕ್ಕಿಬಿದ್ದಿದ್ದೇನೆ!
12ಜೆರುಸಲೇಮಿನಲ್ಲಿ ನಾನು ನಡೆಸಿದ ಅತ್ಯಾಚಾರಗಳ ಸ್ಮರಣೆ ನನಗೀಗ ಬರುತ್ತಿದೆ. ಅಲ್ಲಿದ್ದ ಬೆಳ್ಳಿ ಬಂಗಾರದ ಪಾತ್ರೆಗಳನ್ನೆಲ್ಲ ನಾನು ಅಪಹರಿಸಿದೆ. ಕಾರಣವಿಲ್ಲದೆ ಜುದೇಯದ ನಿವಾಸಿಗಳನ್ನು ನಾಶಮಾಡುವುದಕ್ಕೆ ಜನರನ್ನು ಕಳುಹಿಸಿದೆ.
13ಈ ಕಾರಣದಿಂದಲೇ, ಈಗ ನನ್ನ ಮೇಲೆ ಈ ವಿಪತ್ತು ಬಂದಿದೆ ಎಂದು ನನಗೀಗ ಗೊತ್ತಾಯಿತು. ಆದುದರಿಂದಲೇ ನಾನೀಗ ಚಿಂತಾನುತಾಪದಿಂದ ಪರದೇಶದಲ್ಲಿ ಸಾಯುತ್ತಿದ್ದೇನೆ," ಎಂದು ಹೇಳಿ
14ತನ್ನ ಸ್ನೇಹಿತರಲ್ಲಿ ಒಬ್ಬನಾದ ಫಿಲಿಪ್ಪನೆಂಬವನನ್ನು ಕರೆದು, ಅವನಿಗೆ ತನ್ನ ರಾಜ್ಯವನ್ನೆಲ್ಲಾ ಒಪ್ಪಿಸಿದನು.
15ತನ್ನ ಮುಕುಟವನ್ನು, ವಸ್ತ್ರ ಅಲಂಕಾರಗಳನ್ನು ಹಾಗು ಮುದ್ರೆಯುಂಗುರವನ್ನು ಅವನ ವಶಕ್ಕೆ ಕೊಟ್ಟು, ತನ್ನ ಮಗ ಅಂತಿಕೋಕನು ಅರಸನಾಗುವಂತೆ ಅವನನ್ನು ಸಾಕಿ ಬೆಳೆಸಬೇಕೆಂದು ಹೇಳಿ, ಅವನನ್ನು ಅವನ ಕೈಗೆ ಒಪ್ಪಿಸಿದನು.
16ಅರಸ ಅಂತಿಯೋಕನು 148ನೇ ವರ್ಷ ಅಲ್ಲಿಯೇ ಕಾಲವಾದನು.
17ಅರಸನ ಮರಣವಾರ್ತೆಯನ್ನು ಕೇಳಿದ ಲೂಸ್ಯನು, ತಾನು ಸಾಕಿ ಬೆಳೆಸಿದ ರಾಜಕುಮಾರ ಅಂತಿಯೋಕನನ್ನು 'ಯೂಪಟೋರ್' ಎಂಬ ಹೆಸರಿನಿಂದ ಪಟ್ಟಕ್ಕೆ ಏರಿಸಿದನು.

### ಕೋಟೆಯಲ್ಲಿದ್ದವರ ಮೇಲೆ ಯೂದನ ಮುತ್ತಿಗೆ

18 ಅತ್ತ ಕೋಟೆಯಲ್ಲಿದ್ದವರು ಮಹಾ ಪರಿಶುದ್ಧಾಲಯದ ಸುತ್ತಮುತ್ತಲು ಇಸ್ರಯೇಲರನ್ನು ತಡೆಗಟ್ಟಿ, ಪದೇಪದೇ ಅವರನ್ನು ಪೀಡಿಸುತ್ತಿದ್ದರು. ಅನ್ಯರು ಬಲಗೊಳ್ಳುವುದನ್ನೇ ನೋಡುತ್ತಿದ್ದರು.
19ಯೂದನು ಅವರನ್ನು ನಾಶಮಾಡಿಬಿಡಬೇಕೆಂದು ಆಲೋಚಿಸಿ, ಅವರನ್ನು ಮುತ್ತುವುದಕ್ಕೆ ತನ್ನ ಜನರನ್ನೆಲ್ಲ ಕರೆದನು.
20150ನೆಯ ವರ್ಷದಲ್ಲಿ ಎಲ್ಲರು ಒಂದುಗೂಡಿ ಅವರನ್ನು ಮುತ್ತಿದರು. ಯೂದನು ಮುತ್ತಿಗೆಯ ದಿಬ್ಬಗಳನ್ನೂ ಯುದ್ಧಯಂತ್ರಗಳನ್ನೂ ಮಾಡಿಸಿದನು.
21ಇತ್ತ ಮುತ್ತಲಾದವರಲ್ಲಿ ಕೆಲವರು ತಪ್ಪಿಸಿಕೊಂಡು ಹೊರಗೆ ಬಂದರು. ಆಗ ಅಧರ್ಮಿಗಳಾದ ಕೆಲವು ಜನ ಇಸ್ರಯೇಲರು ಅವರನ್ನು ಕೂಡಿಕೊಂಡು, ಅರಸನ ಬಳಿಗೆ ಹೋಗಿ ಅವನಿಗೆ,
22"ಎಲ್ಲಿಯವರೆಗೆ ನೀವು ವ್ಯಾಜ್ಯ ತೀರಿಸಿ ನಮ್ಮ ಸಹೋದರರಿಗೆ ಮುಯ್ಯಿತೀರಿಸದೇ ಇರುವಿರಿ?
23ನಾವಾದರೋ ನಿಮ್ಮ ತಂದೆಗೆ ಸೇವೆಸಲ್ಲಿಸಿ, ಅವರ ನುಡಿಯಂತೆಯೇ ನಡೆದು, ಅವರ ಆಜ್ಞೆಗಳನ್ನು ಪಾಲಿಸಲು ಸಿದ್ಧರಾಗಿದ್ದೇವೆ.
24ಈ ಕಾರಣದಿಂದ ನಮ್ಮ ಜನಾಂಗದವರಲ್ಲಿ ಕೆಲವರು ಕೋಟೆಗೆ ಮುತ್ತಿಗೆ ಹಾಕಿ, ನಮಗೆ ಶತ್ರುಗಳಾಗಿ, ಕೈಗೆ ಸಿಕ್ಕವರನ್ನು ಕೊಂದು, ನಮ್ಮ ಆಸ್ತಿಯನ್ನೆಲ್ಲಾ ಲೂಟಿಮಾಡಿದರು.
25ನಮ್ಮ ಮೇಲೆ ಮಾತ್ರವಲ್ಲದೆ, ತಮ್ಮ ನಾಡಿನ ಮೇಲೆಲ್ಲಾ ಅವರು ಕೈಮಾಡಿದ್ದಾರೆ.
26ನೋಡಿ, ಅವರೀಗ ಜೆರುಸಲೇಮ್ ದುರ್ಗವನ್ನು ಹಿಡಿದುಕೊಳ್ಳಬೇಕೆಂದು ಅದಕ್ಕೆ ಮುತ್ತಿಗೆ ಹಾಕಿ, ಪವಿತ್ರಾಲಯವನ್ನೂ ಬೇತ್ಸೂರನ್ನೂ ಭದ್ರಗೊಳಿಸಿದ್ದಾರೆ.
27ಆದಷ್ಟು ಬೇಗ ನೀವು ಅವರಿಗೆ ಮುಂದಾಗದೇ ಹೋದರೆ ಇದಕ್ಕಿಂತಲೂ ಹೆಚ್ಚಿನ ಅನಾಹುತವನ್ನು ಮಾಡುವರು. ಆಗ ಅವರನ್ನು ನಿಮ್ಮ ಹಿಡಿತದಲ್ಲಿಟ್ಟುಕೊಳ್ಳಲು ನಿಮ್ಮಿಂದಾಗದೇ ಹೋದೀತು!" ಎಂದು ದೂರಿತ್ತರು.

28 ಅರಸನು ಇದನ್ನು ಕೇಳಿ ಕೋಪಗೊಂಡನು. ತನ್ನ ಸ್ನೇಹಿತರಾದ ದಳವಾಯಿಗಳನ್ನೂ ಅಶ್ವಬಲದ ರಾಹುತರನ್ನೂ ಕರೆಯಿಸಿದನು. 29ಬೇರೆ ರಾಜ್ಯಗಳಿಂದಲೂ ದ್ವೀಪಗಳಿಂದಲೂ ಬಾಡಿಗೆಯ ದಳಗಳೂ ಅವನ ಬಳಿಗೆ ಬಂದವು. 30ಆಗ ಅವನ ಮೊತ್ತ ಪಡೆ ಒಂದು ಲಕ್ಷ ಕಾಲಾಳು, ಇಪ್ಪತ್ತು ಸಾವಿರ ರಾಹುತರು, ಯುದ್ಧಕ್ಕೆ ತರಬೇತು ಹೊಂದಿದ ಮೂವತ್ತೆರಡು ಆನೆಗಳು ಅಷ್ಟು ದೊಡ್ಡದಾಯಿತು. 31ಇವರೆಲ್ಲರು ಹೊರಟು, ಇದು ಮೇಯ ಮಾರ್ಗವಾಗಿ ಬಂದು ಬೇತ್ಸೂರಿನ ಬಳಿ ಬೀಡುಬಿಟ್ಟುಕೊಂಡು ಅನೇಕ ದಿನಗಳವರೆಗೆ ಹೋರಾಡಿದರು; ಯುದ್ಧಯಂತ್ರಗಳನ್ನು ಹೂಡಿದರು; ಆದರೆ ಬೇತ್ಸೂರಿನಲ್ಲಿ ಇದ್ದವರು ಹೊರಗೆ ಬಂದು ಅವುಗಳಿಗೆ ಬೆಂಕಿಹಚ್ಚಿ ಸುಟ್ಟುಬಿಟ್ಟು ಶೂರರಾಗಿ ಕಾದಾಡಿದರು.

32 ಯೂದನು ಕೋಟೆಯ ಬಳಿಯಿಂದ ತನ್ನ ಸೈನ್ಯವನ್ನು ಸಾಗಿಸಿಕೊಂಡು ಬಂದು, ಅರಸನ ದಂಡಿನ ಎದುರಾಗಿ ಬೇತ್‍ಜಕರಿಯ ಎಂಬಲ್ಲಿ ಪಾಳೆಯ ಮಾಡಿದನು. 33ಮರುದಿನ ಅರಸನು ನಸುಕಿನಲ್ಲಿಯೇ ಎದ್ದು ಬೇತ್‍ಜಕರಿಯದ ಮಾರ್ಗವಾಗಿ ತನ್ನ ಸೈನ್ಯವನ್ನೆಲ್ಲ ಅತಿವೇಗದಿಂದ ಸಾಗಿಸಿದನು. ದಂಡಾಳುಗಳು ಯುದ್ಧ ಸನ್ನದ್ಧರಾಗಿ ತುತೂರಿಗಳನ್ನು ಊದಿದರು. 34ಆನೆಗಳನ್ನು ಯುದ್ಧಾಸಕ್ತವಾಗಿಸುವುದಕ್ಕಾಗಿ ದ್ರಾಕ್ಷಿ ಮತ್ತು ಬಾಕಾ ಹಣ್ಣಿನ ರಸವನ್ನು ಅವಕ್ಕೆ ಕುಡಿಸಿದರು; ವ್ಯೂಹಗಳಲ್ಲಿ ಆ ಆನೆಗಳನ್ನು ಹಂಚಿಕೊಟ್ಟರು. 35ಪ್ರತಿಯೊಂದು ಆನೆಯ ಬದಿಗೆ ಕವಚ, ಕಂಚಿನ ಶಿರಸ್ತ್ರಾಣಗಳಿಂದ ಸುಸಜ್ಜಿತರಾದ ಒಂದೊಂದು ಸಾವಿರ ಸೈನಿಕರನ್ನು ಇಟ್ಟರು. ಇವರಲ್ಲದೆ, ಕುಶಲರಾದ ಐನೂರು ಜನ ರಾಹುತರು ಪ್ರತಿಯೊಂದು ಆನೆಗೆ ನೇಮಕರಾಗಿದ್ದರು. 36ಎಲ್ಲೆಲ್ಲಿ ಆ ಮೃಗವಿತ್ತೋ ಅಲ್ಲಲ್ಲಿ ಅವರು ಮೊದಲೇ ಸಿದ್ಧರಾಗಿದ್ದರು ಮತ್ತು ಆ ಮೃಗ ಎತ್ತ ಹೋಗುತ್ತಿತ್ತೋ ಅತ್ತ ಅವರೂ ಹೋಗುತ್ತಿದ್ದರು. ಅದನ್ನು ಬಿಟ್ಟು ಅಗಲುತ್ತಿರಲಿಲ್ಲ. 37ಅವುಗಳ ಮೇಲೆ ಮೇಲ್ಚಪ್ಪರವುಳ್ಳ ಮರದ ಬಲವಾದ ಅಂಬಾರಿಗಳು, ಒಂದೊಂದು ಆನೆಯ ಮೇಲೆ ಒಂದೊಂದು ಇದ್ದವು. ಬಹು ಯುಕ್ತಿಯಿಂದ ಆ ಅಂಬಾರಿಗಳನ್ನು ಅವುಗಳ ಮೇಲೆ ಬಿಗಿದಿದ್ದರು. ಪ್ರತಿಯೊಂದರ ಮೇಲೆ, ಅದರ ಮಾಹುತನಾದ ಇಂಡಿಯದವನು ಇದ್ದನು. ಅಲ್ಲದೆ ಅವುಗಳ ಮೇಲೆ ಯುದ್ಧಮಾಡಬಲ್ಲ ಮೂವರು ಜನ ಯೋಧರು ಇದ್ದರು. 38ಇವರು ಪಂಕ್ತಿವ್ಯೂಹಗಳ ಮರೆಯಲ್ಲಿದ್ದು ಕೊಂಡು ಶತ್ರುಗಳಲ್ಲಿ ಭಯಹುಟ್ಟಿಸುತ್ತಿದ್ದರು. ಉಳಿದ ಅಶ್ವಬಲವನ್ನು ಸೈನ್ಯದ ಎರಡು ಭಾಗಗಳ ಆಚೆಯೂ ಈಚೆಯೂ ಇರಿಸಿದ್ದನು. 39ಬಂಗಾರ, ಹಿತ್ತಾಳೆಯ ಗುಬುಟುಗಳ ಮೇಲೆ ಸೂರ್ಯನ ಪ್ರಕಾಶವು ಬಿದ್ದಾಗ, ಅವುಗಳ ನಿಮಿತ್ತ ಗುಡ್ಡಗಳೇ ಪ್ರಕಾಶಿಸಿ, ಉರಿಯುವ ಪಂಜುಗಳಂತೆ ಹೊಳೆಯುತ್ತಿದ್ದವು. 40ಅರಸನ ದಂಡಿನ ಕೆಲವು ಭಾಗ ಎತ್ತರವಾದ ಗುಡ್ಡಗಳ ಮೇಲೆಯೂ ಇನ್ನು ಕೆಲವರು ಕೆಳಗಡೆಯೂ ಹರಡಿಕೊಂಡಿದ್ದು ಭದ್ರವಾಗಿಯೂ ಕ್ರಮಬದ್ಧವಾಗಿಯೂ ಬರುತ್ತಿದ್ದರು. 41ಸೈನ್ಯವು ಬಹಳ ದೊಡ್ಡದಾಗಿತ್ತು, ಬಲಾಢ್ಯವೂ ಆಗಿತ್ತು. ಆ ಸೈನಿಕರ ಸದ್ದನ್ನು, ಅದು ಮುಂದೆ ನಡೆದಾಗ ಆಗುತ್ತಿದ್ದ ಕಾಲ್ಸಪ್ಪಳವನ್ನು ಹಾಗು ಆಯುಧಗಳ ಘಣಘಣ ಶಬ್ದವನ್ನು ಕೇಳಿದವರೆಲ್ಲರು ನಡುಗಿದರು. 42ಯೂದನೂ ಅವನ ಸೈನ್ಯವೂ ಸಮೀಪಿಸಿ ಯುದ್ಧಮಾಡಲು, ಅರಸನ ದಳದಲ್ಲಿ ಆರುನೂರು ಜನರು ಮಡಿದರು. 43ಅವರಾನ ಎಂದು ಹೆಸರಿಸಲಾಗಿದ್ದ ಎಲ್ಲಾಜಾರನು, ರಾಜಯೋಗ್ಯವಾದ ಎದೆ ಕವಚದಿಂದ ಅಲಂಕೃತವಾಗಿದ್ದ ಹಾಗು ಉಳಿದ ಎಲ್ಲ ಆನೆಗಳಿಗಿಂತಲೂ ಎತ್ತರವಾಗಿದ್ದ ಒಂದು ಆನೆಯನ್ನು ಕಂಡನು. 44ಅದರ ಮೇಲೆ ಅರಸನಿರುವಂತೆ ಕಾಣಿಸಿತು. ಎಲ್ಲಾಜಾರನು ತನ್ನ ಜನರನ್ನು ರಕ್ಷಿಸಿ ಕೀರ್ತಿಗಳಿಸುವ ಸಮಯವು ಇದೇ ಎಂದು ನೆನಸಿ, 45ಅವನ ಮೇಲೆ ಏರಿಹೋಗ ಬೇಕೆಂದು ಧೈರ್ಯದಿಂದ ಪಂಕ್ತಿವ್ಯೂಹದೊಳಗೆ ನುಗ್ಗಿ, ಎಡಬಲದಲ್ಲಿದ್ದವರನ್ನು ಹೊಡೆಯುತ್ತಾ ಬರಲು ಅವರು ಆಚೆ ಈಚೆ ಚದರಿದರು. 46ಆಗ ಎಲ್ಲಾಜಾರನು ಆನೆಯ ಬುಡಕ್ಕೆ ನುಗ್ಗಿ, ಕೆಳಗಿನಿಂದ ಅದನ್ನು ಇರಿದು ಕೊಂದನು. ಅದು ನೆಲಕ್ಕುರುಳಿ ಅವನ ಮೇಲೆಯೇ ಬಿದ್ದದ್ದರಿಂದ ಅವನೂ ಅಲ್ಲೇ ಸತ್ತನು. 47ಆಗ ಯೆಹೂದ್ಯರು, ಶತ್ರು ಸಾಮ್ರಾಜ್ಯದ ಬಲವನ್ನೂ ಅದರ ದೌಡಿನ ಭೀಕರತೆಯನ್ನೂ ಕಂಡು ಅಲ್ಲಿಂದ ಹಿಂದಕ್ಕೆ ಸರಿದರು.

### ಬೇತ್ಸೂರ್ ಮತ್ತು ಸಿಯೋನ್ ಗಿರಿಯ ಆಕ್ರಮಣ

48 ಅರಸನ ಸೈನಿಕರು ಯೆಹೂದ್ಯರನ್ನು ಎದುರುಗೊಳ್ಳಲು ಜೆರುಸಲೇಮಿಗೆ ಹೋದರು. ಅರಸನು ಜುದೇಯದ ಎದುರಿಗೆ ಹಾಗು ಸಿಯೋನ್ ಗಿರಿಯ ಎದುರಿಗೆ ಬೀಡುಬಿಟ್ಟುಕೊಂಡನು.

49ಬೇತ್ಸೂರಿನವರೊಂದಿಗೆ ಅವನು ಸಂಧಾನ ಮಾಡಿಕೊಂಡನು. ಆಗ ನಾಡಿಗೆ 'ಸಬ್ಬತ್' ಇದ್ದುದರಿಂದ ಮುತ್ತಿಗೆಯನ್ನು ಎದುರಿಸಲು ಅವರಿಗೆ ಆಹಾರವಿರಲಿಲ್ಲ. ಆದುದರಿಂದ ಅವರು ಪಟ್ಟಣವನ್ನು ಬಿಟ್ಟು ಹೊರಗೆ ಬಂದರು. 50ಹೀಗೆ ಅರಸನು ಬೇತ್ಸೂರನ್ನು ಕೈವಶಮಾಡಿಕೊಂಡು ಅದನ್ನು ಕಾಯುವುದಕ್ಕೆ ಸೈನ್ಯವನ್ನು ಇಟ್ಟನು. 51ಅವನು ಮಹಾಪವಿತ್ರಾಲಯದ ಎದುರಾಗಿ ಅನೇಕ ದಿನಗಳವರೆಗೆ ಬೀಡು ಬಿಟ್ಟುಕೊಂಡನು, ಮತ್ತು ಅಲ್ಲಿ ಮುತ್ತಿಗೆಯ ದಿಬ್ಬಗಳನ್ನೂ ಯುದ್ಧಯಂತ್ರಗಳನ್ನೂ ಬೆಂಕಿ ಕಲ್ಲುಗಳನ್ನೊಗೆಯುವ ಯಂತ್ರಗಳನ್ನೂ ಭಲ್ಲೆಗಳನ್ನೆಸೆಯುವ ಯಂತ್ರಗಳನ್ನೂ ಕಲ್ಲುಬೀಸುವ ಯಂತ್ರಗಳನ್ನೂ ನಿಲ್ಲಿಸಿದನು. 52 ಯೆಹೂದ್ಯರು ಸಹ ಅವರ ಯಂತ್ರಗಳಿಗೆ ಪ್ರತಿಯಾಗಿ ತಮ್ಮ ಯಂತ್ರಗಳನ್ನಿಟ್ಟುಕೊಂಡು ಬಹುದಿನಗಳವರೆಗೆ ಹೋರಾಡಿದರು. 53ಆ ವರ್ಷ ಏಳನೇ ವರ್ಷ ಆಗಿದ್ದುದರಿಂದ ಪವಿತ್ರಾಲಯದಲ್ಲಿ ಆಹಾರ ಇರಲಿಲ್ಲ, ಅದು ಮಾತ್ರವಲ್ಲ ಅನ್ಯದೇಶಗಳಿಂದ ಜುದೇಯಕ್ಕೆ ಆಶ್ರಯಕ್ಕಾಗಿ ಬಂದವರು ಅಲ್ಲಿ ಉಳಿದಿದ್ದ ಧಾನ್ಯಸಂಗ್ರಹವನ್ನೆಲ್ಲಾ ತೀರಿಸಿಬಿಟ್ಟಿದ್ದರು. 54ಇದಲ್ಲದೆ, ಪವಿತ್ರಾಲಯದಲ್ಲಿ ಸ್ವಲ್ಪ ಜನರು ಮಾತ್ರ ಉಳಿದುಕೊಂಡಿದ್ದರು; ಏಕೆಂದರೆ ಬರವು ಪ್ರಬಲವಾಗಿದ್ದುದರಿಂದ ಪ್ರತಿಯೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿದ್ದನು.

### ಧಾರ್ಮಿಕ ಸ್ವಾತಂತ್ರ್ಯಕ್ಕೆ ಅರಸ ಅಂತಿಯೋಕನ ಒಪ್ಪಿಗೆ

55 ಅರಸ ಅಂತಿಯೋಕನು ಇನ್ನೂ ಬದುಕಿರುವಾಗ ತನ್ನ ಮಗ ಅಂತಿಯೋಕನು ಅರಸನಾಗುವಂತೆ ಅವನಿಗೆ ತರಬೇತು ನೀಡಲು ನಿಯಮಿಸಿದ್ದ ಫಿಲಿಪ್ಪನು ಪರ್ಷಿಯಾ ಮತ್ತು ಮೇದ್ಯದಿಂದ ಹಿಂದಿರುಗಿ ಬಂದಿರುವನೆಂದು ಲೂಸ್ಯನಿಗೆ ತಿಳಿಯಿತು. 56ಅವನು ಅರಸನ ಸಂಗಡ ಹೋಗಿದ್ದ ಸೈನ್ಯವನ್ನು ತನ್ನ ಸಂಗಡ ತಂದಿದ್ದಾನೆಂದೂ ತಾನೇ ರಾಜ್ಯಾಧಿಕಾರವಹಿಸಲು ಹವಣಿಸುತ್ತಾ ಇದ್ದಾನೆಂದೂ ಅವನಿಗೆ ತಿಳಿದುಬಂದಿತು. 57ಎಂದೇ ಲೂಸ್ಯನು ತಡಮಾಡದೆ ಹಿಮ್ಮೆಟ್ಟಲು ಸಿದ್ಧನಾದನು. ಅವನು ಅರಸನಿಗೂ ದಳಾವಾಯಿಗಳಿಗೂ ಸೈನಿಕರಿಗೂ, "ನಾವಿಲ್ಲಿ ದಿನದಿನಕ್ಕೆ ಕ್ಷೀಣವಾಗುತ್ತಿದ್ದೇವೆ, ಆಹಾರವೂ ಕಡಿಮೆ ಆಗುತ್ತಿದೆ. ನಾವು ಮುತ್ತಿಗೆ ಹಾಕಿರುವ ಸ್ಥಳವೂ ಬಲವಾದ ದುರ್ಗವಾಗಿದೆ ಮತ್ತು ರಾಜ್ಯದ ಆಡಳಿತದ ಭಾರವೂ ನಮ್ಮ ಮೇಲೆ ಬಿದ್ದುಕೊಂಡಿದೆ. 58ಹೀಗಿರುವುದರಿಂದ ನಾವೀಗ ನಯ ವಿನಯದಿಂದ ಇವರೊಂದಿಗೂ ಇವರ ಯೆಹೂದ್ಯ ಜನಾಂಗದೊಂದಿಗೂ ಸಂಧಾನ ಮಾಡಿಕೊಳ್ಳೋಣ; 59ಮತ್ತು ಅವರು ಮೊದಲಿನಂತೆ ತಮ್ಮ ಸ್ವಧರ್ಮದ ಪ್ರಕಾರ ನಡೆದುಕೊಳ್ಳಬಹುದು ಎಂದು ಅವರೊಂದಿಗೆ ಒಪ್ಪಂದ ಮಾಡಿಕೊಳ್ಳೋಣ, ಏಕೆಂದರೆ ನಾವು ತೆಗೆದು ಹಾಕಿದ ಅವರ ನಿಬಂಧನೆಗಳ ದೆಸೆಯಿಂದಲೇ ಅವರು ಕೋಪಗೊಂಡು ಇವುಗಳನ್ನೆಲ್ಲಾ ಮಾಡಿದ್ದಾರೆ," ಎಂದು ಹೇಳಿದನು.

60 ಈ ಮಾತು ಅರಸನಿಗೂ ಅವನ ಸೇನಾಧಿಪತಿಗಳಿಗೂ ಹಿಡಿಸಿತು. ಅವನು ಸಂಧಾನಕ್ಕಾಗಿ ಅವರ ಕಡೆಗೆ ಜನರನ್ನು ಕಳುಹಿಸಿದನು; ಅವರೂ ಅದಕ್ಕೆ ಸಮ್ಮತಿಸಿದರು. 61ಅರಸನೂ ಅವನ ಅಧಿಕಾರಿಗಳೂ ಪ್ರಮಾಣಮಾಡಿದ ಮೇಲೆ ದುರ್ಗದಲ್ಲಿದ್ದವರು ಅಲ್ಲಿಂದ ಹೊರಗೆ ಬಂದರು. 62ತರುವಾಯ ಅರಸನು ಸಿಯೋನ್ ಗುಡ್ಡದ ಮೇಲೆ ಹೋದನು; ಆದರೆ ಆ ಸ್ಥಳ ಅಭೇದ್ಯ ಆಗಿರುವುದನ್ನು ಕಂಡಾಗ ತಾನು ಮಾಡಿದ ಪ್ರಮಾಣವನ್ನು ಮುರಿದು, ಅಲ್ಲಿದ್ದ ಆವರಣದ ಗೋಡೆಯನ್ನು ಕೆಡವಲು ಅಪ್ಪಣೆ ಮಾಡಿದನು. 63ಅನಂತರ ತುರ್ತಾಗಿ ಅಲ್ಲಿಂದ ಅಂತಿಯೋಕ್ಯಕ್ಕೆ ಬಂದನು. ಅಲ್ಲಿ ಫಿಲಿಪ್ಪನು ಒಡೆತನ ಮಾಡುತ್ತಿದ್ದುದನ್ನು ಕಂಡು ಅವನೊಂದಿಗೆ ಯುದ್ಧಮಾಡಿ ಬಲವಂತವಾಗಿ ಪಟ್ಟಣವನ್ನು ಕೈವಶಮಾಡಿಕೊಂಡನು.

**7** 151ನೇ ವರ್ಷದಲ್ಲಿ ಸೆಲೂಕ್ಯನ ಮಗ ದೆಮೆತ್ರಿಯನು ರೋಮಿನಿಂದ ಬಂದು, ಕೆಲವು ಜನರ ಸಹಾಯದಿಂದ ಸಮುದ್ರತೀರದಲ್ಲಿದ್ದ ಒಂದು ಊರನ್ನು ಹಿಡಿದುಕೊಂಡು, ಅಲ್ಲಿ ಆಳಲಾರಂಭಿಸಿದನು. 2ಅವನು ತನ್ನ ಪೂರ್ವಜರ ರಾಜಧಾನಿಯಲ್ಲಿ ಕಾಲಿಟ್ಟಾಗ ಅವನ ಸೈನಿಕರು ಅಂತಿಯೋಕನನ್ನೂ ಲೂಸ್ಯನನ್ನೂ ಹಿಡಿದು ಅವನ ಬಳಿಗೆ ತರಬೇಕೆಂದಿದ್ದರು. 3ಈ ಸಂಗತಿ ಅವನಿಗೆ ತಿಳಿದುಬರಲು ಅವನು ಅವರಿಗೆ, "ಅವರ ಮುಖಗಳನ್ನು ನನಗೆ ತೋರಿಸಬೇಡಿ," ಎಂದು ಹೇಳಿದನು. 4ಅವನ ಸೈನಿಕರು ಅವರನ್ನು ಕೊಂದುಹಾಕಿದರು. ಹೀಗೆ ದೆಮೆತ್ರಿಯನು ತನ್ನ ರಾಜ್ಯದ ಸಿಂಹಾಸನವನ್ನೇರಿದನು. 5ಆಗ ಇಸ್ರಯೇಲರಲ್ಲಿ ಪುಂಡರೂ ಅಧರ್ಮಿಗಳೂ ಆಗಿದ್ದವರೆಲ್ಲರೂ ಅವನ ಬಳಿಗೆ ಬಂದರು. ಮಹಾ ಯಾಜಕನಾಗಬೇಕೆಂದು

ಹವಣಿಸುತ್ತಿದ್ದ ಅಲ್ಕಿಮನೆಂಬವನು ಅವರ ಮುಂದಾಳಾಗಿದ್ದನು. 6ಇವರು ಬಂದು ತಮ್ಮ ಜನಾಂಗದ ವಿಷಯದಲ್ಲಿ ಅರಸನ ಮುಂದೆ ದೂರು ಹೇಳಿದರು: "ಯೂದನೂ ಅವನ ಬಂಧುಗಳೂ ನಿಮ್ಮ ಸ್ನೇಹಿತರೆಲ್ಲರನ್ನೂ ನಾಶಮಾಡಿದ್ದಲ್ಲದೆ ನಮ್ಮನ್ನೂ ನಮ್ಮ ನಾಡಿನಿಂದ ಚದರಿಸಿಬಿಟ್ಟಿದ್ದಾರೆ. 7ಆದುದರಿಂದ ಯಾರ ಮೇಲೆ ನಿಮ್ಮ ನಂಬಿಕೆ ಇದೆಯೋ ಅಂತಹ ಒಬ್ಬನನ್ನು ನೀವೀಗ ಕಳುಹಿಸಿಕೊಡಿ; ನಮ್ಮಲ್ಲಿಯು ಹಾಗು ಅರಸನ ನಾಡಿನಲ್ಲಿಯು ಅವರು ಎಷ್ಟು ಹಾವಳಿ ಮಾಡಿದ್ದಾರೆ ಎಂಬುದನ್ನು ಮತ್ತು ಆ ನಿಮ್ಮ ಸ್ನೇಹಿತರನ್ನೂ ಅವರಿಗೆ ನೆರವಾದವರನ್ನೂ ಹೇಗೆ ದಂಡಿಸಿದ್ದಾರೆ ಎಂಬುದನ್ನು ಅವನೇ ನೋಡಲಿ," ಎಂದರು. 8ಆಗ ಅರಸನು ಬಕ್ಕಿದಿಯ ಎಂಬವನನ್ನು ಈ ಕೆಲಸಕ್ಕಾಗಿ ಆಯ್ದುಕೊಂಡನು. ಇವನು ಅರಸನ ಸ್ನೇಹಿತರಲ್ಲೊಬ್ಬನು, ಹೊಳೆಯ ಆಚೆಯಲ್ಲಿದ್ದ ಪ್ರಾಂತ್ಯದ ಒಡೆಯ ಹಾಗು ಅರಸನ ರಾಜ್ಯದಲ್ಲಿ ಘನವಂತನೂ ರಾಜಭಕ್ತಿಯುಳ್ಳವನೂ ಆಗಿದ್ದನು. 9ಅರಸನು ಇವನನ್ನೂ, ಇವನೊಂದಿಗೆ ಆ ಧರ್ಮಭ್ರಷ್ಟ ಅಲ್ಕಿಮನನ್ನೂ ಕಳುಹಿಸಿದನು. ಅಲ್ಕಿಮನಿಗೆ ಪ್ರಧಾನ ಯಾಜಕತ್ವದ ಆಶ್ವಾಸನೆ ಕೊಟ್ಟು, ಇಸ್ರಯೇಲ್ ಜನರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಆಜ್ಞಾಪಿಸಿದ್ದನು.

10 ಅಲ್ಕಿಮನು ಮಹಾಸೈನ್ಯದೊಂದಿಗೆ ಹೊರಟು ಜುದೇಯ ನಾಡಿಗೆ ಬಂದನು; ಒಳಗೆ ಮೋಸವಿಟ್ಟುಕೊಂಡು, ಯೂದನ ಮತ್ತು ಅವನ ಬಂಧುಗಳ ಬಳಿಗೆ ಸುದ್ದಿಗಾರರ ಮೂಲಕ ಸಮಾಧಾನದ ಮಾತುಗಳನ್ನು ಹೇಳಿ ಕಳುಹಿಸಿದನು. 11ಆದರೆ ಅವರು ಅವನ ಮಾತುಗಳಿಗೆ ಲಕ್ಷ್ಯಕೊಡಲಿಲ್ಲ. ಏಕೆಂದರೆ ಅವನು ಮಹಾಸೈನ್ಯ ಸಮೇತವಾಗಿ ಬಂದಿದ್ದಾನೆಂಬುದನ್ನು ಅವರು ಆಗಲೇ ಅರಿತುಕೊಂಡಿದ್ದರು. 12ಆಗ ಕೆಲವು ಜನ ಶಾಸ್ತ್ರಿಗಳು ಕೂಡಿಕೊಂಡು ಅಲ್ಕಿಮನ ಮತ್ತು ಬಕ್ಕಿದಿಯನ ಬಳಿಗೆ ಹೋಗಿ, ನ್ಯಾಯಕ್ಕಾಗಿ ಯತ್ನಮಾಡಿದರು. 13ಅವರೊಂದಿಗೆ ಸಂಧಾನ ಮಾಡಿಕೊಳ್ಳಲು ಯತ್ನಿಸಿದ ಇಸ್ರಯೇಲರಲ್ಲಿ ಹಸಿದಿಯರು ಮೊದಲಿಗರು. 14ಇವರು, "ಆರೋನನ ವಂಶಜನಾದ ಯಾಜಕನೊಬ್ಬನು ಸೈನ್ಯದೊಂದಿಗೆ ಬಂದಿದ್ದಾನೆ, ಅವನು ಯಾವ ಅನ್ಯಾಯವನ್ನೂ ನಮಗೆ ಮಾಡಲಿಕ್ಕಿಲ್ಲ," ಎಂದುಕೊಂಡರು. 15ಅವನಾದರೊ ಅವರೊಂದಿಗೆ ಸಮಾಧಾನದ ಮಾತುಗಳನ್ನಾಡಿ, "ನಾವು ನಿಮಗಾಗಲಿ, ನಿಮ್ಮ ಸ್ನೇಹಿತರಿಗಾಗಲಿ ಯಾವ ಕೇಡನ್ನೂ ಮಾಡುವವರಲ್ಲ," ಎಂದು ಪ್ರಮಾಣ ಪೂರ್ವಕವಾಗಿ ಹೇಳಿದನು. 16ಅವರು ಅವನ ಮಾತಿನಲ್ಲಿ ವಿಶ್ವಾಸವಿಟ್ಟರು. ಆದರೆ ಅವನು ಅವರಲ್ಲಿ ಅರವತ್ತು ಜನರನ್ನು ಹಿಡಿಸಿ, ಒಂದೇ ದಿನದಲ್ಲಿ ಕೊಂದುಹಾಕಿಸಿದನು. 17ಹೀಗೆ ಕೀರ್ತನೆಕಾರನು ಬರೆದ ಈ ಮಾತುಗಳು ನೆರವೇರಿದವು: "ನಿನ್ನ ಭಕ್ತರ ಮಾಂಸವನ್ನು ಅವರು ಬಿಸಾಡಿದರು, ಜೆರುಸಲೇಮಿನ ಸುತ್ತಲು ಅವರ ರಕ್ತವನ್ನು ಚೆಲ್ಲಿದರು; ಅವರ ಶವಗಳನ್ನು ಹೂಣಿಡುವವರು ಯಾರೂ ಇರಲಿಲ್ಲ!"

18 ಇದರಿಂದ ಯೆಹೂದ್ಯರೆಲ್ಲರಲ್ಲಿ ಹೆದರಿಕೆ ಬೆದರಿಕೆ ಉಂಟಾಗಿ ಅವರು, "ಇವರಲ್ಲಿ ಸತ್ಯವೂ ಇಲ್ಲ, ನ್ಯಾಯವೂ ಇಲ್ಲ; ಇವರು ತಾವು ಮಾಡಿಕೊಂಡ ಒಡಂಬಡಿಕೆಯನ್ನೆ ಇಟ್ಟುಕೊಂಡ ಆಣೆಯನ್ನೇ ಮುರಿದಿದ್ದಾರೆ," ಎಂದುಕೊಂಡರು. 19ಬಕ್ಕಿದಿಯನು ಜೆರುಸಲೇಮನ್ನು ಬಿಟ್ಟು ಬೆಜೆತ್ ಎಂಬಲ್ಲಿ ಬೀಡುಬಿಟ್ಟನು. ತನ್ನನ್ನು ಬಿಟ್ಟುಹೋಗಿದ್ದ ಅನೇಕರನ್ನೂ ಯೆಹೂದ್ಯರಲ್ಲಿ ಕೆಲವರನ್ನೂ ಹಿಡಿದುತರಿಸಿ, ಕೊಂದು, ಒಂದು ದೊಡ್ಡ ಕಣಿವೆಯಲ್ಲಿ ಹಾಕಿಸಿದನು. 20ತರುವಾಯ ಅಲ್ಕಿಮನಿಗೆ ಆ ಪ್ರಾಂತ್ಯವನ್ನು ಒಪ್ಪಿಸಿ, ಅವನ ನೆರವಿಗೆಂದು ಒಂದು ದಳವನ್ನು ಅಲ್ಲಿಟ್ಟು, ಬಕ್ಕಿದಿಯನು ಅರಸನ ಬಳಿಗೆ ಹಿಂದಿರುಗಿದನು.

21 ಅಲ್ಕಿಮನು ಮುಖ್ಯಯಾಜಕನ ಉದ್ಯೋಗವನ್ನು ದೊರಕಿಸಿಕೊಳ್ಳಲು ಪ್ರಯಾಸಪಟ್ಟನು. 22ಇದಲ್ಲದೆ, ಸ್ವಜನರಿಗೆ ಕಂಡಕರಾದವರೆಲ್ಲರು ಅವನನ್ನು ಕೂಡಿಕೊಂಡು ಜುದೇಯ ಪ್ರಾಂತ್ಯವನ್ನು ತಮ್ಮ ಕೈವಶಮಾಡಿಕೊಂಡು, ಇಸ್ರಯೇಲಿನಲ್ಲಿ ಬಹಳ ಕೇಡುಮಾಡಿದರು. 23ಅಲ್ಕಿಮನೂ ಅವನ ಗುಂಪಿನವರೂ ಅನ್ಯರು ಮಾಡುವುದಕ್ಕಿಂತ ಹೆಚ್ಚಾದ ಕೇಡನ್ನು ಇಸ್ರಯೇಲ್ ಜನತೆಗೆ ಮಾಡಿದ್ದನ್ನು ಯೂದನು ನೋಡಿದನು. 24ಜುದೇಯದ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆಲ್ಲಾ ಹೋಗಿ, ಆ ಜನರನ್ನೂ ತನ್ನನ್ನು ಅಗಲಿ ಹೋಗಿದ್ದವರನ್ನೂ ದಂಡಿಸಿ, ಅವರು ಇನ್ನು ಊರುಬಿಟ್ಟು ಆಚೆಹೋಗದಂತೆ ಮಾಡಿದನು. 25ಯೂದನೂ ಅವನ ದಂಡಿನವರೂ ಬಲಗೊಂಡದ್ದನ್ನೂ ಅವರನ್ನು ತಡೆಯುವುದಕ್ಕೆ ತನ್ನ ಕೈಯಿಂದಾಗದೆಂಬುದನ್ನೂ ಅಲ್ಕಿಮನು ಮನಗಂಡು, ಅರಸನ ಬಳಿಗೆ ಹಿಂದಿರುಗಿ ಹೋಗಿ ಅವರ ಮೇಲೆ ದೂರುಹೇಳಿದನು.

## ಜುದೇಯದಲ್ಲಿ ನಿಕಾನೋರ್ – ಕಫಾರ್ಸಲಾಮದ ಬಳಿ ಕದನ

26ಅರಸನು ಯೆಹೂದ್ಯರನ್ನು ನಾಶಮಾಡುವುದಕ್ಕೆ ಅಪ್ಪಣೆಕೊಟ್ಟನು. ಸನ್ಮಾನ್ಯ ಸಾಮಂತರಲ್ಲೊಬ್ಬನೂ, ಇಸ್ರಯೇಲರನ್ನು ದ್ವೇಷಿಸುತ್ತಿದ್ದವನೂ ಹಾಗು ಅವರ ಶತ್ರುವೂ ಆಗಿದ್ದ ನಿಕಾನೋರ್ ಎಂಬವನನ್ನು ಕಳುಹಿಸಿಕೊಟ್ಟನು. 27ನಿಕಾನೋರನು ದೊಡ್ಡ ಸೈನ್ಯದೊಂದಿಗೆ ಜೆರುಸಲೇಮಿಗೆ ಬಂದು, ಯೂದನಿಗೂ ಅವನ ಬಂಧುಗಳಿಗೂ ಮೋಸದಿಂದ ಈ ಸಂಧಾನದ ಮಾತುಗಳನ್ನು ಹೇಳಿಕಳುಹಿಸಿದನು: 28"ನಿಮ್ಮ ಹಾಗು ನಮ್ಮ ನಡುವೆ ಯುದ್ಧವಾಗದಿರಲಿ; ಸಮಾಧಾನದಿಂದ ನಿಮ್ಮ ಮುಖಗಳನ್ನು ನೋಡುವುದಕ್ಕೆ ಕೆಲವೇ ಜನರನ್ನು ನನ್ನ ಸಂಗಡ ಕರೆದುಕೊಂಡು ಬರುತ್ತಿದ್ದೇನೆ." 29ಹೀಗೆಂದು ಅವನು ಯೂದನ ಬಳಿಗೆ ಬರಲು, ಅವರು ಸಮಾಧಾನದಿಂದ ಒಬ್ಬರನ್ನೊಬ್ಬರು ವಂದಿಸಿದರು. ಆದರೆ ಯೂದನನ್ನು ಬಲಾತ್ಕಾರದಿಂದ ಹಿಡಿದುಕೊಂಡು ಹೋಗುವುದಕ್ಕೆ ಶತ್ರುಕಡೆಯವರು ಸಿದ್ಧರಾಗಿದ್ದರು. 30ಈ ಸಂಗತಿ, ಅಂದರೆ ಮೋಸಮಾಡುವುದಕ್ಕಾಗಿಯೇ ನಿಕಾನೋರನು ತನ್ನ ಬಳಿಗೆ ಬಂದಿದ್ದಾನೆಂದು ಯೂದನಿಗೆ ತಿಳಿಯಲು, ಅವನು ಭಯಪಟ್ಟು, ನಿಕಾನೋರನನ್ನು ಪುನಃ ಭೇಟಿಯಾಗಲು ಇಷ್ಟಪಡಲಿಲ್ಲ. 31ತನ್ನ ತಂತ್ರವು ಬಯಲಿಗೆ ಬಿದ್ದಿತೆಂಬುದನ್ನು ನಿಕಾನೋರನು ತಿಳಿದು ಕಫಾರ್ಸಲಾಮದ ಬಳಿ ಯುದ್ಧದಲ್ಲೆ ಯೂದನನ್ನು ಸಂಧಿಸಲು ಹೋದನು. 32ಅಂದು ನಿಕಾನೋರನ ಪಕ್ಷದವರು ಐನೂರು ಮಂದಿ ಹತರಾದರು; ಉಳಿದವರು ದಾವೀದ ನಗರದೊಳಗೆ ಓಡಿಹೋದರು.

## ಮಹಾದೇವಾಲಯ ಕೆಡವಲು ಬೆದರಿಕೆ

33 ಈ ಘಟನೆಗಳಾದ ಮೇಲೆ ನಿಕಾನೋರನು ಸಿಯೋನ್ ಗುಡ್ಡಕ್ಕೆ ಹೋದನು. ಅಲ್ಲಿ ಯಾಜಕರಲ್ಲಿ ಕೆಲವರು ಹಾಗು ಜನಾಂಗದ ಹಿರಿಯರಲ್ಲಿ ಕೆಲವರು ಸಮಾಧಾನದಿಂದ ಅವನನ್ನು ವಂದಿಸುವುದಕ್ಕೂ ಅರಸನಿಗಾಗಿ ದಹನಬಲಿಯರ್ಪಣೆ ಆಗುತ್ತಿದೆ ಎಂದು ಅವನಿಗೆ ತೋರಿಸುವುದಕ್ಕೂ ಪವಿತ್ರಾಲಯದೊಳಗಿಂದ ಹೊರಗೆ ಬಂದರು. 34ಅವನಾದರೋ ಅವರನ್ನು ಅವಮಾನಗೊಳಿಸಿ, ಬಿರುನುಡಿಗಳನ್ನಾಡಿದನು. 35"ನೀವು ಆ ಯೂದನನ್ನೂ ಅವನ ಸಂಗಡಿಗರನ್ನೂ ಈಗ ನನ್ನ ಕೈಗೆ ಒಪ್ಪಿಸದಿದ್ದರೆ ನಾನು ಮುಂದೆ ಎಂದಾದರೂ ಸುರಕ್ಷಿತವಾಗಿ ಇಲ್ಲಿ ಬಂದಲ್ಲಿ, ಈ ಆಲಯವನ್ನು ಸುಟ್ಟು ಸೂರೆಮಾಡುವೆನು," ಎಂದು ಅವರಿಗೆ ಹೇಳಿ ಬಹು ಕೋಪದಿಂದ ಪಣತೊಟ್ಟು, ಸಿಟ್ಟಿನಲ್ಲಿಯೇ ಅಲ್ಲಿಂದ ಹೊರಟುಹೋದನು. 36ತರುವಾಯ ಯಾಜಕರು ಒಳಗೆ ಹೋಗಿ ಬಲಿಪೀಠದ ಮತ್ತು ಬಲಿಪೀಠದ ಮತ್ತು ದೇವಾಲಯದ ಮುಂದೆ ನಿಂತುಕೊಂಡು ಅಳುತ್ತಾ, 37"ಸ್ವಾಮೀ, ಈ ಆಲಯವನ್ನು ನಿಮ್ಮ ಹೆಸರಿನಿಂದ ಕರೆಯಬೇಕೆಂದೂ ಇದು ನಿಮ್ಮ ಜನರ ಪ್ರಾರ್ಥನೆ ಹಾಗು ವಿಜ್ಞಾಪನೆಗಳ ಆಲಯ ಆಗಿರಲೆಂದೂ ನೀವು ಇದನ್ನು ಆಯ್ದುಕೊಂಡಿರಿ; 38ಈ ಮನುಷ್ಯನನ್ನೂ ಅವನ ಸೈನ್ಯವನ್ನೂ ದಂಡಿಸಿರಿ; ಅವರು ಕತ್ತಿಗೆ ತುತ್ತಾಗಲಿ; ಅವರಾಡಿದ ದೂಷಣೆಯ ಮಾತುಗಳನ್ನು ನೆನಪಿಗೆ ತಂದುಕೊಂಡು ಅವರನ್ನು ಇನ್ನು ಬದುಕಗೊಡಿಸಬೇಡಿ," ಎಂದರು.

## ಅದಾಸಾದಲ್ಲಿ ಮಹಾ ದಿನ

39 ನಿಕಾನೋರನು ಜೆರುಸಲೇಮಿನಿಂದ ಹೊರಟು ಬೇತ್‍ಹೋರೋನಿಗೆ ಹೋಗಿ ಅಲ್ಲಿ ತಳವೂರಿದನು. ಅಲ್ಲಿ ಸಿರಿಯ ಪ್ರಾಂತ್ಯದ ಸೈನ್ಯವೊಂದು ಅವನನ್ನು ಕೂಡಿಕೊಂಡಿತು. 40ಯೂದನು ಮೂರು ಸಾವಿರ ಜನರೊಂದಿಗೆ ಅದಾಸಾ ಎಂಬಲ್ಲಿ ಬೀಡುಬಿಟ್ಟನು. 41ಆಗ ಯೂದನು ಪ್ರಾರ್ಥಿಸಿ, "ಸ್ವಾಮಿ, ಅರಸನು ಕಳುಹಿಸಿದವರು ದೂಷಣೆಯ ಮಾತುಗಳನ್ನಾಡಿದಾಗ ನಿಮ್ಮ ದೂತನು ಹೊರಟು ಬಂದು ಅವರಲ್ಲಿ ಲಕ್ಷದ ಎಂಬತ್ತೈದು ಸಾವಿರ ಜನರನ್ನು ಸದೆಬಡಿದನು. 42ಅದರಂತೆ ಈ ಸೈನ್ಯವನ್ನು ಇಂದು ನಮ್ಮ ಕಣ್ಣೆದುರಿನಲ್ಲಿಯೇ ಧ್ವಂಸಮಾಡಿ. ಇದರಿಂದ ಅವರು ನಿಮ್ಮ ಪವಿತ್ರಾಲಯದ ವಿರುದ್ಧ ದೂಷಣೆಯ ಮಾತುಗಳನ್ನಾಡಿದ್ದರಿಂದಲೇ ಹೀಗಾಯಿತೆಂದು ಉಳಿದವರಿಗೆ ಗೊತ್ತಾಗಲಿ, ಅವನ ದುಷ್ಟತನಕ್ಕೆ ಸರಿಯಾಗಿ ಅವನಿಗೆ ತೀರ್ಪುಕೊಡಿ," ಎಂದು ಹೇಳಿದನು.

43 ಫಾಲ್ಗುಣ ಮಾಸದ ಹದಿಮೂರನೆಯ ದಿವಸ ಎರಡು ಸೈನ್ಯಗಳ ನಡುವೆ ಕದನವಾಯಿತು. ನಿಕಾನೋರನ ಸೈನ್ಯದವರು ಧ್ವಂಸವಾದರು. ಸಂಗ್ರಾಮದಲ್ಲಿ ಮೊದಲು ಹತನಾದವನು ಅವನೇ. 44ನಿಕಾನೋರನು ಬಿದ್ದುದನ್ನು ಅವನ ಸೈನಿಕರು ಕಂಡು, ಕೈಯಲ್ಲಿದ್ದ ಆಯುಧಗಳನ್ನು ಬಿಸಾಡಿ ಓಡಿಹೋದರು. 45ಯೂದನ ಸೈನಿಕರು ಒಂದು ದಿನದ ಪ್ರಯಾಣವಾಗುವಷ್ಟು ದೂರ, ಅಂದರೆ ಅದಾಸಾದಿಂದ ಗಜೇರದವರೆಗೆ, ಅವರನ್ನು ಬೆನ್ನಟ್ಟಿಹೋದರು. ಹೋಗುವಾಗ ಅವರು ಯೆಹೂದ್ಯರಿಗೆ ಸೂಚನೆ ಕೊಡುವುದಕ್ಕಾಗಿ ತಮ್ಮ ತುತೂರಿಗಳನ್ನು ಊದಿದರು. 46ಇದನ್ನು ಕೇಳಿದೊಡನೆ ಜುದೇಯದ ಹಳ್ಳಿಪಳ್ಳಿಗಳೊಳಗಿಂದ ಜನರು ಬಂದು ಶತ್ರುಗಳನ್ನು ಅಡ್ಡಗಟ್ಟಿದರು. ಅವರು ಹಿಂದಕ್ಕೆ ತಿರುಗಲು, ಬೆನ್ನಟ್ಟಿದವರ ಕತ್ತಿಗೆ ಆಹುತಿಯಾಗಿ ಒಬ್ಬರೂ ಉಳಿಯದಂತೆ ಎಲ್ಲರೂ ಹತರಾದರು. 47ತರುವಾಯ ಯೂದನ ಜನರು ಅವರ ಆಯುಧಗಳನ್ನೂ ಕೊಳ್ಳೆಯನ್ನೂ ಸುಲಿಗೆಮಾಡಿಕೊಂಡು, ನಿಕಾನೋರನ ತಲೆಯನ್ನೂ ಅಂದು ಸೊಕ್ಕಿನಿಂದ ಚಾಚಿದ ಬಲಗೈಯನ್ನೂ ಕತ್ತರಿಸಿ, ಅವುಗಳನ್ನು ಒಯ್ದು ಜೆರುಸಲೇಮಿನ ಎದುರಿಗೆ ತೂಗುಹಾಕಿದರು. 48ಇದಕ್ಕಾಗಿ ಜನರು ಬಹಳವಾಗಿ ಹಿಗ್ಗಿ, ಆ ದಿನವನ್ನು ಬಹು ಸಂಭ್ರಮದಿಂದ ಕಳೆದರು. 49ಪ್ರತಿವರ್ಷ ಆ ದಿನವನ್ನು, ಅಂದರೆ ಫಾಲ್ಗುಣ ಮಾಸದ ಹದಿಮೂರನೇ ದಿನವನ್ನು ಮಹಾದಿನವೆಂದು ಆಚರಿಸಬೇಕೆಂದು ನೇಮಕಮಾಡಿದರು. 50ಹೀಗೆ ಕೆಲಕಾಲದವರೆಗೆ ಜುದೇಯ ಪ್ರಾಂತ್ಯದಲ್ಲಿ ಶಾಂತಿ ನೆಲಸಿತು.

**ರೋಮನರೊಂದಿಗೆ ಒಪ್ಪಂದ**

**8** ಯೂದನು ರೋಮನರ ಕೀರ್ತಿಯನ್ನು ಕೇಳಿದ್ದನು. ಅವರು ಪರಾಕ್ರಮಿಗಳಾಗಿರುವುದಲ್ಲದೆ ತಮ್ಮನ್ನು ಕೂಡಿಕೊಳ್ಳುವವರೆಲ್ಲರನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ; ತಮ್ಮ ಬಳಿಗೆ ಬರುವವರೊಂದಿಗೆ ಸ್ನೇಹ ಬೆಳೆಸುತ್ತಾರೆ; ಎಂದು ಕೇಳಿದ್ದನು. 2ಅಲ್ಲದೆ ಅವರು ಬಲಾಢ್ಯರು; ಗಾಲ್ ದೇಶದವರೊಡನೆ ಯುದ್ಧಗಳನ್ನು ನಡೆಸುತ್ತಿದ್ದರು ಎಂದೂ ಅವರ ಸಾಹಸಕಾರ್ಯಗಳ ಬಗ್ಗೆ ತಿಳಿದುಕೊಂಡನು. ಆ ದೇಶದವರನ್ನು ಜಯಿಸಿ, ತಮಗೆ ಕಪ್ಪ ಕೊಡುವವರನ್ನಾಗಿ ಮಾಡಿಕೊಂಡರೆಂದೂ ಅವನಿಗೆ ತಿಳಿದುಬಂದಿತು. 3ಸ್ಪೇನ್ ದೇಶದಲ್ಲಿಯೂ ಅವರು ಮಾಡಿದ ಕಾರ್ಯಗಳು ಅಂದರೆ, ಅಲ್ಲಿರುವ ಬೆಳ್ಳಿಬಂಗಾರದ ಗಣಿಗಳನ್ನು ಹೇಗೆ ಅವರು ತಮ್ಮ ಸ್ವಾಧೀನಮಾಡಿಕೊಂಡರು; 4ಆ ದೇಶವು ತಮ್ಮ ದೇಶದಿಂದ ಬಹುದೂರ ಆಗಿದ್ದರೂ ಅವರು ಹೇಗೆ ತಮ್ಮ ಸಂಕಲ್ಪದಿಂದಲೂ ಉತ್ಸಾಹದಿಂದಲೂ ಅದನ್ನು ತಮ್ಮ ವಶಪಡಿಸಿಕೊಂಡರು, ಧರೆಯ ರಾಜರುಗಳನ್ನು ಹೇಗೆ ಅವರು ಸದೆಬಡಿದು ನಾಶವಾಗುವ ಮಟ್ಟಿಗೆ ಸೋಲಿಸಿದರೆಂದು, ಉಳಿದವರು ಹೇಗೆ ಅವರಿಗೆ ಕಪ್ಪ ಕೊಡುತ್ತಿರುವರು ಎಂದೆಲ್ಲಾ ತಿಳಿದು ಬಂದಿತು. 5ಇದಲ್ಲದೆ, ಫಿಲಿಪ್ಪನನ್ನೂ ಮ್ಯಾಸಿಡೋನಿಯದ ರಾಜನಾದ ಪರ್ಸಿಯಸ್ಸನನ್ನೂ ತಮ್ಮ ಮೇಲೆ ಕೈಯೆತ್ತಿದವರನ್ನೂ ಹೇಗೆ ಅವರು ಯುದ್ಧದಲ್ಲಿ ಸೋಲಿಸಿ ನಾಶಗೊಳಿಸಿದರೆಂದೂ ತಿಳಿದುಕೊಂಡನು. 6ಮೇಲಾಗಿ ಏಷ್ಯಾದ ಮಹಾಪ್ರಭುವಾಗಿದ್ದ ಅಂತಿಯೋಕನು ಒಂದುನೂರ ಇಪ್ಪತ್ತು ಆನೆ, ಅಶ್ವ ಹಾಗು ರಥಗಳ ಸಮೇತವಾಗಿ ದೊಡ್ಡ ಸೈನ್ಯದೊಂದಿಗೆ ತಮ್ಮ ಮೇಲೆ ಯುದ್ಧಕ್ಕೆ ಬಂದಾಗ 7ಹೇಗೆ ಅವನನ್ನು ಸೋಲಿಸಿ ಸಜೀವವಾಗಿ ಸೆರೆಹಿಡಿದು ಅವನೂ ಅವನ ತರುವಾಯ ಆಳುವವರೂ ಅತಿಹೆಚ್ಚು ಕಪ್ಪಕೊಡುವಂತೆ ಮಾಡಿದರು; 8ಅದಲ್ಲದೆ, ಒತ್ತೆಯಾಳುಗಳಾಗಿ ಕೆಲವರನ್ನೂ ಭೂಮಿಯನ್ನೂ ಅಂದರೆ ಇಂಡಿಯಾ, ಮೇದ್ಯ, ಲುದ್ಯ ಮತ್ತು ಅವರ ಒಳ್ಳೊಳ್ಳೇ ಪ್ರದೇಶಗಳನ್ನೂ ಕೊಡುವಂತೆ ಮಾಡಿ, ಅವುಗಳನ್ನು ತೆಗೆದುಕೊಂಡು ಅರಸ ಯುಮೆನೀಸನಿಗೆ ಹೇಗೆ ಕೊಟ್ಟರೆಂದೂ ತಿಳಿದು ಬಂದಿತು.

9 ಅಷ್ಟು ಮಾತ್ರವಲ್ಲ, ಗ್ರೀಸಿನವರು ಒಳಸಂಚು ಮಾಡಿಕೊಂಡು ತಮ್ಮನ್ನು ನಾಶಗೊಳಿಸಲು ಇದ್ದಾರೆಂದು ತಿಳಿದಾಗ, ತಮ್ಮ ದಳವಾಯಿ ಒಬ್ಬನನ್ನು ಅವರ ಮೇಲೆ ಯುದ್ಧಮಾಡಲು ಕಳುಹಿಸಿದರು; 10ಅವರಲ್ಲನೇಕರು ಗಾಯಗೊಂಡು ಮರಣೋನ್ಮುಖಿಗಳಾಗಿ ಬಿದ್ದುಕೊಳ್ಳುವಂತೆ ಮಾಡಿದುದಲ್ಲದೆ ಅವರ ಮಡದಿಮಕ್ಕಳನ್ನು ಸೆರೆಹಿಡಿದುಕೊಂಡು ಅವರನ್ನು ಸುಲಿಗೆಮಾಡಿದರು; ಅವರ ಪ್ರಾಂತ್ಯಗಳನ್ನು ಗೆದ್ದು, ಅವರ ದುರ್ಗಗಳನ್ನು ಕೆಡವಿದರು; ಅವರನ್ನು ಸೂರೆಗೈದು ಇಂದಿನವರೆಗೂ ಹೇಗೆ ದಾಸತ್ವದಲ್ಲಿಟ್ಟಿದ್ದಾರೆ ಎಂದೂ

ಅವನಿಗೆ ತಿಳಿದುಬಂದಿತು. 11ಮೇಲಾಗಿ, ಉಳಿದ ರಾಜ್ಯಗಳ ದ್ವೀಪನಿವಾಸಿಗಳಲ್ಲಿ ಯಾರು ಯಾರು ಅವರ
ಮೇಲೇರಿ ಬಂದರೋ ಅವರೆಲ್ಲರನ್ನೂ ಸೋಲಿಸಿ ಹೇಗೆ ತಮ್ಮ ದಾಸರನ್ನಾಗಿ ಮಾಡಿಕೊಂಡರಾದರೂ,
12ತಮ್ಮ ಮಿತ್ರರೊಂದಿಗೂ ತಮ್ಮ ಆಶ್ರಯದಲ್ಲಿದ್ದವರೊಂದಿಗೂ ಹೇಗೆ ಪ್ರೇಮದಿಂದ ವರ್ತಿಸುತ್ತಾ
ಬಂದಿದ್ದಾರೆಂದೂ, ದೂರದಲ್ಲಿಯೂ ಸಮೀಪದಲ್ಲಿಯೂ ಇರುವ ರಾಜ್ಯಗಳನ್ನು ಹೇಗೆ ತಮ್ಮ ವಶಕ್ಕೆ
ತೆಗೆದುಕೊಂಡರೆಂದೂ ಅವರ ಕೀರ್ತಿಯನ್ನು ಕೇಳಿದವರೆಲ್ಲರೂ ಅವರಿಗೆ ಹೇಗೆ ಭಯಪಡುತ್ತಿದ್ದಾರೆಂದೂ
ತಿಳಿದುಬಂದಿತು. 13ಇದೂ ಅಲ್ಲದೆ, ಅವರು ಯಾರಿಗೆ ನೆರವಾಗಿ ಅರಸೊತ್ತಿಗೆಯನ್ನು ಕೊಡಲು
ಇಷ್ಟಪಡುವರೋ ಅವರನ್ನು ಅರಸರನ್ನಾಗಿ ಮಾಡುವರೆಂದೂ ತಮಗೆ ಇಷ್ಟವಿಲ್ಲದವರನ್ನು
ತಳ್ಳಿಹಾಕುವರೆಂದೂ ಇದರಿಂದ ಅವರು ಬಹು ಉನ್ನತಿಗೇರಿರುವರೆಂದೂ 14ಇಷ್ಟೆಲ್ಲ ಮಾಡಿದರೂ ಅವರಲ್ಲಿ
ಯಾರೂ ಎಂದೂ ಕಿರೀಟವನ್ನು ಧರಿಸಿಕೊಳ್ಳಲಿಲ್ಲವೆಂದೂ, ತಮ್ಮ ದೊಡ್ಡಸ್ತಿಕೆಯನ್ನು ತೋರಿಸುವುದಕ್ಕೆ
ಸಕಲಾತಿಯನ್ನು ತೊಡಲಿಲ್ಲವೆಂದೂ ತಿಳಿದುಬಂದಿತು. 15ಮೇಲಾಗಿ, ಅವರು ಒಂದು ಶಾಸನ
ಸಭಾಮಂದಿರವನ್ನು ಮಾಡಿಕೊಂಡಿರುವರೆಂದೂ, ದಿನದಿನವೂ ಮುನ್ನೂರ ಇಪ್ಪತ್ತು ಜನ ಅಲ್ಲಿ ಕೂಡಿ
ಬಂದು ಜನಸಮೂಹದ ಪರವಾಗಿ ಆಲೋಚನೆ ಮಾಡಿ ಅವರ ಹಿತಕ್ಕಾಗಿ ವ್ಯವಸ್ಥೆ ಮಾಡುವರೆಂದೂ
16ತಮ್ಮನ್ನು ಆಳುವಂತೆಯೂ ತಮ್ಮ ದೇಶದ ಮೇಲೆಲ್ಲಾ ಅಧಿಪತಿಯಾಗಿರುವಂತೆಯೂ ಪ್ರತಿವರ್ಷ ಅವರು
ಒಬ್ಬೊಬ್ಬ ಮನುಷ್ಯನನ್ನು ಇಟ್ಟುಕೊಂಡು ಎಲ್ಲರೂ ಆತನ ಮಾತಿನಂತೆ ನಡೆದುಕೊಳ್ಳುವರೆಂದೂ, ಅವರಲ್ಲಿ
ಯಾವ ದ್ವೇಷಾಸೂಯೆಗಳೂ ಇರುವುದಿಲ್ಲವೆಂದೂ ಅವನಿಗೆ ತಿಳಿದುಬಂದಿತು.

17 ಯೂದನು ಇದನ್ನೆಲ್ಲಾ ಅರಿತು ಹಕೋಚನ ಮೊಮ್ಮಗನೂ ಯೋವಾನನ ಮಗನೂ ಆದ
ಯುಪೊಲಿಮನನ್ನು ಮತ್ತು ಎಲ್ಲಾಜಾರನ ಮಗ ಜೋಸೆಫನನ್ನು ಆಯ್ದುಕೊಂಡು ರೋಮನರೊಂದಿಗೆ
ಸ್ನೇಹದ ಮತ್ತು ಒಕ್ಕೂಟದ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕಾಗಿ ಅವರನು ರೋಮ್‌ನಗರಕ್ಕೆ
ಕಳುಹಿಸಿದನು. 18ಇದಲ್ಲದೆ, ತಮ್ಮ ಮೇಲೆ ಹೊರಿಸಲಾಗಿರುವ ನೊಗವನ್ನು ತಮ್ಮಿಂದ ತೆಗೆಸಿಹಾಕಬೇಕೆಂದು
ಹೇಳಿಕಳುಹಿಸಿದನು. ಏಕೆಂದರೆ ಗ್ರೀಕ್ ಸಾಮ್ರಾಜ್ಯವು ಇಸ್ರಯೇಲರನ್ನು ದಾಸತ್ವದಲ್ಲಿಟ್ಟಿದೆ ಎಂಬುದನ್ನು ಅವರು
ಮನಗಂಡಿದ್ದರು. 19ಅವರಿಬ್ಬರು ರೋಮಿಗೆ ಹೋದರು. ಪ್ರಯಾಣವು ಸುದೀರ್ಘವಾಗಿತ್ತು. ಅಲ್ಲಿ ಅವರು
ಶಾಸನಾ ಸಭಾಮಂದಿರವನ್ನು ಸೇರಿ, ಹೀಗೆಂದು ಸಂಬೋಧಿಸಿದರು: 20"ಮಕ್ಕಬಿ ಎಂದು ಕರೆಯಲಾಗುವ
ಯೂದನು, ಅವನ ಸಹೋದರರು ಹಾಗು ಯೆಹೂದ ಜನಸಮೂಹವು ನಿಮ್ಮೊಂದಿಗೆ ಸಹಕಾರದ
ಒಪ್ಪಂದವನ್ನೂ ಸಂಧಾನವನ್ನೂ ಮಾಡಿಕೊಳ್ಳುವಂತೆಯೂ ನಾವು ನಿಮ್ಮ ಸಹಕಾರಿಗಳೆಂದೂ
ಸ್ನೇಹಿತರೆಂದೂ ಲಿಖಿತವಾಗುವಂತೆಯೂ ನಮ್ಮನ್ನು ನಿಮ್ಮ ಬಳಿಗೆ ಕಳುಹಿಸಿದ್ದಾರೆ."

21 ಈ ಸಲಹೆ ಆ ರೋಮನರ ದೃಷ್ಟಿಯಲ್ಲಿ ಸಮಂಜಸವಾಗಿ ಕಂಡಿತು. 22ಅವರು ತಾಮ್ರಫಲಕದ
ಮೇಲೆ ಮರುತ್ತರ ಬರೆದು ಇದು ಸಂಧಾನದ ಮತ್ತು ಪರಸ್ಪರ ಸಹಕಾರದ ಗುರುತಾಗಿ ಅವರ
ಬಳಿಯಲ್ಲಿರಲೆಂದು ಜೆರುಸಲೇಮಿಗೆ ಕಳುಹಿಸಿದರು. ಆ ಲೇಖನದ ಪ್ರತಿ ಹೀಗಿದೆ:

23 "ರೋಮನರಿಗೂ ಯೆಹೂದ್ಯ ಜನಾಂಗಕ್ಕೂ ಸಾಗರದ ಮೇಲೂ ಭೂಮಿಯ ಮೇಲೂ
ಎಂದೆಂದಿಗೂ ಶುಭವಿರಲಿ! 24ಖಡ್ಗವೂ ಶತ್ರುವೂ ಅವರಿಂದ ದೂರವಾಗಿರಲಿ. ಆದರೆ ಒಂದು ವೇಳೆ
ಮೊದಲು ರೋಮನರ ಮೇಲಾಗಲಿ, ಅವರ ಸಾಮ್ರಾಜ್ಯದಲ್ಲಿರುವ ಅವರ ಮಿತ್ರ ಪಕ್ಷದವರ ಮೇಲಾಗಲಿ,
ಯುದ್ಧ ಪ್ರಾಪ್ತವಾದಲ್ಲಿ 25ಯೆಹೂದ್ಯ ಜನಾಂಗವು ಸಂದರ್ಭಾನುಸಾರ ಪೂರ್ಣ ಮನಸ್ಸಿನಿಂದ ಮಿತ್ರರಂತೆ
ಅವರಿಗೆ ನೆರವಾಗಬೇಕು. 26ಯುದ್ಧ ಹೂಡಿದವರಿಗೆ, ರೋಮಿನ ತೀರ್ಮಾನದ ಪ್ರಕಾರ, ಆಹಾರ,
ಆಯುಧ, ಹಣ, ಹಡಗು ಇವುಗಳಾವುವನ್ನೂ ಒದಗಿಸಬಾರದು, ಕೊಡಿಸಲೂಬಾರದು; ಪ್ರತಿಯಾಗಿ
ಏನನ್ನೂ ತೆಗೆದುಕೊಳ್ಳದೆ, ಅವರು ಈ ಒಪ್ಪಂದದಂತೆ ನಡೆದುಕೊಳ್ಳಬೇಕು. 27ಅದೇ ಮೇರೆಗೆ, ಒಂದು
ವೇಳೆ ಯುದ್ಧವು ಯೆಹೂದ್ಯ ಜನಾಂಗದ ಮೇಲೆ ಬಂದುದ್ದಾದರೆ ರೋಮನರು ಮಿತ್ರ ಪಕ್ಷದವರಂತೆ
ಸಂದರ್ಭಾನುಸಾರ ಪೂರ್ಣ ಮನಸ್ಸಿನಿಂದ ಅವರಿಗೆ ಸಹಾಯ ನೀಡುವರು. 28ಅವರ ಶತ್ರುಗಳ ಮಿತ್ರರಿಗೆ,
ರೋಮಿನ ತೀರ್ಮಾನದ ಪ್ರಕಾರ, ಆಹಾರ, ಆಯುಧ, ಹಣ, ಹಡಗು ಇವುಗಳಾವುವನ್ನೂ
ಕೊಡಲಾಗುವುದಿಲ್ಲ. ಅವರು ತಮ್ಮಲ್ಲಿ ಆದ ಒಪ್ಪಂದವನ್ನು ಮುಚ್ಚು ಮರೆ–ಮೋಸವಿಲ್ಲದೆ
ಕಾಪಾಡಿಕೊಳ್ಳುವರು. 29ಈ ಮಾತುಗಳ ಪ್ರಕಾರ ರೋಮನರು ಯೆಹೂದ್ಯ ಜನರೊಂದಿಗೆ ಒಪ್ಪಂದ

ಮಾಡಿಕೊಂಡಿದ್ದಾರೆ. 30ಆದರೆ ಇನ್ನು ಮುಂದಕ್ಕೆ ಒಂದು ಪಕ್ಷದವರು, ಇಲ್ಲವೆ ಇನ್ನೊಂದು ಪಕ್ಷದವರು, ಇದರಲ್ಲಿ ಏನನ್ನಾದರೂ ಕೂಡಿಸುವ, ಇಲ್ಲವೆ ಕಳೆಯುವ ಆಲೋಚನೆ ಮಾಡಿಕೊಂಡಲ್ಲಿ, ಅವರ ಇಷ್ಟಾನುಸಾರ ಹಾಗೆ ಮಾಡಬಹುದು. ಹೀಗೆ ಕೂಡಿಸಿದ್ದು ಕಳೆದದ್ದು ಸ್ಥಿರವಾಗಿರುವುದು. 31ದೆಮೆತ್ರಿಯನು ಅವರಿಗೆ ಕೊಡುತ್ತಿರುವ ಕಿರುಕುಳದ ಸಂಬಂಧವಾಗಿ ನಾವು ಅವನಿಗೆ, "ನಮ್ಮ ಮಿತ್ರರೂ ನಮ್ಮ ಪಕ್ಷದವರೂ ಆದ ಯೆಹೂದ್ಯರ ಮೇಲೆ ನಿನ್ನ ನೊಗವನ್ನೇಕೆ ಭಾರವಾಗಿರಿಸುವೆ? 32ಅವರು ಮತ್ತೆ ನಿನ್ನ ಮೇಲೆ ದೂರು ತಂದಲ್ಲಿ ಅವರ ನ್ಯಾಯವನ್ನು ಹಿಡಿದು ನಿನ್ನ ಸಂಗಡ ಸಾಗರದ ಮೇಲೆಯೂ ಯುದ್ಧ ಮಾಡುವೆವು ಎಂದು ಬರೆದಿದ್ದೇವೆ."

**ಯೂದನ ಮರಣ**

**9** ನಿಕಾನೋರನೂ ಅವನ ಸೈನ್ಯದವರೂ ಯುದ್ಧದಲ್ಲಿ ಮಡಿದರೆಂಬ ಸುದ್ದಿಯನ್ನು ದೆಮೆತ್ರಿಯನು ಕೇಳಿ, ತನ್ನ ಬಲಾಢ್ಯ ಸೈನ್ಯದೊಂದಿಗೆ ಬಕ್ಕಿದಿಯ ಮತ್ತು ಅಲ್ಕಿಮ ಎಂಬವರನ್ನು ಮತ್ತೆ ಎರಡನೆಯ ಸಾರಿ ಜುದೇಯ ನಾಡಿಗೆ ವಿರುದ್ಧ ಕಳುಹಿಸಿದನು. 2ಅವರು ಗಿಲ್ಗಾಲಿನ ಮಾರ್ಗವಾಗಿ ಹೋಗಿ, ಅರಬೇಲದಲ್ಲಿರುವ ಮೆಸಾಲೋತಿನ ಎದುರಾಗಿ ತಳವೂರಿ ಅದನ್ನು ಹಿಡಿದುಕೊಂಡು, ಅಲ್ಲಿ ಬಹುಜನರನ್ನು ಸಂಹರಿಸಿದರು. 3ತರುವಾಯ 152ನೇ ವರ್ಷದ ಮೊದಲನೆಯ ತಿಂಗಳಲ್ಲಿ ಜೆರುಸಲೇಮಿನ ಎದುರಿಗೆ ಬೀಡುಬಿಟ್ಟರು. 4ಅಲ್ಲಿಂದ ಹೊರಟು ಇಪ್ಪತ್ತು ಸಾವಿರ ಕಾಲಾಳು ಎರಡು ಸಾವಿರ ರಾಹುತರೊಂದಿಗೆ ಬೆರೀಯಕ್ಕೆ ಹೋದರು. 5ಯೂದನು, ಆರಿಸಿ ತೆಗೆದ ಮೂರು ಸಾವಿರ ಜನರೊಂದಿಗೆ ಏಲಾತದಲ್ಲಿ ತಳವೂರಿದನು.

6 ಶತ್ರುಗಳ ಮಹಾದಳವನ್ನು ಕಂಡು, ಅವರ ಜನಸಮೂಹವು ದೊಡ್ಡದಾಗಿದೆಯೆಂದು ತಿಳಿದು ಯೂದನ ಸೈನಿಕರು ಎದೆಗುಂದಿದರು; ಅನೇಕರು ಸೈನ್ಯವನ್ನು ಬಿಟ್ಟು ಜಾರಿಕೊಂಡರು; ಆದುದರಿಂದ ಎಂಟುನೂರು ಜನಕ್ಕಿಂತ ಹೆಚ್ಚು ಜನರು ಉಳಿಯಲಿಲ್ಲ. 7ಹೀಗೆ ಸೈನಿಕರು ಜಾರಿಕೊಂಡದ್ದನ್ನೂ ಯುದ್ಧವು ಮೈಮೇಲೆ ಬಂದುದನ್ನೂ ಯೂದನು ಕಂಡು ಮನಸ್ಸಿನಲ್ಲೇ ನೊಂದುಕೊಂಡನು; ಮೇಲಾಗಿ, ಪುನಃ ಅವರೆಲ್ಲರನ್ನು ಒಂದುಗೂಡಿಸುವುದಕ್ಕೆ ಸಮಯವೂ ಇರಲಿಲ್ಲ. 8ಇದನ್ನು ನೋಡಿ ನಿರಾಶೆಗೊಂಡು ತನ್ನ ಬಳಿಯಲ್ಲಿದ್ದವರಿಗೆ, "ನಾವು ಎದ್ದು ಶತ್ರುಗಳ ಮೇಲೆ ಬೀಳೋಣ; ಒಂದು ವೇಳೆ ಅವರೊಂದಿಗೆ ಕಾದಾಡಲು ಶಕ್ತರಾದೇವು," ಎಂದು ಹೇಳಿದನು.

9 ಅವರು, "ನಾವು ಹೇಗೂ ಶಕ್ತರಾಗಲಾರೆವು, ಈಗ ನಮ್ಮ ಜೀವವನ್ನು ಉಳಿಸಿಕೊಂಡು ಹೋಗಿ, ನಮ್ಮ ಸಹೋದರರೊಂದಿಗೆ ಮರಳಿಬಂದು, ಇವರೊಂದಿಗೆ ಯುದ್ಧಮಾಡೋಣ; ಏಕೆಂದರೆ ನಾವು ಬಹು ಸ್ವಲ್ಪ ಜನ ಉಳಿದುಕೊಂಡು ಇದ್ದೇವೆ," ಎಂದು ಹೇಳಿ, ಅವನ ಮನಸ್ಸನ್ನು ಬದಲಾಯಿಸಲು ಯತ್ನಮಾಡಿದರು. 10ಅದಕ್ಕೆ ಯೂದನು, "ಹಾಗಾಗದಿರಲಿ; ಇವರಿಗೆ ಬೆನ್ನು ತೋರಿಸಿ ಓಡಿಹೋಗುವ ಹೀನಕಾರ್ಯವನ್ನು ನಾನು ಮಾಡಲಾರೆ. ನಮ್ಮ ಸಮಯವು ಬಂದದೇ ಆಗಿದ್ದರೆ, ನಮ್ಮ ಗೌರವವನ್ನು ಕಳೆದುಕೊಂಡು ನಿಂದೆಗೆ ಗುರಿಯಾಗುವುದಕ್ಕಿಂತ, ನಮ್ಮ ಸಹೋದರರಿಗೋಸ್ಕರ ಶೂರರಾಗಿ ಸಾಯೋಣ," ಎಂದು ಹೇಳಿದನು.

11 ಶತ್ರುದಳವು ಇವರನ್ನು ಎದುರಿಸುವುದಕ್ಕೆ ತಳಬಿಟ್ಟಿತು. ರಾಹುತರು ಎರಡು ಭಾಗವಾಗಿ ವಿಂಗಡಿಸಲ್ಪಟ್ಟರು; ಕವಣೆಯವರೂ ಬಿಲ್ಲುಗಾರರೂ ಬಲಾಢ್ಯರಾದ ಯೋಧಶ್ರೇಷ್ಠರೂ ಸೈನ್ಯದ ಮುಂಭಾಗದಲ್ಲಿ ಬರುತ್ತಿದ್ದರು; ಬಕ್ಕಿದಿಯನು ಬಲಪಕ್ಷದಲ್ಲಿದ್ದನು. 12ವ್ಯೂಹದ ಎರಡು ಪಕ್ಷಗಳೂ ಸಮೀಪಿಸುತ್ತಾ ಬರಲು ಅವರು ಕಹಳೆಗಳನ್ನು ಊದಿದರು. 13ಯೂದನ ಜನರೂ ಕಹಳೆಗಳನ್ನು ಊದಿದರು. ಸೈನ್ಯಗಳ ಗರ್ಜನೆಯಿಂದ ಭೂಮಿ ಕಂಪಿಸಿತು. ತರುವಾಯ ಕೈಗೆ ಕೈ ಹತ್ತಿತು. ಬೆಳಗಿನಿಂದ ಬೈಗಿನವರೆಗೆ ಘೋರ ಕದನವಾಯಿತು.

14 ಬಕ್ಕಿದಿಯನೂ ಅವನ ಸೈನ್ಯಕ್ಕೆ ಮುಖ್ಯ ಆಧಾರವಾದ ದಂಡಾಳುಗಳೂ ಬಲಪಕ್ಷದಲ್ಲಿ ಇರುವುದನ್ನು ಯೂದನು ಕಂಡು, ತನ್ನ ಕೆಚ್ಚೆದೆಯ ವೀರರೊಂದಿಗೆ ಅತ್ತ ತಿರುಗಿದನು. 15ಅವನು ಬಲಭಾಗದಲ್ಲಿದ್ದವರನ್ನು ಸೋಲಿಸಿ, ಅಜೋತ ಗುಡ್ಡದವರೆಗೂ ಅವರನ್ನು ಬೆನ್ನಟ್ಟಿದನು. 16ಬಲಭಾಗದ

ಸೈನ್ಯವು ಸೋತು ಓಡುವುದನ್ನು ಎಡ ಭಾಗದಲ್ಲಿದ್ದವರು ಕಂಡು, ಯೂದನನ್ನೂ ಅವನ ಸಂಗಡಿಗರನ್ನೂ ಹಿಂಬಾಲಿಸಿದರು. 17ಅಲ್ಲಿ ಘನಘೋರ ಕಾಳಗ ನಡೆಯಿತು. ಇಬ್ಬಣಗಳಲ್ಲಿಯೂ ಅನೇಕರು ಗಾಯಗೊಂಡು ಮಡಿದರು. 18ಯೂದನು ಮಡಿದನು; ಉಳಿದವರು ಓಡಿ ಹೋದರು. 19ಯೋನಾತನನು ಹಾಗು ಸಿಮೋನರು ತಮ್ಮ ಸಹೋದರನಾದ ಯೂದನನ್ನು ತೆಗೆದುಕೊಂಡು ಹೋಗಿ, ಮೋದೀನದಲ್ಲಿದ್ದ ತಮ್ಮ ಪೂರ್ವಜರ ಸಮಾಧಿಯಲ್ಲಿ ಭೂಸ್ಥಾಪನೆ ಮಾಡಿ, ಅಲ್ಲಿ ಅವನಿಗಾಗಿ ಗೋಳಾಡಿದರು. 20ಇಸ್ರಯೇಲರೆಲ್ಲರೂ ಅವನಿಗಾಗಿ ಬಹಳವಾಗಿ ಅತ್ತು ಪ್ರಲಾಪಿಸಿದ್ದಲ್ಲದೆ, 21"ಇಸ್ರಯೇಲರ ರಕ್ಷಣಾವೀರನೇ, ನೀನು ಹೇಗೆ ತಾನೆ ಹತನಾದೆ!" ಎಂದು ಹೇಳುತ್ತಾ ಬಹುದಿನಗಳವರೆಗೆ ಗೋಳಾಡಿದರು.

22 ಯೂದನ ಚರಿತ್ರೆ, ಅವನು ಮಾಡಿದ ಯುದ್ಧಗಳು, ಶೂರಕೃತ್ಯಗಳು ಹಾಗು ಅವನ ದೊಡ್ಡಸ್ತಿಕೆಯ ವಿಷಯ ಇವೆಲ್ಲವನ್ನು ಇಲ್ಲಿ ಬರೆಯಲಾಗಿಲ್ಲ; ಅವು ಅಪಾರವಾಗಿವೆ.

## ಯೂದನ ಸ್ಥಾನದಲ್ಲಿ ಯೋನಾತನನು

23 ಯೂದನ ಮರಣಾನಂತರ ಅಧರ್ಮಿಗಳು ಇಸ್ರಯೇಲಿನ ಎಲ್ಲ ಪ್ರದೇಶಗಳಲ್ಲಿಯು ತಲೆ ಎತ್ತಿದರು. ಅಕ್ರಮ ನಡೆಸುವವರೆಲ್ಲರು ಬೆಳಕಿಗೆ ಬಂದರು. 24ಆ ದಿನಗಳಲ್ಲಿ ದೊಡ್ಡ ಬರವೂ ಕಾಣಿಸಿಕೊಂಡದ್ದರಿಂದ ನಾಡೆಲ್ಲಾ ಅವರ ಕಡೆ ಸೇರಿತು. 25ಬಕ್ಕಿದಿಯನು ಅಧರ್ಮಿಗಳನ್ನು ಆಯ್ದುಕೊಂಡು ಅವರನ್ನು ನಾಡಿನ ಒಡೆಯರನ್ನಾಗಿ ನೇಮಿಸಿದನು. 26ಇವರು ಯೂದನ ಸ್ನೇಹಿತರನ್ನು ವಂಚಿಸಿ, ಅವರನ್ನು ಬಕ್ಕಿದಿಯನ ಬಳಿಗೆ ತಂದರು; ಅವನು ಅವರ ಮೇಲೆ ಸೇಡು ತೀರಿಸಿಕೊಂಡು ಅವರನ್ನು ಅತಿಯಾಗಿ ಅವಮಾನಪಡಿಸಿದನು. 27ಇಸ್ರಯೇಲರಲ್ಲಿ ಹಿಂಸಾಚಾರಗಳು ಹೆಚ್ಚಾದವು; ಪ್ರವಾದಿಗಳು ಮರೆಯಾದ ಕಾಲದಿಂದಲೂ ಅಂಥ ಅನಾಚಾರಗಳು ಕಂಡುಬಂದಿರಲಿಲ್ಲ.

28 ಹೀಗಿರಲಾಗಿ, ಯೂದನ ಸ್ನೇಹಿತರೆಲ್ಲರೂ ಕೂಡಿಕೊಂಡು ಯೋನಾತನನಿಗೆ, 29"ನಿನ್ನ ಅಣ್ಣ ಯೂದನು ಕಾಲವಾದಂದಿನಿಂದ ನಮ್ಮ ಶತ್ರುಗಳ ವಿರುದ್ಧ, ಬಕ್ಕಿದಿಯನ ವಿರುದ್ಧ ಹಾಗು ನಮ್ಮನ್ನು ಹಗೆಮಾಡುತ್ತಿರುವ ನಮ್ಮ ಜನಾಂಗದವರ ವಿರುದ್ಧ ಹೋರಾಡಲು ಅವನಂಥವರು ನಮ್ಮಲ್ಲಿ ಯಾರೂ ಇಲ್ಲ; 30ಆದುದರಿಂದ ನಮ್ಮ ಯುದ್ಧಗಳನ್ನು ನಡೆಸುವಂತೆ ನಿನ್ನನ್ನು ಇಂದು ಅವನ ಸ್ಥಳದಲ್ಲಿ ನಮ್ಮ ಒಡೆಯನನ್ನಾಗಿಯೂ ನಾಯಕನನ್ನಾಗಿಯೂ ನಾವು ಆಯ್ದುಕೊಂಡಿದ್ದೇವೆ," ಎಂದು ಹೇಳಿದರು. 31ಅಂದು ಯೋನಾತನನು ರಾಜ್ಯಾಡಳಿತವನ್ನು ವಹಿಸಿಕೊಂಡು ತನ್ನ ಅಣ್ಣ ಯೂದನ ಸ್ಥಾನದಲ್ಲಿ ನಿಂತನು.

## ಯೋನಾತನನ ದಂಡಯಾತ್ರೆ

32 ಬಕ್ಕಿದಿಯನು ಇದನ್ನರಿತು ಯೋನಾತನನನ್ನು ಸಂಹರಿಸಲು ಯತ್ನಿಸಿದನು. 33ಈ ಸಂಗತಿ ಯೋನಾತನನಿಗೂ ಅವನ ಅಣ್ಣ ಸಿಮೋನನಿಗೂ ಅವನ ಸಂಗಡ ಇದ್ದವರೆಲ್ಲರಿಗೂ ತಿಳಿದಾಗ, ಅವರು ತೆಕೋವ ಅಡವಿಗೆ ಓಡಿಹೋಗಿ, ಅಸ್ಪರ್ ಕೊಳದ ನೀರಿನ ಬಳಿಯಲ್ಲಿ ಬಿಡಾರ ಮಾಡಿದರು. 34ಬಕ್ಕಿದಿಯನ್ನು, ಸಬ್ಬತ್‌ದಿನದಲ್ಲೇ ಇದನ್ನರಿತು, ಅವನೂ ಅವನ ಸೈನ್ಯವೆಲ್ಲವೂ ಹೊರಟು ಬಂದು ಜೋರ್ಡನ್ ನದಿಯನ್ನು ದಾಟಿದರು. 35ಯೋನಾತನನು ತಮ್ಮಲ್ಲಿ ಹೆಚ್ಚಾಗಿದ್ದ ಗಂಟು ಮೂಟೆಗಳನ್ನೆಲ್ಲಾ ತನ್ನ ಸ್ನೇಹಿತರಾಗಿದ್ದ ನಬಾಯೋತಿನವರು ತಮ್ಮಲ್ಲಿ ಇಟ್ಟುಕೊಳ್ಳುವಂತೆ ಬಿನ್ನವಿಸುವುದಕ್ಕಾಗಿ ಜನಸ್ತೋಮದ ನಾಯಕನಾಗಿದ್ದ ತನ್ನ ಸಹೋದರನನ್ನು ಅವರ ಬಳಿಗೆ ಕಳುಹಿಸಿದನು. 36ಆದರೆ ಯಂಬ್ರಿಯ ಮಕ್ಕಳು ಮೇದೆಬಾದಿಂದ ಹೊರಬಂದು, ಯೊವಾನ್ನನನ್ನು ಹಿಡಿದು ಅವನಲ್ಲಿದ್ದುದೆಲ್ಲವನ್ನೂ ಕಿತ್ತುಕೊಂಡು ಹೋದರು.

37 ಇದಾದ ಬಳಿಕ ಯಂಬ್ರಿಯನ ಮಕ್ಕಳು ದೊಡ್ಡ ಮದುವೆಯ ಸಮಾರಂಭದಲ್ಲಿ ಇದ್ದಾರೆಂದು ಹಾಗು ಕಾನಾನಿನ ಪ್ರಮುಖರಲ್ಲಿಯ ಒಬ್ಬನ ಮಗಳಾದ ವಧುವನ್ನು ನದಬಾತಿನಿಂದ ದೊಡ್ಡ ಪರಿವಾರದೊಡನೆ ತರುತ್ತಿದ್ದಾರೆ ಎಂದು ಯೋನಾತನನಿಗೂ ಅವನ ಅಣ್ಣ ಸಿಮೋನನಿಗೂ ಸುದ್ದಿ ತರಲಾಯಿತು. 38ಅವರು ತಮ್ಮ ತಮ್ಮನಾದ ಯೋವಾನ್ನನನ್ನು ಸ್ಮರಿಸಿಕೊಂಡು ಹೋಗಿ ಗುಡ್ಡದ ಮರೆಯಲ್ಲಿ ಅಡಗಿಕೊಂಡರು. 39ಅವರು ಕಣ್ಣೆತ್ತಿ ನೋಡಿದಾಗ, ಅಗೋ, ದೊಡ್ಡ ದಿಬ್ಬಣವನ್ನೂ ಬಹಳ ಸರಕನ್ನೂ

ಕಂಡರು. ವರನು ತನ್ನ ಬಂಧುಮಿತ್ರರೊಡನೆ ಆ ಕಡೆಯವರನ್ನು ಎದುರುಗೊಳ್ಳಲಿಕ್ಕೆ ದಮ್ಮಡಿಗಳೊಂದಿಗೂ ಓಲಗದವರೊಂದಿಗೂ ಅನೇಕ ಆಯುಧಗಳೊಂದಿಗೂ ಬಂದನು. 40ಅವರು ತಾವು ಅಡಗಿಕೊಂಡಿದ್ದ ಸ್ಥಳದಿಂದ ಎದ್ದು ಬಂದು ಅವರನ್ನು ಸಂಹರಿಸಿದರು. ಅವರಲ್ಲಿ ಅನೇಕರು ಗಾಯಗೊಂಡು ಮರಣೋನ್ಮುಖಿಗಳಾಗಿ ಬಿದ್ದರು; ಉಳಿದವರು ಗುಡ್ಡಕ್ಕೆ ಓಡಿಹೋದರು. ಅವರ ವಸ್ತುಒಡವೆಗಳೆಲ್ಲಾ ಇವರ ಹಸ್ತಗತವಾದವು. 41ಮದುವೆಯು ಗೋಳಾಟವಾಗಿ ಮಾರ್ಪಟ್ಟಿತು. ಓಲಗನಾದವು ಆರ್ತನಾದವಾಯಿತು. 42ಅವರು ತಮ್ಮ ತಮ್ಮನ ನೆತ್ತರಕ್ಕೆ ಪೂರ್ತಿ ಸೇಡು ತೀರಿಸಿಕೊಂಡು ಜೋರ್ಡನ್ ನದಿಯ ಜವುಳಿನ ಕಡೆಗೆ ಹಿಂದಿರುಗಿದರು.

43 ಬಕ್ಕಿದಿಯನು ಇದನ್ನು ಕೇಳಿ, ಸಬ್ಬತ್ ದಿನ ದೊಡ್ಡ ಸೈನ್ಯದೊಂದಿಗೆ ಜೋರ್ಡನ್ನಿನ ತೀರಕ್ಕೆ ಬಂದನು. 44ಯೋನಾತನನು ತನ್ನ ಸಂಗಡಿಗರಿಗೆ, "ನಾವು ಎದ್ದು ನಮ್ಮ ಪ್ರಾಣ ರಕ್ಷಣೆಗಾಗಿ ಯುದ್ಧಮಾಡೋಣ; ಏಕೆಂದರೆ ಇಂದಿನ ದಿನ ನಿನ್ನೆ ಮೊನ್ನೆಯಂತಿಲ್ಲ. 45ಯುದ್ಧವು ಮುಂದೆಯೂ ಇದೆ, ಹಿಂದೆಯೂ ಇದೆ. ಮೇಲಾಗಿ ಜೋರ್ಡನ್ ನದಿಯ ನೀರು ಈ ಕಡೆಗೂ ಇದೆ, ಆ ಕಡೆಗೂ ಇದೆ. ಇದು ಜವಳು, ಕಾಡು. ಆದುದರಿಂದ ಬೇರೆ ಕಡೆಗೆ ತಿರುಗಿಕೊಳ್ಳಲು ಇಲ್ಲಿ ಸ್ಥಳವಿಲ್ಲ. 46ನಿಮ್ಮ ಶತ್ರುಗಳ ಕೈಯಿಂದ ಬಿಡಿಸಬೇಕೆಂದು ದೇವರಿಗೆ ಮೊರೆಯಿಡಿ," ಎಂದು ಹೇಳಿದನು.

47 ಸಮರವು ಆರಂಭವಾಯಿತು. ಯೋನಾತನನು ಬಕ್ಕಿದಿಯನನ್ನು ಹೊಡೆಯುವುದಕ್ಕೆ ಅವನ ಮೇಲೆ ಬೀಳಲು ಅವನು ಹಿಂದೆ ಸರಿದು ಹೋದನು. 48ಆಗ ಯೋನಾತನನೂ ಅವನ ಸಂಗಡಿಗರೂ ಜೋರ್ಡನ್ ನದಿಯಲ್ಲಿ ಧುಮುಕಿ ಈಸಿಕೊಂಡು ಆಚೆ ದಡಕ್ಕೆ ಹೋದರು. ಅವರಾದರೋ ಇವರನ್ನು ಬೆನ್ನಟ್ಟಿಕೊಂಡು ಜೋರ್ಡನ್ ನದಿಯನ್ನು ದಾಟಿ ಇವರ ಮೇಲೆ ಬರಲಿಲ್ಲ. 49ಅಂದು ಬಕ್ಕಿದಿಯನ ಸೈನ್ಯದಲ್ಲಿ ಸುಮಾರು ಒಂದು ಸಾವಿರ ಜನರು ಸತ್ತುಬಿದ್ದರು. 50ಬಕ್ಕಿದಿಯನು ಜೆರುಸಲೇಮಿಗೆ ಹಿಂದಿರುಗಿದನು. ಜುದೇಯದೊಳಗಿದ್ದ ಜೆರಿಕೋವಿನ ಕೋಟೆಗು ಎಮ್ಮಾವು, ಬೇತ್‌ಹೋರೋನ್, ಬೇತೇಲ್, ತಿಮ್ನಾ, ಫರಾತೋನ್ ಮತ್ತು ತೇಫೋನ್ ಎಂಬ ಊರುಗಳಿಗೂ ಎತ್ತರವಾದ ಗೋಡೆಗಳನ್ನು ಕಟ್ಟಿಸಿದನು; ಬಾಗಿಲು ಅಗುಳಿಗಳನ್ನು ಇಡಿಸಿ, ಅವುಗಳನ್ನು ಭದ್ರಪಡಿಸಿದನು. 51ಅಲ್ಲಿ ಇಸ್ರಯೇಲರನ್ನು ಕಾಡುವುದಕ್ಕಾಗಿ ಅವನು ಕಾವಲುದಳವನ್ನು ಇರಿಸಿದನು. 52ಬೇತ್ಸೂರ್, ಗಜರಾಗಳನ್ನೂ ಜೆರುಸಲೇಮಿನ ಕೋಟೆಯನ್ನೂ ಭದ್ರಗೊಳಿಸಿ, ಅವುಗಳಲ್ಲಿ ಸೈನಿಕರನ್ನು ಇರಿಸಿದ್ದಲ್ಲದೆ ಆಹಾರವನ್ನೂ ಸಂಗ್ರಹಿಸಿ ಇಟ್ಟನು. 53ಇದಲ್ಲದೆ ಆ ನಾಡಿನ ಪ್ರಮುಖರ ಮಕ್ಕಳನ್ನು ಒತ್ತೆಯಾಳುಗಳಾಗಿ ತೆಗೆದುಕೊಂಡು ಅವರನ್ನು ಜೆರುಸಲೇಮಿನ ಕೋಟೆಯೊಳಗೆ ಕಾವಲಿನಲ್ಲಿ ಇರಿಸಿದನು.

54 150ನೇ ವರ್ಷದ ಎರಡನೆಯ ತಿಂಗಳು ಅಲ್ಕಿಮನು ಪವಿತ್ರಸ್ಥಾನದ ಒಳಗಿನ ಪ್ರಾಕಾರದ ಗೋಡೆಯನ್ನು ಕೆಡವಿಹಾಕಲು ಅಪ್ಪಣೆಯನ್ನಿತ್ತು ಪ್ರವಾದಿಗಳು ಮಾಡಿಸಿದ್ದ ಕೆಲಸಗಳನ್ನು ಕೆಡವಿಸಿದನು. 55ಅವನು ಇವುಗಳನ್ನು ಕೆಡವುದಕ್ಕೆ ಆರಂಭಿಸಿದಾಗಲೇ ಅವನಿಗೆ ಪೆಟ್ಟುಬಿಡಿಯಿತು. ಅವನ ಕೆಲಸಕ್ಕೆ ಅಡ್ಡಿಯಾಯಿತು; ಅವನ ಬಾಯಿ ನಿಂತುಹೋಯಿತು; ಅವನಿಗೆ ಪಾರ್ಶ್ವವಾಯು ಬಡಿದು ಮಾತಾಡಲಾರದವನಾದನು; ಆದುದರಿಂದ ತನ್ನ ಮನೆಯನ್ನು ಕುರಿತು ಯಾವ ಬಗೆಯ ವ್ಯವಸ್ಥೆಯನ್ನೂ ಮಾಡಲಾರದೆ ಹೋದನು. 56ಕಡೆಗೆ ಅಲ್ಕಿಮನು ಬಹು ಸಂಕಟಪಟ್ಟು ಕಾಲವಾದನು.

57 ಅಲ್ಕಿಮನು ತೀರಿಕೊಂಡದ್ದನ್ನು ಬಕ್ಕಿದಿಯನು ಕಂಡು, ಅರಸನ ಬಳಿಗೆ ಹಿಂದಿರುಗಿದನು. ಅಂದಿನಿಂದ ಜುದೇಯ ನಾಡಿನಲ್ಲಿ ಎರಡು ವರ್ಷ ಸಮಾಧಾನವಿತ್ತು.

58 ಆಗ ಅಧರ್ಮಿಗಳೆಲ್ಲರು ಸೇರಿ, "ಯೋನಾತನನೂ ಅವನ ಪಕ್ಷದವರೂ ನಿರ್ಭಯವಾಗಿ ಬದುಕುತ್ತಿದ್ದಾರೆ; ಆದುದರಿಂದ ನಾವೀಗ ಬಕ್ಕಿದಿಯನನ್ನು ಕರೆದುತರೋಣ; ಅವನು ಒಂದೇ ರಾತ್ರಿಯಲ್ಲಿ ಅವರನ್ನು ಸರೆಹಿಡಿದು ಬಿಡುವನು," ಎಂದು ಆಲೋಚನೆಮಾಡಿಕೊಂಡರು. 59ಅವನ ಬಳಿಗೆ ಹೋಗಿ ಅವನೊಂದಿಗೆ ಮಾತಾಡಿದರು. 60ಅವನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೊರಟು, ಯೋನಾತನನನ್ನೂ ಅವನ ಸಂಗಡ ಇದ್ದವರನ್ನೂ ಹಿಡಿದುಕೊಳ್ಳಬೇಕೆಂದು ಜುದೇಯದಲ್ಲಿದ್ದ ತನ್ನ ಸ್ನೇಹಿತರಿಗೆ ಗುಪ್ತವಾಗಿ ಪತ್ರಗಳನ್ನು ಕಳುಹಿಸಿದನು. ಆದರೆ ಗುಟ್ಟುರಟ್ಟಾಗಿ ಹೋಯಿತು. ಆದುದರಿಂದ ಇವರ ಆಟ ನಡೆಯಲಿಲ್ಲ. 61ಯೋನಾತನನ ಕಡೆಯವರು ಈ ದುಷ್ಟತನಕ್ಕೆ ಕಾರಣರಾದ ಆ ನಾಡಿನ ಸುಮಾರು

ಐವತ್ತು ಜನರನ್ನು ಸೆರೆಹಿಡಿದು ಸಂಹರಿಸಿದರು. 62ತರುವಾಯ ಯೋನಾತನ, ಸಿಮೋನ ಮತ್ತು ಅವನ ಸಂಗಡಿಗರು ಅಲ್ಲಿಂದ ಹೊರಬಿದ್ದು ಅರಣ್ಯದಲ್ಲಿದ್ದ ಬೇತ್ಬಾಸಿಗೆ ಹೋಗಿ, ಕೆಡವಿ ಹಾಕಲಾಗಿದ್ದ ಅದರ ಗೋಡೆಗಳನ್ನು ತಿರುಗಿ ಕಟ್ಟಿ ಅವನ್ನು ಬಲಪಡಿಸಿದರು. 63ಬಕ್ಕಿದಿಯನು ಇದನ್ನು ಅರಿತು ತನ್ನ ಸಮೂಹವನ್ನೆಲ್ಲಾ ಕೂಡಿಸಿಕೊಂಡು, ಜುದೇಯದಲ್ಲಿದ್ದವರಿಗೆ ಸುದ್ದಿಯನ್ನು ತಿಳಿಸಿದನು. 64ಬೇತ್ಬಾಸಿಗೆ ಹೋಗಿ, ಅದರ ಎದುರಾಗಿ ಬೀಡುಬಿಟ್ಟುಕೊಂಡು ಅನೇಕ ದಿನಗಳವರೆಗೆ ಯುದ್ಧಮಾಡಿದನು ಹಾಗು ಯುದ್ಧ ಯಂತ್ರಗಳನ್ನು ಏರ್ಪಡಿಸಿದನು. 65ಯೋನಾತನನು ತನ್ನ ಅಣ್ಣ ಸಿಮೋನನನ್ನು ಪಟ್ಟಣದೊಳಗೆ ಬಿಟ್ಟು, ತಾನು ಕೆಲವು ಜನರೊಂದಿಗೆ ಬಯಲಿಗೆ ಬಂದನು. 66ಒದೋಮೇರಾನನ್ನೂ ಅವನ ಸಹೋದರರನ್ನೂ ಫಾಸಿರೋನನ ಮಕ್ಕಳನ್ನೂ ಅವರ ಗುಡಾರಗಳಲ್ಲಿಯೇ ಹೊಡೆದನು. 67ಆಮೇಲೆ ಈ ಜನರೂ ಆತನ ತಂಡಗಳಿಗೆ ಸೇರಿ ಕಾದಾಡತೊಡಗಿದರು. ಇತ್ತ ಸಿಮೋನನೂ ಅವನ ಸಂಗಡಿಗರೂ ಪಟ್ಟಣದ ಹೊರಗೆ ಬಂದು ಯುದ್ಧ ಯಂತ್ರಗಳಿಗೆ ಬೆಂಕಿಹಚ್ಚಿ ಬಕ್ಕಿದಿಯನೊಂದಿಗೆ ಯುದ್ಧಹೂಡಿದರು. 68ಅವನು ಅಪಜಯಹೊಂದಿದನು. ಅವರು ಅವನನ್ನು ನಜ್ಜು ಗುಜ್ಜು ಮಾಡಿದರು; ಅವನ ಆಲೋಚನೆಯೂ ದಾಳಿಯೂ ವ್ಯರ್ಥವಾದುವು. 69ಅವನು ತಮ್ಮ ನಾಡಿಗೆ ಬರಬೇಕೆಂದು ಸಲಹೆಕೊಟ್ಟ ಅಧರ್ಮಿಗಳ ಮೇಲೆ ಉರಿದೆದ್ದು ಅವರಲ್ಲಿ ಅನೇಕರನ್ನು ಸಂಹರಿಸಿದನು. ತರುವಾಯ ತನ್ನ ದೇಶಕ್ಕೆ ಹಿಂದಿರುಗುವ ಆಲೋಚನೆ ಮಾಡಿದನು. 70ಯೋನಾತನನು ಇದನ್ನರಿತು ಅವನ ಕಡೆಗೆ ರಾಯಭಾರಿಗಳನ್ನು ಕಳುಹಿಸಿ, ಶಾಂತಿಸಂಧಾನ ಮಾಡಿಕೊಂಡು ಸೆರೆಯಾಳುಗಳನ್ನು ಹಿಂದಿರುಗಿಸಬೇಕೆಂದು ಹೇಳಿಸಿದನು. 71ಅವನು ಅದಕ್ಕೆ ಒಪ್ಪಿಕೊಂಡು ಅವನು ಹೇಳಿಕಳುಹಿಸಿದಂತೆ ಮಾಡಿದುದಲ್ಲದೆ ತನ್ನ ಜೀವಮಾನಕಾಲವೆಲ್ಲಾ ಯಾವ ಹಾನಿಯನ್ನು ಮಾಡುವುದಿಲ್ಲವೆಂದು ಮಾತುಕೊಟ್ಟನು. 72ಬಕ್ಕಿದಿಯನು ಈ ಮೊದಲು ಜುದೇಯ ಪ್ರಾಂತ್ಯದಲ್ಲಿ ಸೆರೆಹಿಡಿದವರನ್ನು ಹಿಂದಕ್ಕೆ ಕಳುಹಿಸಿ ತನ್ನ ನಾಡಿಗೆ ಹೋದನು. ಅಂದಿನಿಂದ ಅವನು ಅವರ ಗಡಿಯ ಕಡೆಗೆ ಮರಳಿ ಸುಳಿಯಲೇ ಇಲ್ಲ. 73ಇಸ್ರಯೇಲಿನಲ್ಲಿ ಯುದ್ಧವು ನಿಂತು ಹೋಯಿತು. ಯೋನಾತನನು ಮಿಕ್ಮಾಷಿನಲ್ಲಿ ನೆಲಸಿದನು. ಅವನು ಜನಾಂಗವನ್ನು ಆಳತೊಡಗಿ ಇಸ್ರಯೇಲಿನಲ್ಲಿ ಅಧರ್ಮಿಗಳ ಹೆಸರೇ ಉಳಿಯದಂತೆ ಮಾಡಿದನು.

**10** 160ನೇ ವರ್ಷ ಅಂತಿಯೋಕನ ಮಗ ಅಲೆಕ್ಸಾಂಡರ್ ಎಪಿಫನೇಸನು ಪ್ತೊಲೆಮಾಯ ಪಟ್ಟಣವನ್ನು ಆಕ್ರಮಿಸಿಕೊಂಡನು. ಅಲ್ಲಿಯವರು ಅವನನ್ನು ಅಂಗೀಕರಿಸಲು, ಅವನು ದೊರೆಯಾಗಿ ಆಳಿದನು. 2ಅರಸ ದೆಮೆತ್ರಿಯನು ಇದನ್ನು ಕೇಳಿ ಮಹಾ ಸೈನ್ಯವೊಂದನ್ನು ಕೂಡಿಸಿಕೊಂಡು ಅವನ ಮೇಲೆ ಯುದ್ಧಕ್ಕೆ ಹೋದನು. 3ದೆಮೆತ್ರಿಯನು ಯೋನಾತನನನ್ನು ಹೊಗಳಿ, ಶಾಂತಿಯುತ ಮಾತುಗಳಿಂದ ಕೂಡಿದ ಕಾಗದಗಳನ್ನು ಅವನಿಗೆ ಕಳುಹಿಸಿದನು. 4ಏಕೆಂದರೆ, "ಅವನು ನಮ್ಮ ವಿರೋಧವಾಗಿ ಅಲೆಕ್ಸಾಂಡರನೊಂದಿಗೆ ಶಾಂತಿ ಸಂಧಾನಮಾಡಿಕೊಳ್ಳುವ ಮೊದಲೇ ಅವನೊಂದಿಗೆ ಸಂಧಾನಮಾಡಿಕೊಳ್ಳೋಣ; 5ಏಕೆಂದರೆ ನಾವು ಅವನಿಗೂ ಅವನ ಸಹೋದರರಿಗೂ ಅವನ ಜನಾಂಗಕ್ಕೂ ಮಾಡಿದ ಎಲ್ಲಾ ಕೇಡನ್ನು ನೆನಪಿಗೆ ತಂದುಕೊಂಡಾನು," ಎಂದು ಭಾವಿಸಿದನು. 6ಯೋನಾತನನಿಗೆ ದಂಡನ್ನು ಕೂಡಿಸಿಕೊಳ್ಳುವುದಕ್ಕೂ ಆಯುಧಗಳನ್ನು ಒದಗಿಸುವುದಕ್ಕೂ ತನ್ನ ಮಿತ್ರಪಕ್ಷದವನಾಗಿ ಇರುವುದಕ್ಕೂ ಅಧಿಕಾರ ಕೊಟ್ಟಿದ್ದಲ್ಲದೆ, ಕೋಟೆಯಲ್ಲಿ ಇದ್ದವರನ್ನೆಲ್ಲಾ ಅವನಿಗೆ ಒತ್ತೆಯಾಳುಗಳಾಗಿ ಒಪ್ಪಿಸಲು ಆಜ್ಞೆಮಾಡಿದನು.

7 ಯೋನಾತನನು ಜೆರುಸಲೇಮಿಗೆ ಬಂದು ಎಲ್ಲಾ ಜನರ ಮುಂದೆ ಹಾಗು ಕೋಟೆಯಲ್ಲಿ ಇರುವವರ ಎದುರಿನಲ್ಲಿ ಆ ಕಾಗದಗಳನ್ನು ಓದಿದನು. 8ಸೈನ್ಯವನ್ನು ಕೂಡಿಸಿಕೊಳ್ಳುವುದಕ್ಕೆ ಅರಸನು ಅವನಿಗೆ ಅಧಿಕಾರ ಕೊಟ್ಟಿದ್ದಾನೆಂಬ ಸಂಗತಿಯನ್ನು ಅವರು ಕೇಳಿ ಬಹಳವಾಗಿ ಅಂಜಿಕೊಂಡರು. 9ಅಲ್ಲಿ ಒತ್ತೆಯಾಳುಗಳಾಗಿದ್ದವರನ್ನು ಯೋನಾತನನಿಗೆ ಒಪ್ಪಿಸಿದರು. ಅವನು ಅವರನ್ನು ಅವರ ತಂದೆತಾಯಿಗಳಿಗೆ ಒಪ್ಪಿಸಿಕೊಟ್ಟನು. 10ತರುವಾಯ ಯೋನಾತನನು ಜೆರುಸಲೇಮಿನಲ್ಲೆ ನೆಲಸಿ, ಆ ಪಟ್ಟಣವನ್ನು ಕಟ್ಟುವುದಕ್ಕೂ ಅದರ ಜೀರ್ಣೋದ್ಧಾರ ಮಾಡುವುದಕ್ಕೂ ಆರಂಭಿಸಿದನು. 11ಅವನು ಕೆಲಸದವರಿಗೆ, "ಭದ್ರತೆಗಾಗಿ, ಸಿಯೋನ್ ಗುಡ್ಡದ ಸುತ್ತಲೂ ಚೌಕುಕಲ್ಲುಗಳಿಂದ ಗೋಡೆಗಳನ್ನು ಕಟ್ಟಬೇಕು," ಎಂದು ಆಜ್ಞಾಪಿಸಲು ಅವರು

ಹಾಗೆಯೇ ಮಾಡಿದರು. 12ಇತ್ತ ಬಕ್ಕಿದಿಯನು ಕಟ್ಟಿಸಿದ್ದ ಕೋಟೆಗಳಲ್ಲಿದ್ದ ಪರದೇಶಿಯರು ಅಲ್ಲಿಂದ ಓಡಿ ಹೋದರು. 13ಪ್ರತಿಯೊಬ್ಬನು ತನ್ನ ತನ್ನ ಸ್ಥಳವನ್ನು ಬಿಟ್ಟು ತನ್ನ ಸ್ವದೇಶಕ್ಕೆ ಹೋದನು. 14ಆದರೆ ಆಜ್ಞಾನಿಯಮಗಳನ್ನು ಬಿಟ್ಟು ನಡೆಯುವ ಕೆಲವರು ಮಾತ್ರ ಬೇತ್ಸೂರೆಯಲ್ಲಿ ಉಳಿದುಕೊಂಡಿದ್ದರು; ಏಕೆಂದರೆ ಅದು ಅವರಿಗೆ ಆಶ್ರಯಸ್ಥಾನವಾಗಿತ್ತು.

15 ಯೋನಾತನನಿಗೆ ದೆಮೆತ್ರಿಯನು ಕೊಟ್ಟಿದ್ದ ವಾಗ್ದಾನಗಳನ್ನೆಲ್ಲಾ ಅಲೆಕ್ಸಾಂಡರನು ಕೇಳಿದನು. ಇದಲ್ಲದೆ, ಯೋನಾತನನು ಮಾಡಿದ್ದ ಯುದ್ಧಗಳನ್ನೂ ಅವನೂ ಅವನ ಸಹೋದರರೂ ಗೈದಿದ್ದ ಶೂರಕೃತ್ಯಗಳನ್ನೂ ಅವನಿಗೆ ತಿಳಿಸಿದ್ದರು. 16ಅಲೆಕ್ಸಾಂಡರನು ಇದನ್ನು ಕೇಳಿ, "ಇಂತಹ ಇನ್ನೊಬ್ಬ ಮನುಷ್ಯನು ನಮಗೆ ಸಿಕ್ಕಾನೇ? ಅವನನ್ನು ನಾವು ನಮ್ಮ ಮಿತ್ರನನ್ನಾಗಿಯೂ ಸಹಾಯಕನನ್ನಾಗಿಯೂ ಮಾಡಿಕೊಳ್ಳೋಣ," ಎಂದು ಹೇಳಿ 17ಈ ಕೆಳಗಿರುವಂತೆ ಅವನಿಗೆ ಪತ್ರಬರೆಯಿಸಿ ಕಳುಹಿಸಿದನು:

18 "ಸಹೋದರನಾದ ಯೋನಾತನನಿಗೆ ಅರಸ ಅಲೆಕ್ಸಾಂಡರನು ಮಾಡುವ ವಂದನೆಗಳು! 19ನೀನು ಅತಿ ಶೂರಪುರುಷನೆಂದೂ ನಮ್ಮ ಮಿತ್ರನಾಗಿರಲು ಯೋಗ್ಯನೆಂದೂ ನಾವು ನಿನ್ನ ವಿಷಯವಾಗಿ ಕೇಳಿದ್ದೇವೆ; 20ಈ ಪ್ರಯುಕ್ತ ನೀನು ನಿನ್ನ ಜನಾಂಗಕ್ಕೆ ಪ್ರಧಾನ ಯಾಜಕನಾಗಿರಬೇಕೆಂದು ಹಾಗು ಅರಸನ ಮಿತ್ರನೆಂದು ಕರೆಯಲ್ಪಡಬೇಕೆಂದೂ ಈ ದಿನ ನಾವು ನೇಮಕ ಮಾಡಿದ್ದೇವೆ; (ಅವನಿಗೆ ರಾಜವಸ್ತ್ರಗಳನ್ನೂ ಬಂಗಾರದ ಕಿರೀಟವನ್ನೂ ಕಳುಹಿಸಿದನು.) ನೀನು ನಮ್ಮ ಪಕ್ಷದವನಾಗಿರಬೇಕು; ನಮ್ಮೊಂದಿಗೆ ಸ್ನೇಹದಿಂದಿರಬೇಕು."

21 160ನೇ ವರ್ಷ, ಏಳನೆಯ ತಿಂಗಳು, ಪರ್ಣಶಾಲೆಗಳ ಜಾತ್ರೆಯ ಕಾಲದಲ್ಲಿ, ಯೋನಾತನನು ಪ್ರಧಾನ ಯಾಜಕನ ವಸ್ತ್ರಗಳನ್ನು ಧರಿಸಿಕೊಂಡನು. ಅವನು ಸೈನ್ಯವನ್ನು ಕೂಡಿಸಿ, ಅದಕ್ಕೆ ಬೇಕಾದ ಆಯುಧಗಳನ್ನು ಒದಗಿಸಿದನು.

### ಅರಸ ಅಲೆಕ್ಸಾಂಡರನಿಗೆ ಯೋನಾತನನ ಬೆಂಬಲ – ದೆಮೆತ್ರಿಯನ ಪತ್ರ

22 ದೆಮೆತ್ರಿಯನು ಈ ಸುದ್ದಿಯನ್ನು ಕೇಳಿ ವ್ಯಸನಗೊಂಡು, 23"ನಾವು ಮಾಡಿದ್ದೇನೆ! ಯೆಹೂದ್ಯರೊಂದಿಗೆ ಸ್ನೇಹವನ್ನು ಸ್ಥಿರಗೊಳಿಸಿ, ತನ್ನನ್ನೆ ಬಲಪಡಿಸಿಕೊಳ್ಳುವುದರಲ್ಲಿ ಅಲೆಕ್ಸಾಂಡರನೇ ನಮಗಿಂತ ಮುಂದಾದನಲ್ಲಾ; 24ಅವರು ನನ್ನೊಂದಿಗಿದ್ದು ನನಗೆ ನೆರವಾಗುವಂತೆ ಸ್ಥಾನ ಮಾನಗಳನ್ನೂ ದಾನಗಳನ್ನೂ ಕೊಡುತ್ತೇನೆಂದು ಉತ್ತೇಜನದಾಯಕ ಮಾತುಗಳನ್ನು ಬರೆಯುವೆನು," ಎಂದುಕೊಂಡು 25ಈ ರೀತಿ ಬರೆದು ಕಳುಹಿಸಿದನು:

> "ಅರಸನಾದ ದೆಮೆತ್ರಯನು ಯೆಹೂದ್ಯ ಜನಾಂಗಕ್ಕೆ ಮಾಡುವ ವಂದನೆಗಳು! 26ನೀವು ನಮ್ಮೊಂದಿಗೆ ಮಾಡಿಕೊಂಡ ಒಡಂಬಡಿಕೆಗನುಸಾರ ನಮ್ಮ ಮಿತ್ರರಾಗಿಯೇ ಇರುವಿರೆಂದೂ ನಮ್ಮ ಹಗೆಗಳನ್ನು ಕೂಡಿಕೊಳ್ಳುವುದಿಲ್ಲವೆಂದೂ ನಾವು ಕೇಳಿ ಆನಂದಪಡುತ್ತೇವೆ. 27ಇನ್ನು ಮುಂದೆಯೂ ನೀವು ನಮ್ಮೊಂದಿಗೆ ವಿಶ್ವಾಸದಿಂದಲೇ ನಡೆದುಕೊಳ್ಳಿ. ನೀವು ನಮಗೆ ಮಾಡುವ ಸಹಾಯಕ್ಕಾಗಿ ನಾವು ನಿಮಗೆ ಒಳ್ಳೇ ಪ್ರತಿಫಲ ಕೊಡುತ್ತೇವೆ. 28ನಿಮಗೆ ಅನೇಕ ಸೌಲಭ್ಯಗಳನ್ನು ಮಾಡಿಕೊಡುತ್ತೇವೆ; ಮೇಲಾಗಿ ಬಹುಮಾನಗಳನ್ನೂ ಕೊಡುತ್ತೇವೆ. 29ನಾವೀಗ ನಿನ್ನನ್ನೂ ಯೆಹೂದ್ಯರನ್ನೂ ಕಂದಾಯದಿಂದಲೂ ಉಪ್ಪಿನ ಕರದಿಂದಲೂ ಅರಸನಿಗೆ ಸಲ್ಲತಕ್ಕ ಕಪ್ಪಕಾಣಿಕೆಗಳಿಂದಲೂ ಮುಕ್ತಮಾಡುತ್ತೇವೆ. 30ನನಗೆ ಸಲ್ಲತಕ್ಕ ನಿಮ್ಮ ಬೆಳೆಯ ಮೂರನೆಯ ಭಾಗವನ್ನೂ ಹಣ್ಣುಹಂಪಲುಗಳ ಅರ್ಧಭಾಗವನ್ನೂ ನಿಮ್ಮ ಸ್ವಾಧೀನ ಮಾಡುತ್ತೇವೆ. ಅದನ್ನು ಜುದೇಯ ನಾಡಿನಿಂದಾಗಲಿ, ಸಮಾರಿಯ, ಗಲಿಲೇಯಗಳಿಂದ ಪ್ರತ್ಯೇಕವಾಗಿ ಅದಕ್ಕೆ ಸೇರಿಸಲಾಗಿರುವ ಮೂರು ಅಧಿಪತ್ಯಗಳಿಂದಾಗಲಿ ಇನ್ನು ಮುಂದೆ ಎಂದಿಗೂ ತೆಗೆದುಕೊಳ್ಳುವುದಿಲ್ಲ. 31ಜೆರುಸಲೇಮ್ ಹಾಗು ಅದರ ಮೇರೆಗಳು ಮತ್ತು ಅದರ ದಶಮಾಂಶ ಸುಂಕಗಳು ಪವಿತ್ರವೂ ಸ್ವತಂತ್ರವೂ ಆಗಿರಲಿ. 32ಜೆರುಸಲೇಮಿನಲ್ಲಿರುವ ಕೋಟೆಯ ಮೇಲಿದ್ದ ನಮ್ಮ ಅಧಿಕಾರವನ್ನು ಬಿಟ್ಟುಕೊಟ್ಟಿದ್ದೇವೆ; ಅದನ್ನು ಪ್ರಧಾನ ಯಾಜಕನಿಗೆ ಕೊಟ್ಟಿದ್ದೇವೆ. ಅದನ್ನು ಕಾಯುವುದಕ್ಕೆ ತನಗೆ ಬೇಕಾದವರನ್ನು ಅವನು ಆರಿಸಿಕೊಳ್ಳಬಹುದು. 33ಜುದೇಯ ನಾಡಿನಿಂದ ನಮ್ಮ ರಾಜ್ಯದ ಯಾವ ಭಾಗದಲ್ಲೇ ಆಗಲಿ, ಸೆರೆ ಒಯ್ಯಲ್ಪಟ್ಟಿರುವ ಪ್ರತಿಯೊಬ್ಬ ಯೆಹೂದ್ಯನನ್ನು ಉಚಿತವಾಗಿ

ಬಿಡುಗಡೆಮಾಡುತ್ತೇವೆ. ಎಲ್ಲರೂ ಅವರ ದನಕರುಗಳ ಮೇಲಿನ ತೆರಿಗೆಯನ್ನು ಸಹ ಕೊಡಬೇಕಾಗಿಲ್ಲ. 34ಎಲ್ಲ ಹಬ್ಬ, ಸಬ್ಬತ್‍ಗಳು, ಅಮಾವಾಸ್ಯೆ ಮತ್ತು ನಿಯತ ದಿನಗಳು, ಹಬ್ಬದ ಮುಂಚಿನ ಮೂರು ದಿನಗಳು, ಅದರ ನಂತರದ ಮೂರು ದಿನಗಳು, ನಮ್ಮ ರಾಜ್ಯದಲ್ಲಿರುವ ಎಲ್ಲಾ ಯೆಹೂದ್ಯರಿಗೆ ರಿಯಾಯಿತಿಯ ಮತ್ತು ಕರಮುಕ್ತ, ದಿನಗಳಾಗಿರಲಿ. 35ಅವರಿಂದ ಏನನ್ನಾದರೂ ಕಸಿದು ಕೊಳ್ಳುವುದಕ್ಕಾಗಲಿ, ಯಾವ ವಿಷಯದಲ್ಲೇ ಆಗಲಿ ಅವರಿಗೆ ತೊಂದರೆ ಕೊಡುವುದಕ್ಕಾಗಲಿ ಯಾರಿಗೂ ಅಧಿಕಾರವಿರಕೂಡದು. 36ಯೆಹೂದ್ಯರಲ್ಲಿ ಸುಮಾರು ಮೂವತ್ತು ಸಾವಿರ ಗಂಡಾಳುಗಳು ಅರಸನ ಸಐನ್ಯದಲ್ಲಿ ಸೇರಬಹುದು. ಅರಸನ ಸೈನ್ಯದವರಿಗೆ ಸಲ್ಲತಕ್ಕ ಸಂಬಳವನ್ನು ಅವರಿಗೂ ಕೊಡಲಾಗುವುದು. 37ಅದರಲ್ಲಿ ಕೆಲವರನ್ನು ಅರಸನ ದೊಡ್ಡ ದುರ್ಗಗಳಲ್ಲಿ ಇಡಲಾಗುವುದು; ಕೆಲವರನ್ನು ರಾಜ್ಯದ ಜವಾಬ್ದಾರಿಯ ಕೆಲಸದ ಮೇಲೆ ಇಡಲಾಗುವುದು. ಅವರ ಮೇಲ್ವಿಚಾರಕರೂ ಮೇಲಾಧಿಕಾರಿಗಳೂ ಅವರೊಳಗಿನವರೇ ಆಗಿರಲಿ. ಅವರು ಜುದೇಯ ನಾಡಿನಲ್ಲಿ ಅರಸನು ಅಪ್ಪಣೆ ಮಾಡಿರುವಂತೆ ತಮ್ಮ ನಿಯಮಗಳು ಪ್ರಕಾರ ನಡೆದುಕೊಳ್ಳಲಿ. 38ಸಮಾರಿಯ ಪ್ರಾಂತ್ಯದಿಂದ ಜುದೇಯಕ್ಕೆ ಜೋಡಿಸಲಾಗಿರುವ ಮೂರು ಅಧಿಪತ್ಯಗಳು ಜುದೇಯಕ್ಕೆ ಸೇರಲ್ಪಟ್ಟು ಒಬ್ಬ ಅಧಿಕಾರಿಯ ಕೈಕೆಳಗಿರುವಂತಾಗಲಿ; ಅವು ಪ್ರಧಾನ ಯಾಜಕನ ಹೊರತಾಗಿ ಬೇರೆ ಯಾವ ಅಧಿಕಾರಿಗೂ ಒಳಗಾಗದಿರಲಿ. 39ಪ್ತೊಲೆಮಾಯವನ್ನೂ ಅದಕ್ಕೆ ಸಂಬಂಧಿಸಿದ ಸೀಮೆಯನ್ನೂ ಜೆರುಸಲೇಮಿನಲ್ಲಿರುವ ಪವಿತ್ರಾಲಯಕ್ಕೆ ಉಂಬಳಿಯಾಗಿ ಕೊಟ್ಟಿದ್ದೇವೆ; ಅದು ಪವಿತ್ರಾಲಯದ ಖರ್ಚುವೆಚ್ಚಕ್ಕಾಗಿ ಆಗಲಿ. 40ಮೇಲಾಗಿ ರಾಜನ ಬೊಕ್ಕಸದಿಂದ ಪ್ರತಿವರ್ಷ ಹದಿನೈದು ಸಾವಿರ ಬೆಳ್ಳಿಯ ನಾಣ್ಯಗಳನ್ನು ಅನುಕೂಲವಾದ ಸ್ಥಳದಿಂದ ಅದಕ್ಕೆ ಸಲ್ಲಿಸುವೆವು. 41ಇದಲ್ಲದೆ ಈ ಮೊದಲಿನ ವರ್ಷಗಳಲ್ಲಿ ವೆಚ್ಚವಾಗುತ್ತಿದ್ದಂತೆ ವೆಚ್ಚವಾಗದೆ ಮಿಕ್ಕಿದುದನ್ನು ಇನ್ನು ಮೇಲೆ ದೇವಾಲಯದ ಕೆಲಸಗಳಿಗಾಗಿ ಕೊಡಲಾಗುವುದು. 42ಪವಿತ್ರಾಲಯದ ಆದಾಯದಿಂದ ವರ್ಷ ವರ್ಷವೂ ಅವರು ತೆಗೆದುಕೊಳ್ಳುತ್ತಿದ್ದ ಐದು ಸಾವಿರ ಬೆಳ್ಳಿಯ ನಾಣ್ಯಗಳನ್ನು ಬಿಟ್ಟು ಕೊಡಲಾಗಿದೆ; ಏಕೆಂದರೆ ಸೇವೆಮಾಡುವ ಯಾಜಕರಿಗೆ ಅದು ಸಂಬಂಧಪಟ್ಟದ್ದು. 43ಹಣದ ವಿಷಯದಲ್ಲೇ ಆಗಲಿ, ಇನ್ನಾವ ವಿಷಯದಲ್ಲೇ ಆಗಲಿ ರಾಜನಿಗೆ ಋಣಿಯಾದ ಯಾರಾದರು ಜೆರುಸಲೇಮಿನಲ್ಲಿರುವ ದೇವಾಲಯಕ್ಕೆ ಓಡಿಬಂದರೆ, ಇಲ್ಲವೆ ಅದರ ಗಡಿ ಒಳಗೆ ಆಶ್ರಯಿಸಿಕೊಂಡರೆ, ಅವರೂ ನಮ್ಮ ರಾಜ್ಯದಲ್ಲಿರುವ ಅವರದೆಲ್ಲವೂ ಬಿಡುಗಡೆ ಹೊಂದಲಿ. 44ದೇವಾಲಯದ ಕಟ್ಟಡಕ್ಕೂ, ಅದರ ಜೀರ್ಣೋದ್ಧಾರಕ್ಕೂ ತಗಲುವ ವೆಚ್ಚವನ್ನು ಅರಸನ ಬೊಕ್ಕಸದಿಂದಲೇ ಕೊಡಲಾಗುವುದು. 45ಮತ್ತು ಜೆರುಸಲೇಮಿನ ಗೋಡೆಗಳನ್ನು ಕಟ್ಟುವುದಕ್ಕೂ ಸುತ್ತಲೂ ಅವುಗಳನ್ನು ಭದ್ರಮಾಡುವುದಕ್ಕೂ ಜುದೇಯದೊಳಗಿನ ಗೋಡೆಗಳನ್ನು ಕಟ್ಟಿಸುವುದಕ್ಕೂ ತಗಲುವ ವೆಚ್ಚವು ಸಹ ರಾಜಭಂಡಾರದಿಂದಲೇ ಕೊಡಲಾಗುವುದು."

## ದೆಮೆತ್ರಿಯನ ಪತ್ರ ತಿರಸ್ಕೃತ

46 ಯೋನಾತನನೂ ಅವನ ಜನರೂ ಈ ಮಾತುಗಳನ್ನು ಕೇಳಿದಾಗ ಅವುಗಳನ್ನು ನಂಬಲೂ ಇಲ್ಲ, ಸ್ವೀಕರಿಸಲೂ ಇಲ್ಲ. ಏಕೆಂದರೆ, ಅವನು ಇಸ್ರಯೇಲರಿಗೆ ಮಾಡಿದ ದೊಡ್ಡ ಕೇಡನ್ನೂ ಅವರಿಗೆ ಕೊಟ್ಟ ಉಪದ್ರವವನ್ನೂ ಅವರು ನೆನಪಿಗೆ ತಂದುಕೊಂಡರು. 47ಆದುದರಿಂದ ಅವರು ಅಲೆಕ್ಸಾಂಡರನನ್ನೇ ಮೆಚ್ಚಿಕೊಂಡರು; ಕಾರಣ, ಸಮಾಧಾನದ ಮಾತುಗಳಿಗೆ ಮೊದಲು ಮಾತಾಡಿದವನು ಅವನೇ ಆಗಿದ್ದನು; ಅವರು ನಿತ್ಯವೂ ಅವನಿಗೆ ಸಹಕಾರಿಗಳಾಗಿದ್ದರು. 48ಹೀಗಿರಲು ಅಲೆಕ್ಸಾಂಡರನು ದೊಡ್ಡ ದಂಡನ್ನು ಕೂಡಿಸಿಕೊಂಡು ದೆಮೆತ್ರಿಯನ ಎದುರಾಗಿ ಪಾಳೆಯಮಾಡಿಕೊಂಡನು. 49ಉಭಯ ರಾಜರೂ ಕಾಳಗವನ್ನು ಆರಂಭಿಸಿದರು. ದೆಮೆತ್ರಿಯನ ಸೈನ್ಯವು ಪಲಾಯನಮಾಡಿತು. ಅಲೆಕ್ಸಾಂಡರನು ಅವರನ್ನು ಬೆನ್ನಟ್ಟಿಕೊಂಡು ಹೋಗಿ ಸೋಲಿಸಿದನು. 50ಅಂದು ಇಳಿಹೊತ್ತಿನವರೆಗೂ ವಿಶ್ರಾಂತಿ ತೊರೆದು ಬಲವಾಗಿ ಕಾದಾಡಿದನು. ಕಡೆಗೆ ದೆಮೆತ್ರಿಯನು ಮಡಿದನು.

## ಕ್ಲಿಯೊಪಾತ್ರಳೊಡನೆ ಅಲೆಕ್ಸಾಂಡರನ ಮದುವೆ

51 ಅಲೆಕ್ಸಾಂಡರನು ಈಜಿಪ್ಟಿನ ಅರಸ ಪ್ತೊಲೆಮೇಯನ ಬಳಿಗೆ ರಾಯಭಾರಿಗಳನ್ನು ಕಳುಹಿಸಿ, 52"ನಾನೀಗ ಹಿಂದಿರುಗಿ ನನ್ನ ರಾಜ್ಯಕ್ಕೆ ಬಂದಿದ್ದೇನೆ; ನನ್ನ ಪೂರ್ವಜರ ಸಿಂಹಾಸನವನ್ನು ಏರಿದ್ದೇನೆ; ನನ್ನ ಸಾಮ್ರಾಜ್ಯವನ್ನು ಮರಳಿ ಗಳಿಸಿಕೊಂಡಿದ್ದೇನೆ; ದೆಮೆತ್ರಿಯನನ್ನು ಪರಾಜಯಗೊಳಿಸಿ ನಮ್ಮ ನಾಡನ್ನು ಪಡೆದಿದ್ದೇನೆ. 53ನಾನು ಅವನೊಂದಿಗೆ ಯುದ್ಧಮಾಡಲಾಗಿ ಅವನೂ ಅವನ ಸೈನ್ಯವೂ ಪರಾಜಿತವಾದರು; ನಾವು ಹೋಗಿ ಅವನ ರಾಜ್ಯದ ಸಿಂಹಾಸನವನ್ನೇರಿದ್ದೇವೆ. 54ಹೀಗಿರುವುದರಿಂದ, ನಾವು ಪರಸ್ಪರ ಸ್ನೇಹವನ್ನು ದೃಢಪಡಿಸೋಣ. ಈಗ ನಿನ್ನ ಮಗಳನ್ನು ನನಗೆ ಮದುವೆಮಾಡಿಕೊಡು; ನಾನು ನಿನ್ನ ಸಂಗಡ ಸಂಬಂಧ ಬೆಳೆಸುವುದಲ್ಲದೆ ನಿನಗೂ ಅವಳಿಗೂ ಯೋಗ್ಯವಾದ ಕೊಡುಗೆಗಳನ್ನು ಕೊಡುವೆನು," ಎಂದು ಹೇಳಿಸಿದನು. 55ರಾಜ ಪ್ತೊಲೆಮೇಯನು ಉತ್ತರಕೊಟ್ಟು, "ನೀನು ನಿನ್ನ ಪೂರ್ವಜರ ನಾಡಿಗೆ ಹಿಂದಿರುಗಿ ಬಂದ ದಿನವೂ ಅವರ ಸಿಂಹಾಸನವನ್ನು ಏರಿದ ದಿನವೂ ಶುಭಮಯವಾದುದೇ! 56ನೀನು ಬರೆದು ಕಳುಹಿಸಿದಂತೆ ನಾನು ಮಾಡುವೆನು; ಆದರೆ ನಾವು ಒಬ್ಬರನ್ನೊಬ್ಬರು ನೋಡುವಂತೆ ಪ್ತೊಲೆಮಾಯದಲ್ಲಿ ನನ್ನನ್ನು ಸಂಧಿಸು; ನೀನು ಹೇಳಿದಂತೆ ನಾನು ನಿನ್ನೊಂದಿಗೆ ಸಂಬಂಧ ಬೆಳೆಸುವೆನು," ಎಂದು ಹೇಳಿಕಳುಹಿಸಿದನು.

57 ಪ್ತೊಲೆಮೇಯನು 162ನೇ ವರ್ಷದಲ್ಲಿ ತನ್ನ ಮಗಳಾದ ಕ್ಲಿಯೊಪಾತ್ರಳೊಂದಿಗೆ ಈಜಿಪ್ಟನ್ನು ಬಿಟ್ಟು ಪ್ತೊಲೆಮಾಯಕ್ಕೆ ಬಂದನು. 58ಅರಸ ಅಲೆಕ್ಸಾಂಡರನನ್ನು ಭೇಟಿಯಾಗಿ ಅವನಿಗೆ ತನ್ನ ಮಗಳಾದ ಕ್ಲಿಯೊಪಾತ್ರಳನ್ನು ಕೊಟ್ಟು ಮದುವೆಯ ಕಾರ್ಯವನ್ನು ನೆರವೇರಿಸಿದನು. ಮದುವೆಯು ಅರಸನಿಗೆ ತಕ್ಕಂತೆ ಬಹು ಸಂಭ್ರಮದಿಂದ ನೆರವೇರಿತು.

## ಯೋನಾತನನಿಗೆ ದಂಡನಾಯಕನ ಪದವಿ

59 ಅರಸ ಅಲೆಕ್ಸಾಂಡರನು ಯೋನಾತನನಿಗೆ ಕಾಗದ ಬರೆದು ತನ್ನನ್ನು ಬಂದು ಕಾಣಬೇಕೆಂದು ತಿಳಿಸಿದನು. 60ಅವನು ಸಡಗರದಿಂದ ಪ್ತೊಲೆಮಾಯಕ್ಕೆ ಹೋಗಿ ರಾಜರಿಬ್ಬರನ್ನೂ ಕಂಡು, ಅವರಿಗೂ ಅವರ ಮಿತ್ರರಿಗೂ ಬೆಳ್ಳಿ ಬಂಗಾರವನ್ನೂ ಕಾಣಿಕೆಗಳನ್ನೂ ಕೊಟ್ಟು ಅವರ ಮೆಚ್ಚುಗೆಯನ್ನು ಪಡೆದನು. 61ಇಸ್ರಯೇಲರಲ್ಲಿ ಕೇಡುಕರೂ ದುರ್ಮಾರ್ಗಿಗಳೂ ಆಗಿದ್ದ ಕೆಲವರು ಅವನ ವಿರುದ್ಧ ದೂರು ಹೇಳಲು ಕೂಡಿಕೊಂಡು ಬಂದರು. 62ಆದರೆ ಅರಸನು ಅವರನ್ನು ಗಮನಿಸಲೇ ಇಲ್ಲ. ಬದಲಿಗೆ "ಯೋನಾತನನ ವಸ್ತ್ರಗಳನ್ನು ತೆಗೆದು ಅವನಿಗೆ ರಾಜವಸ್ತ್ರವನ್ನು ಹೊದಿಸಬೇಕು," ಎಂದು ಅಪ್ಪಣೆಮಾಡಲು, ಅವರು ಹಾಗೆಯೇ ಮಾಡಿದರು. 63ಅರಸನು ಅವನನ್ನು ತನ್ನ ಬಳಿಯಲ್ಲಿ ಕೂರಿಸಿಕೊಂಡನು. ಅನಂತರ ತನ್ನ ಸರದಾರರಿಗೆ, "ಇವನೊಂದಿಗೆ ಊರೊಳಗೆ ಹೋಗಿರಿ, ಯಾರೂ ಯಾವ ವಿಷಯದಲ್ಲೂ ಇವನ ಮೇಲೆ ದೂರು ತರಬಾರದೆಂದೂ ಯಾರೂ ಯಾವ ವಿಷಯದಲ್ಲೂ ಇವನಿಗೆ ತೊಂದರೆ ಕೊಡಬಾರದೆಂದೂ ಪ್ರಕಟಿಸಿರಿ," ಎಂದು ಹೇಳಿದನು. 64ಯೋನಾತನನ ಮೇಲೆ ದೂರು ತಂದವರೆಲ್ಲರು ಪ್ರಕಟಣೆ ಹೊರಡಿಸಿದಂತೆ ಅವನ ಘನತೆಯನ್ನೂ ಅವನ ಮೇಲಿದ್ದ ರಾಜವಸ್ತ್ರಗಳನ್ನೂ ಕಂಡಾಗ ಓಡಿಹೋದರು. 65ಅರಸನು ಅವನಿಗೆ ಸನ್ಮಾನ ಮಾಡಿ, ತನ್ನ ಮುಖ್ಯ ಸ್ನೇಹಿತರಲ್ಲಿ ಒಬ್ಬನಾಗಿ ಅವನನ್ನು ದಂಡನಾಯಕನನ್ನಾಗಿಯೂ, ಪ್ರಾಂತ್ಯದ ಅಧಿಪತಿಯನ್ನಾಗಿಯೂ ನೇಮಕಮಾಡಿದನು. 66ಯೋನಾತನನು ಶಾಂತಿ ಸಂತೋಷಗಳಿಂದ ಜೆರುಸಲೇಮಿಗೆ ಹಿಂದಿರುಗಿದನು.

## ಅಪಲ್ಲೋನಿಯನ ಮೇಲೆ ಯೋನಾತನನ ವಿಜಯ

67 165ನೇ ವರ್ಷ ದೆಮೆತ್ರಿಯನ ಮಗ ಇಮ್ಮಡಿ ದೆಮೆತ್ರಿಯನು ಕ್ರೇಟ್‌ನಿಂದ ತನ್ನ ಪೂರ್ವಿಕರ ನಾಡಿಗೆ ಬಂದನು. 68ಅರಸ ಅಲೆಕ್ಸಾಂಡರನು ಇದನ್ನು ಕೇಳಿ, ಬಹಳ ವ್ಯಸನಗೊಂಡು ಅಂತಿಯೋಕ್ಯಕ್ಕೆ ಹಿಂದಿರುಗಿದನು. 69ದೆಮೆತ್ರಿಯನು ದಕ್ಷಿಣ ಸಿರಿಯಾದ ಸರದಾರನಾಗಿದ್ದ ಅಪೊಲ್ಲೋನಿಯನನ್ನು ಪುನಃ ಅದೇ ಪದವಿಗೆ ನೇಮಿಸಲಾಗಿ, ಅವನು ದೊಡ್ಡ ದಂಡನ್ನು ಕೂಡಿಸಿಕೊಂಡು, ಜಮ್ನಿಯದಲ್ಲಿ ಪಾಳೆಯಮಾಡಿ, ಪ್ರಧಾನಯಾಜಕನಾದ ಯೋನಾತನನಿಗೆ,

70 "ನಮ್ಮ ವಿರುದ್ಧ ತಲೆ ಎತ್ತಿದವನು ನೀನೊಬ್ಬನೇ; ನಿನ್ನ ದೆಸೆಯಿಂದ ನಾನು ಅಪಹಾಸ್ಯಕ್ಕೂ ನಿಂದೆಗೂ ಗುರಿಯಾಗಬೇಕಾಯಿತು; ಗುಡ್ಡಗಳಲ್ಲಿದ್ದುಕೊಂಡು ನಿನಗೆ ಬಲವಿದೆ ಎಂದು ನಮ್ಮ ಎದುರಿನಲ್ಲಿ ಕೊಚ್ಚಿಕೊಳ್ಳುವುದು ಏಕೆ? 71ನಿನ್ನ ಸೈನ್ಯಬಲದಲ್ಲಿ ನಿನಗೆ ಭರವಸೆ ಇದ್ದಲ್ಲಿ ನಮ್ಮ ಬಳಿಗೆ ಬಯಲುಸೀಮೆಗೆ ಬಾ; ಅಲ್ಲಿ ನಾವಿಬ್ಬರೂ ಸಂಧಿಸಿ, ಈ ಸಮಸ್ಯೆಯನ್ನು ಒಮ್ಮೆಗೆ ಬಗೆಹರಿಸಿಬಿಡೋಣ; ಏಕೆಂದರೆ ಪಟ್ಟಣಗಳ ಬಲವು ನನಗಿದೆ. 72ನಾನೂ ನಿನಗೆ ನೆರವಾಗುವ ಇತರರೂ ಯಾರೆಂಬುದನ್ನು ಕೇಳಿ ತಿಳಿದುಕೋ; ನಿನ್ನ ಕಾಲು ನಮ್ಮೆದುರಿನಲ್ಲಿ ನಿಲ್ಲಲಾರದೆಂದು ಅವರು ನಿನಗೆ ತಿಳಿಸುವರು. ನಿನ್ನ ಪೂರ್ವಿಕರು ಅವರ ನಾಡಿನಲ್ಲಿಯೇ ಎರಡುಸಾರಿ ಪಲಾಯನ ಮಾಡಿದ್ದಾರಲ್ಲವೆ? 73ಕಲ್ಲು, ಬಂಡೆ ಹಾಗು ಓಡಿಹೋಗುವುದಕ್ಕೆ ಸ್ಥಳ ಇಲ್ಲದ ಬಯಲಿನಲ್ಲಿ ನಮ್ಮ ಅಶ್ವಬಲದ ಮುಂದೆ ಹಾಗು ಇಂಥ ಸೈನ್ಯದೆದುರಿಗೆ ನೀನು ನಿಲ್ಲಲಾರೆ," ಎಂದು ಹೇಳಿಕಳುಹಿಸಿದನು.

74 ಯೋನಾತನನು ಅಪೊಲ್ಲೋನಿಯನ ಈ ಮಾತುಗಳನ್ನು ಕೇಳಿ, ಕೆರಳಿ, ಹತ್ತು ಸಾವಿರ ಜನರನ್ನು ಆಯ್ದುಕೊಂಡು ಜೆರುಸಲೇಮಿನಿಂದ ಹೊರಟನು. ಅವನ ಅಗ್ರಜನಾದ ಸಿಮೋನನು ನೆರವಿಗಾಗಿ ಅವನನ್ನು ಕೂಡಿಕೊಂಡನು. ಯೋನಾತನನು ಜೊಪ್ಪದ ಎದುರಿಗೆ ಬೀಡು ಬಿಟ್ಟುಕೊಂಡನು. 75ಅಪೊಲ್ಲೋನಿಯನ ರಕ್ಷಣಾ ದಳವು ಜೊಪ್ಪದಲ್ಲಿದ್ದುದರಿಂದ ಆ ಪಟ್ಟಣದವರು ಬಾಗಿಲು ಹಾಕಿಕೊಳ್ಳಲು ಅವರು ಅದಕ್ಕೆ ಲಗ್ಗೆ ಹಚ್ಚಿದರು. 76ಆಗ ಅದರ ನಿವಾಸಿಗಳು ಅಂಜಿ ಬಾಗಿಲು ತೆರೆದರು; ಹೀಗೆ ಯೋನಾತನನು ಜೊಪ್ಪವನ್ನು ಕೈವಶಮಾಡಿಕೊಂಡನು. 77ಅಪೊಲ್ಲೋನಿಯನು ಇದನ್ನು ಕೇಳಿ, ಮೂರು ಸಾವಿರ ಕುದುರೆಗಳುಳ್ಳ ದೊಡ್ಡ ದಂಡನ್ನು ಕೂಡಿಸಿಕೊಂಡು ಪ್ರವಾಸಿಕನಂತೆ ಅಜೋತಿಗೆ ಹೋದನು. ಅಲ್ಲಿಂದ ಮುಂದೆ ಅವನು ಬಯಲು ಸೀಮೆಗೆ ಇಳಿದನು. ಏಕೆಂದರೆ ಅವನ ಬಳಿಯಿದ್ದ ದೊಡ್ಡ ಅಶ್ವಬಲದಲ್ಲಿ ಅವನಿಗೆ ತುಂಬಾ ಭರವಸೆ ಇತ್ತು. 78ಯೋನಾತನನು ಅವನ ಬೆನ್ನು ಹತ್ತಿ ಅಜೋತಿನ ಕಡೆಗೆ ಹೋದನು. ಅಲ್ಲಿ ಉಭಯ ಸೈನ್ಯಗಳ ನಡುವೆ ಯುದ್ಧವಾಯಿತು. 79ಅಪೊಲ್ಲೋನಿಯನು ಅವರ ಹಿಂದೆ ಒಂದು ಸಾವಿರ ರಾಹುತರನ್ನು ಅಡಗಿಸಿಟ್ಟಿದ್ದನು. 80ತನ್ನ ಹಿಂದೆ ಹೊಂಚು ಇದೆ ಎಂಬುದನ್ನು ಯೋನಾತನನು ಅರಿತಿದ್ದನು. ಅವರು ಅವನ ಸೈನ್ಯವನ್ನು ಸುತ್ತುವರಿದು ಬೆಳಗಿನಿಂದ ಬೈಗಿನವರೆಗೆ ತಮ್ಮ ಭರ್ಜಿಗಳನ್ನು ಇಸ್ರಯೇಲ್ ಜನರ ಮೇಲೆ ಎಸೆದರು. 81ಜನರು ಯೋನಾತನನ ಆಜ್ಞೆಯಂತೆ ನಿಂತಲ್ಲಿಯೇ ನಿಂತುಕೊಂಡಿದ್ದರು. 82ಅವರ ಕುದುರೆಗಳು ದಣಿದವು; ಹೀಗಿರಲು ಸಿಮೋನನು ತನ್ನ ದಳವನ್ನು ಮುಂದೆ ನೂಕಿ ಕಾಲ್ದಳದ ಮೇಲೆ ಬಿದ್ದನು. (ಏಕೆಂದರೆ ಕುದುರೆಗಳು ಆಗಲೇ ದಣಿದುಹೋಗಿದ್ದವು) – ಶತ್ರುಗಳು ಸಿಮೋನನಿಂದ ಪರಾಜಯಹೊಂದಿ ಪಲಾಯನ ಮಾಡಿದರು. 83ಕುದುರೆ ಸವಾರರು ಬಯಲಿನಲ್ಲಿ ಚದರಿ ಹೋದರು. ಅವರು ಅಜೋತಿಗೆ ಓಡಿಹೋಗಿ ತಮ್ಮ ಪ್ರಾಣರಕ್ಷಣೆಗಾಗಿ ಬೇತ್‍ದಾಗೋನ್ ಎಂಬ ಮೂರ್ತಿಯ ಗುಡಿಯನ್ನು ಸೇರಿದರು. 84ಯೋನಾತನನು ಅಜೋತನ್ನೂ ಅದರ ನೆರೆಹೊರೆಯ ಊರುಗಳನ್ನೂ ಸುಟ್ಟು ಸೂರೆಮಾಡಿದನು. ದಾಗೋನನ ಗುಡಿಯನ್ನೂ ಅದರಲ್ಲಿ ಸೇರಿಕೊಂಡಿದ್ದವರನ್ನೂ ಸುಟ್ಟುಹಾಕಿದನು. 85ಅಂದು ಕತ್ತಿಗೆ ತುತ್ತಾದವರು ಹಾಗು ಬೆಂಕಿಗೆ ಆಹುತಿ ಆದವರು ಸುಮಾರು ಎಂಟು ಸಾವಿರ ಜನ. 86ಯೋನಾತನನು ಅಲ್ಲಿಂದ ಹೊರಟು, ಅಷ್ಕೆಲೋನಿನ ಎದುರಾಗಿ ಪಾಳೆಯ ಮಾಡಿದನು. ಆ ಪಟ್ಟಣಿಗರು ಬಹು ಆಡಂಬರದಿಂದ ಅವನನ್ನು ಎದುರುಗೊಳ್ಳಲು ಬಂದರು. 87ಯೋನಾತನನು ಅಪಾರ ಸುಲಿಗೆಯೊಂದಿಗೆ ತನ್ನವರ ಸಂಗಡ ಜೆರುಸಲೇಮಿಗೆ ಹಿಂದಿರುಗಿದನು. 88ಅರಸ ಅಲೆಕ್ಸಾಂಡರನು ಈ ಸುದ್ದಿಯನ್ನು ಕೇಳಿದಾಗ ಯೋನಾತನನಿಗೆ ಇನ್ನು ಹೆಚ್ಚು ಮರ್ಯಾದೆ ಮಾಡಿದನು. 89ಅರಸರ ಬಳಗದವರಿಗೆ ಮಾತ್ರ ಕೊಡತಕ್ಕ ಬಂಗಾರದ ಒಡ್ಯಾಣವನ್ನು ಅವನಿಗೆ ಕಳುಹಿಸಿದನು. ಎಕ್ರೋನನ್ನೂ ಅದರ ನೆರೆಹೊರೆಯ ಸೀಮೆಯನ್ನೂ ಅವನಿಗೆ ಸೊತ್ತಾಗಿಕೊಟ್ಟನು.

### ಅಲೆಕ್ಸಾಂಡರ್ ಎಪಿಫನೆಸನ ಮರಣ

**11** ಈಜಿಪ್ಟಿನ ಅರಸನು ಸಮುದ್ರತೀರದ ಮರಳಿನೋಪಾದಿಯಲ್ಲಿದ್ದ ಮಹಾಸೈನ್ಯವನ್ನೂ ಅನೇಕ ಹಡಗುಗಳನ್ನೂ ಶೇಖರಿಸಿಕೊಂಡು, ಮೋಸದಿಂದ ಅಲೆಕ್ಸಾಂಡರನ ರಾಜ್ಯವನ್ನು ಆಕ್ರಮಿಸಿ, ಅದನ್ನು ತನ್ನ

ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಹವಣಿಸಿದನು. 2ಅವನು ಹೊರಟು ಶಾಂತಿಯುತ ಮಾತುಗಳಿಂದ
ಸಿರಿಯಾಕ್ಕೆ ಬಂದನು. ಅಲ್ಲಿಯ ನಿವಾಸಿಗಳು ತಮ್ಮ ಪಟ್ಟಣಗಳ ಬಾಗಿಲುಗಳನ್ನು ತೆರೆದು ಅವನನ್ನು
ಎದುರುಗೊಂಡರು; ಏಕೆಂದರೆ ಅವನು ತನ್ನ ಮಾವನಾದ್ದರಿಂದ ಅವನನ್ನು ಎದುರುಗೊಳ್ಳಬೇಕೆಂದು
ಅಲೆಕ್ಸಾಂಡರನು ಅಪ್ಪಣೆ ಮಾಡಿದ್ದನು. 3ಪ್ತೊಲೆಮೇಯನು ತಾನು ಸೇರಿದ ಪ್ರತಿಯೊಂದು ನಗರದಲ್ಲಿಯೂ
ತನ್ನ ರಕ್ಷಣ ಸೈನ್ಯವನ್ನು ಇರಿಸುತ್ತಾ ಬಂದನು. 4ಆದರೆ ಅವನು ಅಜೋತಿನ ಸಮೀಪಕ್ಕೆ ಬಂದಾಗ
ಬೆಂಕಿಯಿಂದ ಸುಡಲಾಗಿದ್ದ ದಾಗೋನನ ಗುಡಿಯನ್ನು, ಕೆಡವಿ ಹಾಳುಗೈದ ಅಜೋತ ಮತ್ತು ಅದರ
ನೆರೆಹೊರೆಯ ಗ್ರಾಮಗಳನ್ನು, ಹೊರಗೆ ಬಿಸಾಡಲಾಗಿದ್ದ ಗ್ರಾಮಗಳನ್ನು, ಹೊರಗೆ ಬಿಸಾಡಲಾಗಿದ್ದ ಶವಗಳನ್ನು
ಹಾಗೂ ಯುದ್ಧದಲ್ಲಿ ಅಗ್ನಿಗೆ ಆಹುತಿಯಾದ ದೇಹಗಳನ್ನು ಅವನಿಗೆ ತೋರಿಸಲಾಯಿತು. ಇವುಗಳನ್ನು
ಅವನು ಹೋಗುವ ಹಾದಿಯಲ್ಲೆ ಕೂಡಿಹಾಕಿದ್ದರು. 5ಯೋನಾತನನ ಮೇಲೆ ದೂರು ತರುವ ಉದ್ದೇಶದಿಂದ
ಅವನು ಮಾಡಿದ ಈ ಘಟನೆಗಳನ್ನೆಲ್ಲಾ ಅವನಿಗೆ ತಿಳಿಸಿದರು; 6ಅರಸನು ಸುಮ್ಮನಿದ್ದನು. ಯೋನಾತನನು
ಆಡಂಬರದಿಂದ ಅರಸನನ್ನು ಜೊಪ್ಪದಲ್ಲಿ ಎದುರುಗೊಂಡನು. ಅವರು ಒಬ್ಬರನ್ನೊಬ್ಬರು ವಂದಿಸಿದರು;
ಅಂದು ಅಲ್ಲಿಯೇ ತಂಗಿದರು. 7ಯೋನಾತನನು ಯೆಲ್ಯೂತರಸ್ ನದಿಯವರೆಗೂ ಅರಸನೊಂದಿಗೆ ಹೋಗಿ
ಜೆರುಸಲೇಮಿಗೆ ಹಿಂದಿರುಗಿದನು. 8ಆದರೆ ಅರಸ ಪ್ತೊಲೆಮೇಯ ಸಮುದ್ರತೀರದಲ್ಲಿರುವ ಸೆಲ್ಯೂಕ್ಯದವರೆಗೆ
ಕರಾವಳಿಯ ಪಟ್ಟಣಗಳನ್ನೆಲ್ಲಾ ಕೈವಶಮಾಡಿಕೊಂಡನು. ಅಲೆಕ್ಸಾಂಡರನನ್ನು ಕುರಿತು ಕುತಂತ್ರಗಳನ್ನು
ಯೋಚಿಸ ತೊಡಗಿದನು. 9ಅರಸ ದೆಮೆತ್ರಿಯನ ಬಳಿಗೆ ರಾಯಭಾರಿಗಳನ್ನು ಕಳುಹಿಸಿ, “ಬಾ, ನಾವು
ಪರಸ್ಪರ ಸಂಧಿಮಾಡಿಕೊಳ್ಳೋಣ; ಅಲೆಕ್ಸಾಂಡರನಿಗೆ ಕೊಡಲಾದ ನನ್ನ ಮಗಳನ್ನು ನಿನಗೆ ಕೊಡುತ್ತೇನೆ;
ನೀನು ನಿನ್ನ ತಂದೆಯ ರಾಜ್ಯವನ್ನು ಆಳುವೆ. 10ಅವನು ನನ್ನನ್ನು ಕೊಲ್ಲಲು ಹವಣಿಸಿದನು. ಇಂಥವನಿಗೆ
ನನ್ನ ಮಗಳನ್ನು ಕೊಟ್ಟುದಕ್ಕೆ ನಾನೀಗ ವ್ಯಸನಪಡುತ್ತಿದ್ದೇನೆ,” ಎಂದು ಹೇಳಿದನು. 11ಅವನು ರಾಜ್ಯದ
ಮೇಲಿನ ಲೋಭದಿಂದ ಅಲೆಕ್ಸಾಂಡರನ ಮೇಲೆ ದೋಷಾರೋಪಣೆ ಮಾಡಿದನು. 12ತನ್ನ ಮಗಳನ್ನು
ಅವನಿಂದ ಕಿತ್ತುಕೊಂಡು ದೆಮೆತ್ರಿಯನಿಗೆ ಕೊಟ್ಟನು. ಇದರಿಂದ ಅಲೆಕ್ಸಾಂಡರನ ಮನಸ್ಸು ಕೆಟ್ಟಿತು. ಅವರ
ವೈರತ್ವವು ಬಹಿರಂಗವಾಯಿತು. 13ಪ್ತೊಲೆಮೇಯನು ಅಂತಿಯೋಕ್ಯದೊಳಗೆ ಹೊಕ್ಕು ಏಷ್ಯದ ಕಿರೀಟವನ್ನೂ
ಧರಿಸಿಕೊಂಡನು; ಹೀಗೆ ಅವನು ಎರಡು ಕಿರೀಟಗಳನ್ನು ಧರಿಸಿ ಕೊಂಡವನಾದನು. 14ಒಂದು ಈಜಿಪ್ಟಿನದು,
ಇನ್ನೊಂದು ಏಷ್ಯದ್ದು. ಆ ಸಮಯಕ್ಕೆ ಸಿಲಿಸಿಯಾದವರು ದಂಗೆಯೆಬ್ಬಿಸಿದ್ದರಿಂದ ಅರಸ ಅಲೆಕ್ಸಾಂಡರನು
ಅಲ್ಲೆ ಇದ್ದನು. 15ಅಲೆಕ್ಸಾಂಡರನು ಈ ಸುದ್ದಿಯನ್ನು ಕೇಳಿ, ಪ್ತೊಲೆಮೇಯನ ಮೇಲೆ ಯುದ್ಧಕ್ಕೆ ಹೋದನು.
16ಆದರೆ ಪ್ತೊಲೆಮೇಯ ತನ್ನ ಮಹಾಸೈನ್ಯವನ್ನು ನಡೆಸಿಕೊಂಡು ಹೋಗಿ, ಮಹಾಬಲದಿಂದ ಅವನನ್ನು
ಪರಾಜಯಗೊಳಿಸಿದನು. 17ಜಬ್ದಿಯೇಲನೆಂಬ ಅರಬ್ಬಿಯನು ಅಲೆಕ್ಸಾಂಡರನ ರುಂಡವನ್ನು ಕತ್ತರಿಸಿ ಅದನ್ನು
ಪ್ತೊಲೆಮೇಯನ ಬಳಿಗೆ ಕಳುಹಿಸಿದನು. 18ಇದಾದ ಮೂರು ದಿನಗಳ ನಂತರ ಪ್ತೊಲೆಮೇಯನು
ತೀರಿಕೊಂಡನು. ಅವನ ಕೋಟೆಗಳಲ್ಲಿದ್ದವರು ಅಲ್ಲಿಯ ನಿವಾಸಿಗಳಿಂದ ಸಂಹರಿಸಲ್ಪಟ್ಟರು. [19]167ನೇ ವರ್ಷ
ದೆಮೆತ್ರಿಯನು ರಾಜನಾದನು.

### ಇಮ್ಮಡಿ ದೆಮೆತ್ರಿಯನ ಮತ್ತು ಯೋನಾತನರ ಮೈತ್ರಿ

20 ಆ ದಿನಗಳಲ್ಲಿ ಯೋನಾತನನು ಜೆರುಸಲೇಮಿನಲ್ಲಿದ್ದ ಕೋಟೆಯನ್ನು
ಕೈವಶಮಾಡಿಕೊಳ್ಳಬೇಕೆಂದು ಜುದೇಯದವರನ್ನು ಕೂಡಿಸಿದನು; ಅದರ ಎದುರಿಗೆ ಅನೇಕ
ಯುದ್ಧಯಂತ್ರಗಳನ್ನು ನಿಲ್ಲಿಸಿದನು. 21ಇತ್ತ ಸ್ವಂತ ಜನಾಂಗವನ್ನೇ ಹಗೆಮಾಡುತ್ತಿದ್ದ ಕೆಲವು ಮಂದಿ
ಅಧರ್ಮಿಗಳು ಅರಸನ ಬಳಿಗೆ ಹೋಗಿ, “ಯೋನಾತನನು ಕೋಟೆಗೆ ಮುತ್ತಿಗೆ ಹಾಕುತ್ತಿದ್ದಾನೆ,” ಎಂದು
ವರದಿಮಾಡಿದರು. 22ಇದನ್ನು ಕೇಳಿ ಅವನು ಕೋಪಗೊಂಡು, ಪ್ತೊಲೆಮಾಯಕ್ಕೆ ಹೊರಟುಬಂದನು.
ಕೋಟೆಯನ್ನು ಮುತ್ತಬಾರದೆಂದೂ ಆದಷ್ಟು ಬೇಗ ಪ್ತೊಲೆಮಾಯಕ್ಕೆ ಬಂದು ತನ್ನನ್ನು ಕಂಡು
ಮಾತಾಡಬೇಕೆಂದೂ ಯೋನಾತನನಿಗೆ ಕಾಗದ ಬರೆದನು. 23ಯೋನಾತನನು ಅದನ್ನು ಕೇಳಿ,
ಮುತ್ತಿಗೆಯನ್ನು ಹಾಗೆಯೇ ಮುಂದುವರಿಸಬೇಕೆಂದು ಅಪ್ಪಣೆಯನ್ನಿತ್ತನು. ಇಸ್ರಯೇಲರ ಹಿರಿಯರಲ್ಲಿಯೂ
ಯಾಜಕರಲ್ಲಿಯೂ ಕೆಲವರನ್ನು ಆಯ್ದುಕೊಂಡು, ತನ್ನನ್ನೇ, ಗಂಡಾಂತರಕ್ಕೆ ಗುರಿಮಾಡಿಕೊಂಡು, 24ಬೆಳ್ಳಿ,

ಬಂಗಾರ, ಉಡುಗೊರೆ ಮೊದಲಾದ ಅನೇಕ ಕಾಣಿಕೆಗಳನ್ನು ತೆಗೆದುಕೊಂಡು ಅರಸನನ್ನು ಕಾಣಲು ಪ್ತೊಲೆಮಾಯಕ್ಕೆ ಹೋದನು. ಅಲ್ಲಿ ಅವನ ಮೆಚ್ಚುಗೆಗೆ ಪಾತ್ರನಾದನು.
25ಅವನ ಜನಾಂಗದ ಧರ್ಮಗೆಟ್ಟ ಕೆಲವು ಜನರು ಅವನ ಮೇಲೆ ದೂರುತಂದರು.
26ಅರಸನು, ತನ್ನ ಹಿಂದಿನವರು ಅವನಿಗೆ ಹಿಂದೆ ಮಾಡಿದಂತೆ ಮಾಡಿ, ತನ್ನ ಸ್ನೇಹಿತರೆದುರಿನಲ್ಲೆ ಅವನನ್ನು ಘನತೆಗೇರಿಸಿದನು.
27ಅವನಿಗೆ ಪ್ರಧಾನಯಾಜಕತ್ವವನ್ನೂ ಈ ಮೊದಲು ಇದ್ದ ಎಲ್ಲ ಪದವಿಗಳನ್ನೂ ದೃಢೀಕರಿಸಿದನು. ತನ್ನ ಮುಖ್ಯ ಸ್ನೇಹಿತರಲ್ಲಿ ಅವನೂ ಗಣ್ಯನಾಗುವಂತೆ ಮಾಡಿದನು.
28ಯೋನಾತನನು, ಜುದೇಯವನ್ನೂ, ಸಮಾರಿಯದ ಮೂರು ಪ್ರಾಂತ್ಯಗಳನ್ನೂ ಕಂದಾಯ ಮುಕ್ತಮಾಡಬೇಕೆಂದು ಕೇಳಿಕೊಂಡಿದ್ದನಲ್ಲದೆ, ತಾನು ಒಟ್ಟಿಗೆ ಹತ್ತು ಸಾವಿರ ಕಿಲೋಗ್ರಾಂ ಬೆಳ್ಳಿಯನ್ನು ಕೊಡುವುದಾಗಿ ಮಾತುಕೊಟ್ಟನು.
29ಅರಸನು ಅದಕ್ಕೆ ಸಮ್ಮತಿಸಿ, ಈ ಎಲ್ಲಾ ಸಂಗತಿಗಳನ್ನು ಕುರಿತು ಯೋನಾತನನಿಗೆ ಈ ರೀತಿ ಪತ್ರ ಬರೆದನು:

30 "ಸಹೋದರನಾದ ಯೋನಾತನನಿಗೂ ಯೆಹೂದ್ಯ ಜನಾಂಗಕ್ಕೂ ಅರಸನಾದ ದೆಮೆತ್ರಿಯನು ಮಾಡುವ ವಂದನೆಗಳು!
31ನಿಮ್ಮ ವಿಷಯದಲ್ಲಿ ನಮ್ಮ ಬಂಧುವಾದ ಲಾಸ್ತೆನೀಸನಿಗೆ ನಾವು ಬರೆದ ಕಾಗದವನ್ನು ನೀವೂ ನೋಡಬೇಕೆಂದು ಅದರ ಪ್ರತಿಯನ್ನು ಕಳುಹಿಸಿದ್ದೇವೆ.

32 "ತಂದೆಯಂತಿರುವ ಲಾಸ್ತೆನೀಸನಿಗೆ ಅರಸ ದೆಮೆತ್ರಿಯನು ಮಾಡುವ ವಂದನೆಗಳು!
33ನಮ್ಮ ಮಿತ್ರರೂ ನಮಗೆ ನ್ಯಾಯ ಆದುದನ್ನೇ ಮಾಡುವವರೂ ಆದ ಯೆಹೂದ್ಯ ಜನಾಂಗಕ್ಕೆ ಅವರು ನಮ್ಮ ಮೇಲಿರಿಸಿದ ಅಭಿಮಾನದ ನಿಮಿತ್ತ ನಾವು ಅವರಿಗೆ ಹಿತಗೈಯಬೇಕೆಂದು ನಿರ್ಣಯಿಸಿದ್ದೇವೆ.
34ಆದುದರಿಂದ ನಾವು ಅವರಿಗೆ ಜುದೇಯ ಪ್ರಾಂತ್ಯವನ್ನು ಮತ್ತು ಸಮಾರಿಯದಿಂದ ತೆಗೆದು ಜುದೇಯಕ್ಕೆ ಸೇರಿಸಿದ ಅಫೈರೆಮ, ಲುದ್ದ, ರಾಮಾಥಯಿಮ್ ಎಂಬೀ ಮೂರು ಜಿಲ್ಲೆಗಳನ್ನು ಬಿಟ್ಟುಕೊಡುವಂತೆ ವ್ಯವಸ್ಥೆ ಮಾಡಿದ್ದೇವೆ. ಅವರಿಗೆ ಸೇರಿದ್ದೆಲ್ಲವನ್ನೂ ಅಂದರೆ, ಈ ಮೊದಲು ಅರಸನು ಅವರಿಂದ ವರ್ಷ ವರ್ಷಕ್ಕೆ ತೆಗೆದುಕೊಳ್ಳುತ್ತಿದ್ದ ಭೂಮಿಯ ಫಲಗಳ ಮತ್ತು ಹಣ್ಣು ಮರಗಳ ಫಲಗಳ ಭಾಗವನ್ನು ನಾವು ಇನ್ನು ಮೇಲೆ ತೆಗೆದುಕೊಳ್ಳದೆ ಅವುಗಳನ್ನು ಜೆರುಸಲೇಮಿನಲ್ಲಿ ಬಲಿದಾನ ಮಾಡುವವರೆಲ್ಲರಿಗೆ ಬಿಟ್ಟುಕೊಡುತ್ತೇವೆ.
35ನಮಗೆ ಸಂಬಂಧಿಸಿದ ಉಳಿದ ಸಂಗತಿಗಳನ್ನು ಕುರಿತು ಅಂದರೆ, ದಶಮಾಂಶ, ನಮಗೆ ಸಂಬಂಧಿಸಿದ ತೆರಿಗೆ, ಉಪ್ಪಿನ ಕಂದಾಯ, ಅರಸನಿಗೆ ಸಲ್ಲತಕ್ಕ ಕಪ್ಪ, ಇವೆಲ್ಲವನ್ನು ಇಂದಿನಿಂದ ಅವರಿಗೇ ಬಿಟ್ಟುಕೊಟ್ಟಿದ್ದೇವೆ.
36ಈ ಮಾತುಗಳಲ್ಲಿ ಒಂದನ್ನಾದರೂ ಇಂದಿನಿಂದ ಎಂದೆಂದಿಗೂ ತೆಗೆದು ಹಾಕಲಾಗುವುದಿಲ್ಲ.
37ಆದುದರಿಂದ ಈ ವಿಷಯಗಳ ಪ್ರತಿಯೊಂದನ್ನು ಮಾಡುವುದಕ್ಕೆ ಎಚ್ಚರಿಕೆವಹಿಸಿರಿ, ಮತ್ತು ಆ ಪ್ರತಿಯನ್ನು ಯೋನಾತನನಿಗೂ ತೋರಿಸಿರಿ. ಅದನ್ನು ಪರಿಶುದ್ಧ ಪರ್ವತದ ಮೇಲೆ ಯೋಗ್ಯವಾದ ಮತ್ತು ಎಲ್ಲರಿಗೂ ಕಾಣುವ ಸ್ಥಳದಲ್ಲಿ ಹಚ್ಚುವಂತಾಗಲಿ!"

38 ದೇಶದಲ್ಲೆಲ್ಲಾ ಸಮಾಧಾನವಿರುವುದನ್ನೂ ವಿರೋಧವಿಲ್ಲದಿರುವುದನ್ನೂ ದೆಮೆತ್ರಿಯನು ಕಂಡು, ಅನ್ಯಜನಗಳ ದ್ವೀಪಗಳಿಂದ ಕೂಡಿಸಿದ್ದ ಪರಕೀಯ ಸೈನ್ಯದ ಹೊರತಾಗಿ, ಉಳಿದೆಲ್ಲ ಸೈನಿಕರನ್ನೂ ಅವರವರ ಮನೆಗೆ ಕಳುಹಿಸಿಬಿಟ್ಟನು. ಅವನ ಪೂರ್ವಿಕರ ಸೈನ್ಯದವರೆಲ್ಲರು ಅವನನ್ನು ಹಗೆಮಾಡತೊಡಗಿದರು.
39ಇದಕ್ಕೆ ಮುಂಚೆ ಅಲೆಕ್ಸಾಂಡರನ ಕಡೆಗಿದ್ದ ತ್ರಿಫೋನನೂ ಇವರಲ್ಲಿ ಒಬ್ಬನಾಗಿದ್ದನು. ಇವನ ಸೈನಿಕರೆಲ್ಲರೂ ದೆಮೆತ್ರಿಯನ ಮೇಲೆ ಗೊಣಗುಟ್ಟುತ್ತಿದ್ದುದನ್ನು ಕಂಡು ಅಲೆಕ್ಸಾಂಡರನ ಚಿಕ್ಕ ಬಾಲಕನ ಸಂರಕ್ಷಕನಾಗಿದ್ದ ಅರಬ್ಬಿಯನಾದ ಇಮಲ್ಕುವಿನ ಬಳಿಗೆ ಹೋಗಿ,
40ಅವನು ತನ್ನ ತಂದೆಯ ಸ್ಥಳದಲ್ಲಿ ರಾಜ್ಯವಾಳುವಂತೆ ಅವನನ್ನು ತನಗೆ ಒಪ್ಪಿಸಬೇಕೆಂದು ಬಲವಂತ ಮಾಡಿದನು. ಇದಲ್ಲದೆ, ದೆಮೆತ್ರಿಯನು ಮಾಡಿದುದೆಲ್ಲವನ್ನೂ ಅವನನ್ನು ಹಗೆಮಾಡುತ್ತಿದ್ದ ಅವನ ಸೈನಿಕರಲ್ಲಿದ್ದ ದ್ವೇಷವನ್ನೂ ಅವನಿಗೆ ತಿಳಿಸಿದನು, ಮತ್ತು ಅಲ್ಲಿಯೇ ಬಹುಕಾಲ ಉಳಿದುಕೊಂಡನು.

41 ಯೋನಾತನನು ದೆಮೆತ್ರಿಯನಿಗೆ, "ಜೆರುಸಲೇಮಿನ ಕೋಟೆಯಲ್ಲಿದ್ದವರನ್ನೂ ದುರ್ಗಗಳಲ್ಲಿದ್ದವರನ್ನೂ ಹೊರಗೆ ಹಾಕಬೇಕು," ಎಂದು ಹೇಳಿಕಳುಹಿಸಿದನು. ಏಕೆಂದರೆ ಅವರು ನಿತ್ಯವೂ ಇಸ್ರಯೇಲರ ಸಂಗಡ ಕಾದಾಡುತ್ತಿದ್ದರು.
42ದೆಮೆತ್ರಿಯನು ಯೋನಾತನನಿಗೆ, "ನಾನು ಅದನ್ನು ನಿನಗಾಗಿ ಮಾಡುತ್ತೇನೆ; ಮಾತ್ರವಲ್ಲ ಸದವಕಾಶ ದೊರೆತಾಗ ನಿನಗೂ ನಿನ್ನ ಜನಾಂಗಕ್ಕೂ ಬಹಳ ಸನ್ಮಾನ

ಮಾಡುವೆನು. 43ಆದರೆ ಸದ್ಯ ನನ್ನ ಪರವಾಗಿ ಯುದ್ಧ ಮಾಡುವುದಕ್ಕೆ ನಿನ್ನ ಜನರನ್ನು ಕಳುಹಿಸಿದರೆ ಬಹಳ ಉಪಕಾರ ಮಾಡಿದಂತಾಗುವುದು. ಏಕೆಂದರೆ ನನ್ನ ಸೈನಿಕರೆಲ್ಲರು ಬಂಡುಹೂಡಿದ್ದಾರೆ," ಎಂದು ಹೇಳಿಕಳುಹಿಸಿದನು. 44ಯೋನಾತನನು ಮೂರು ಸಾವಿರ ಜನ ವೀರರನ್ನು ಅಂತಿಯೋಕ್ಯಕ್ಕೆ ಕಳುಹಿಸಿದನು. ಅವರು ಅರಸನ ಬಳಿಗೆ ಬರಲು, ಅರಸನು ಸಂತೋಷಪಟ್ಟನು. 45ಆದರೆ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಜನ ಪಟ್ಟಣಿಗರು, ಪಟ್ಟಣದ ನಡುವೆ ಕೂಡಿಬಂದು, ಅರಸನನ್ನು ಕೊಂದುಹಾಕಬೇಕೆಂದು ಹವಣಿಸಿದ್ದರು. 46ಅರಸನು ಅರಮನೆಯ ಪ್ರಾಕಾರದೊಳಗೆ ಓಡಿಹೋದನು. ಊರಜನರು ಊರೊಳಗಿನ ಎಲ್ಲ ಹಾದಿಗಳನ್ನೂ ಮುಚ್ಚಿ ಕಾಯತೊಡಗಿದರು. 47ಅರಸನು ತನಗೆ ನೆರವಾಗಬೇಕೆಂದು ಯೆಹೂದ್ಯರನ್ನು ಕರೆದನು. ಅವರೆಲ್ಲರೂ ಒಮ್ಮೆಲೇ ಅವನ ಬಳಿಗೆ ಕೂಡಿ ಬಂದರು. ತರುವಾಯ ಊರೊಳಗೆಲ್ಲಾ ಚದರಿಕೊಂಡು ಸುಮಾರು ಒಂದು ಲಕ್ಷ ಜನರನ್ನು ಕೊಂದುಹಾಕಿದರು. 48ಆಮೇಲೆ ಪಟ್ಟಣಕ್ಕೆ ಬೆಂಕಿ ಹಚ್ಚಿ, ಅದನ್ನು ಸುಟ್ಟು, ಸೂರೆಗೈದು ಅರಸನನ್ನು ಸಂರಕ್ಷಿಸಿದರು. 49ಯೆಹೂದ್ಯರು ತಮ್ಮಿಷ್ಟದಂತೆ ಪಟ್ಟಣವನ್ನು ಕೈವಶಮಾಡಿಕೊಂಡದ್ದನ್ನು ಊರಿನವರು ಕಂಡು, ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡು, ಅರಸನಿಗೆ ಕೂಗಿ ಮೊರೆಯಿಟ್ಟು, "ನಮಗೆ ನಿಮ್ಮ ಬಲಗೈ ಕೊಡಿ. 50ಯೆಹೂದ್ಯರು ನಮ್ಮ ವಿರೋಧವಾಗಿಯೂ ನಮ್ಮ ಪಟ್ಟಣದ ಮೇಲೆಯೂ ಯುದ್ಧಮಾಡುವುದನ್ನು ನಿಲ್ಲಿಸಿಬಿಡಲಿ," ಎಂದು ಬೇಡಿಕೊಂಡರು. 51ಅವರು ತಮ್ಮ ಆಯುಧಗಳನ್ನು ಬಿಸಾಡಿ ಬಿಟ್ಟು ಸಂಧಾನಮಾಡಿಕೊಂಡರು. ಯೆಹೂದ್ಯರು ಅರಸನ ಹಾಗು ರಾಜ್ಯದಲ್ಲಿದ್ದವರೆಲ್ಲರ ಮುಂದೆ ಗೌರವಹೊಂದಿ ಬಹಳ ಸುಲಿಗೆಯನ್ನು ಎತ್ತಿಕೊಂಡು ಜೆರುಸಲೇಮಿಗೆ ಹಿಂದಿರುಗಿದರು. 52ಇತ್ತ ಅರಸ ದೆಮೆತ್ರಿಯನು ತನ್ನ ರಾಜ್ಯದ ಸಿಂಹಾಸನವನ್ನೇರಿದನು. ಅಂದಿನಿಂದ ದೇಶದಲ್ಲೆಲ್ಲಾ ಸಮಾಧಾನವಿತ್ತು. 53ಆದರೆ ಇವನು ಯೋನಾತನನಿಗೆ ಹೇಳಿದ್ದುದೆಲ್ಲಾ ಸುಳ್ಳೇ ಆಯಿತು. ಇವನು ಯೋನಾತನನಿಗೆ ವಿಮುಖನಾಗಿ ಅವನು ತನಗೆ ಮಾಡಿದ್ದ ಎಲ್ಲಾ ಉಪಕಾರಗಳಿಗೆ ಯಾವ ಪ್ರತ್ಯುಪಕಾರವನ್ನೂ ಮಾಡದೆ ಅವನನ್ನು ಬಹಳವಾಗಿ ಬಾಧಿಸಿದನು.

### 6ನೇ ಅಂತಿಯೋಕನಿಗೆ ಯೋನಾತನನ ಬೆಂಬಲ

54 ಇದಾದ ಮೇಲೆ ತ್ರಿಫೋನನು ಬಾಲಕನಾದ ಅಂತಿಯೋಕನನ್ನು ತನ್ನ ಸಂಗಡ ಕರೆದುಕೊಂಡು ಹಿಂದಿರುಗಿದನು; ಕಿರೀಟಧಾರಣ ಮಾಡಿಕೊಂಡು ಅಳತೊಡಗಿದನು. 55ದೆಮೆತ್ರಿಯನು ವಜಾಮಾಡಿದ ಸೈನಿಕರೆಲ್ಲರು ಇವನನ್ನು ಕೂಡಿಕೊಂಡು ಅವನೊಂದಿಗೆ ಯುದ್ಧ ಹೂಡಿದರು. ಅವನು ಸೋತು ಓಡಿಹೋದನು. 56ತ್ರಿಫೋನನು ಆನೆಗಳನ್ನು ಹಿಡಿದುಕೊಂಡು ಅಂತಿಯೋಕ್ಯವನ್ನು ಕೈವಶಮಾಡಿಕೊಂಡನು. 57ಬಾಲಕ ಅಂತಿಯೋಕನು ಯೋನಾತನನಿಗೆ ಕಾಗದ ಬರೆದು, "ಪ್ರಧಾನ ಯಾಜಕತ್ವವನ್ನು ನಿನಗೆ ಸ್ಥಿರಪಡಿಸಿದ್ದೇನಲ್ಲದೆ ನಾಲ್ಕು ಪ್ರಾಂತ್ಯಗಳ ಮೇಲೆ ನಿನ್ನನ್ನು ನೇಮಕ ಮಾಡಿದ್ದೇನೆ; ಅರಸನ ಮಿತ್ರರಲ್ಲಿ ನೀನೂ ಒಬ್ಬನಾಗಿರು," ಎಂದು ಹೇಳಿದನು. 58ಇದಲ್ಲದೆ, ಬಂಗಾರದ ಭೋಜನ ಪಾತ್ರೆಗಳನ್ನು ಕಳುಹಿಸಿ, ಬಂಗಾರದ ಪಾತ್ರೆಯಲ್ಲಿ ಕುಡಿಯುವುದಕ್ಕೂ ರಾಜವಸ್ತ್ರಗಳನ್ನು ಧರಿಸಿಕೊಳ್ಳುವುದಕ್ಕೂ ಬಂಗಾರದ ಒಡ್ಯಾಣವನ್ನು ಧರಿಸಿಕೊಳ್ಳುವುದಕ್ಕೂ ಅವನಿಗೆ ಅಪ್ಪಣೆಕೊಟ್ಟನು. 59ಯೋನಾತನನ ಅಣ್ಣ ಸಿಮೋನನನ್ನು ಟೈರ್ ಘಟ್ಟದಿಂದ ಈಜಿಪ್ಟಿನ ಗಡಿಯವರೆಗಿನ ನಾಡಿಗೆಲ್ಲಾ ಸರದಾರನನ್ನಾಗಿ ನೇಮಿಸಿದನು. 60ಯೋನಾತನನು ಹೊರಟು ನದಿಯನ್ನು ದಾಟಿ, ಅದರಾಚೆಯ ಪಟ್ಟಣಗಳಲ್ಲೆಲ್ಲಾ ಸಂಚಾರಮಾಡಿದನು. ಆಗ ಸಿರಿಯಾ ಪ್ರಾಂತ್ಯದ ದಳಗಳೆಲ್ಲಾ ಸಹಾಯಾರ್ಥವಾಗಿ ಅವನ ಬಳಿಗೆ ಕೂಡಿಬಂದವು. ಅವನು ಅಷ್ಕೆಲೋನಿಗೆ ಬಂದಾಗ ಅಲ್ಲಿಯ ನಿವಾಸಿಗಳು ಆದರದಿಂದ ಅವನನ್ನು ಸ್ವಾಗತಿಸಿದರು. 61ಅಲ್ಲಿಂದ ಅವನು ಗಾಜಕ್ಕೆ ಬಂದನು. ಗಾಜದವರು ಅವನನ್ನು ಹೊರಗೆ ನಿಲ್ಲಿಸಲು, ಅವನು ಅದಕ್ಕೆ ಲಗ್ಗೆ ಹಚ್ಚಿದನು. ಅದರ ನೆರೆಹೊರೆಯ ಗ್ರಾಮಗಳನ್ನು ಸುಟ್ಟುಬಿಟ್ಟನು. 62ಆಗ ಗಾಜದವರು ಯೋನಾತನನನ್ನು ಬೇಡಿಕೊಂಡರು. ಅವನು ಅವರಿಗೆ ಸ್ನೇಹಹಸ್ತವನ್ನು ನೀಡಿ, ಅವರ ಮುಖ್ಯಸ್ಥರ ಮಕ್ಕಳನ್ನು ಒತ್ತೆಯಾಳುಗಳಾಗಿ ತೆಗೆದುಕೊಂಡು, ಜೆರುಸಲೇಮಿಗೆ ಕಳುಹಿಸಿದನು. ಅಲ್ಲಿಂದ ಅವನು ಆ ಸೀಮೆಯನ್ನು ಹಾದು ದಮಸ್ಕಸ್‍ವರೆಗೆ ಹೋದನು.

63 ತನ್ನನ್ನು ಅಧಿಕಾರದಿಂದ ತಳ್ಳಬೇಕೆಂಬ ಉದ್ದೇಶದಿಂದ ದೆಮೆತ್ರಿಯನ ಸರದಾರರು ದೊಡ್ಡ ದಂಡಿನೊಡನೆ ಗಲಿಲೇಯದ ಕಾದೇಶಿಗೆ ಬಂದಿದ್ದಾರೆಂಬ ವರ್ತಮಾನವನ್ನು ಯೋನಾತನನು ಕೇಳಿದನು.

64ತನ್ನ ಅಣ್ಣ ಸಿಮೋನನನ್ನು ಸ್ವದೇಶದಲ್ಲಿಯೇ ಬಿಟ್ಟು, ಅವರನ್ನು ಎದುರಿಸಲು ತಾನತ್ತ ತೆರಳಿದನು. 65ಸಿಮೋನನು ಬೇತ್ಸೂರೆಯ ಎದುರಾಗಿ ಪಾಳೆಯಮಾಡಿಕೊಂಡು, ಬಹುದಿನಗಳವರೆಗೆ ಅಲ್ಲಿ ಯುದ್ಧಮಾಡುತ್ತಾ ಅದನ್ನು ಮುತ್ತಿದನು. 66ಅವರು ಸಂಧಾನ ಬೇಡಿಕೊಂಡದ್ದರಿಂದ ಅವನು ಒಪ್ಪಿ, ಅವರನ್ನು ಅಲ್ಲಿಂದ ಹೊರಗೆ ಹಾಕಿ, ಆ ಪಟ್ಟಣವನ್ನು ಕೈವಶಮಾಡಿಕೊಂಡು, ಅದರಲ್ಲಿ ರಕ್ಷಣಾ ಸೈನ್ಯವನ್ನಿಟ್ಟನು. 67ಯೋನಾತನನೂ ಅವನ ದಂಡೂ ಗೆನ್ನೆಜರೇತ್ ಸರೋವರದ ಬಳಿ ಬಿಡಾರ ಮಾಡಿಕೊಂಡು ನಸುಕಿನಲ್ಲಿಯೇ ಹಜೋರ್ ಬಯಲಿಗೆ ಬಂದರು.

68 ಆಗ ಅನ್ಯದೇಶಿಯ ಸೈನ್ಯವು ಅವನನ್ನು ಸಂಧಿಸಿತು. ಇವರು ಅವನಿಗಾಗಿ ಹೊಂಚುಹಾಕಿಕೊಂಡು ಕುಳಿತವರನ್ನು ಗುಡ್ಡದಲ್ಲಿಯೇ ಬಿಟ್ಟು ತಾವೇ ನೇರವಾಗಿ ಅವನಿಗೆ ಎದುರಾದರು. 69ಹೊಂಚು ಹಾಕಿದವರು ತಮ್ಮ ಸ್ಥಳದಿಂದ ಹೊರಬಿದ್ದು ಯೋನಾತನನ ಮೇಲೆ ಬೀಳಲು, ಅವನ ಕಡೆಯವರೆಲ್ಲರೂ ಓಡಿಹೋದರು. 70ಸೈನ್ಯದ ಸರದಾರರಾಗಿದ್ದ ಅಬ್ಸಾಲೋಮನ ಮಗ ಮತ್ತಾತೀಯ, ಖಲ್ದಿಯ ಮಗ ಯೂದ ಇವರ ಹೊರತಾಗಿ ಯಾರೂ ಉಳಿಯಲಿಲ್ಲ. 71ಯೋನಾತನನು ಸಿಟ್ಟಿನಿಂದ ತನ್ನ ಬಟ್ಟೆಗಳನ್ನು ಹರಿದುಕೊಂಡು, ತಲೆಯ ಮೇಲೆ ಮಣ್ಣೆರಚಿಕೊಂಡು ಪ್ರಾರ್ಥಿಸಿದನು. 72ತರುವಾಯ ಮರಳಿ ಯುದ್ಧಮಾಡಿ ಅವರನ್ನು ಸದೆಬಡಿದನು; ಅವರು ಓಡಿ ಹೋದರು. 73ಅವನಿಂದ ಓಡಿಹೋಗುತ್ತಿದ್ದ ಅವನ ಜನರು ಹಿಂದಿರುಗಿ ಬಂದು ಅವನೊಂದಿಗೆ ಶತ್ರುಗಳ ಬಿಡಾರವಿದ್ದ ಕಾದೇಶಿನವರೆಗೂ ಅವರನ್ನು ಬೆನ್ನಟ್ಟಿ ಅಲ್ಲಿ ಬಿಡಾರ ಮಾಡಿದರು. 74ಅಂದು ಆ ಅನ್ಯದೇಶಿಯ ಸೈನ್ಯದಲ್ಲಿ ಸುಮಾರು ಮೂರು ಸಾವಿರ ಜನರು ಮಡಿದರು. ಯೋನಾತನನು ಜೆರುಸಲೇಮಿಗೆ ಹಿಂದಿರುಗಿದನು.

### ರೋಮ್ ಮತ್ತು ಸ್ಪಾರ್ಟದೊಂದಿಗೆ ಒಪ್ಪಂದ

**12** ಸಮಯವು ತನಗೆ ಅನುಕೂಲವಾಗಿದೆ ಎಂದು ತಿಳಿದು ಯೋನಾತನನು ರೋಮನ್ನರೊಂದಿಗಿದ್ದ ಬಾಂಧವ್ಯವನ್ನು ಹೊಸದಾಗಿಸಿ ಭದ್ರಪಡಿಸಿಕೊಳ್ಳಲು ಆಯ್ದ ಕೆಲವು ಜನರನ್ನು ರೋಮಿಗೆ ಕಳುಹಿಸಿದನು. 2ಇದಲ್ಲದೆ ಸ್ಪಾರ್ಟಪಟ್ಟಣದವರೆಗೂ ಪತ್ರಗಳನ್ನು ಕಳುಹಿಸಿದನು. 3ಅವರು ರೋಮಿಗೆ ಹೋಗಿ ಶಾಸನ ಸಭಾಗೃಹವನ್ನು ಪ್ರವೇಶಿಸಿ, "ಪ್ರಧಾನಯಾಜಕನಾದ ಯೋನಾತನನೂ ಯೆಹೂದ್ಯ ಜನಾಂಗದವರೂ ಹಿಂದೆ ತಮ್ಮೊಂದಿಗೆ ಮಾಡಿಕೊಂಡಿದ್ದ ಸ್ನೇಹಸಂಬಂಧವನ್ನು ದೃಢವಾಗಿಸಿಕೊಳ್ಳಲು ನಮ್ಮನ್ನು ಕಳುಹಿಸಿದ್ದಾರೆ," ಎಂದು ಹೇಳಿದರು. 4ಅವರು ಸಮಾಧಾನದಿಂದ ಜುದೇಯಕ್ಕೆ ಹಿಂದಿರುಗುವಂತೆ, ಆ ರೋಮನರು ಆಯಾ ಸ್ಥಳಗಳಲ್ಲಿದ್ದ ತಮ್ಮ ಜನರಿಗೆ ಪತ್ರಗಳನ್ನು ಕೊಟ್ಟು ಕಳುಹಿಸಿದರು. 5ಯೋನಾತನನು ಸ್ಪಾರ್ಟರಿಗೆ ಬರೆದ ಕಾಗದದ ಪ್ರತಿ ಇದು:

6 "ಪ್ರಧಾನಯಾಜಕ ಯೋನಾತನನು ಹಿರಿಯ ಸಭೆಯು, ಯಾಜಕರು ಹಾಗು ಇನ್ನುಳಿದ ಯೆಹೂದ್ಯ ಜನಸ್ತೋಮವೂ ತಮ್ಮ ಸಹೋದರರಾದ ಸ್ಪಾರ್ಟನರಿಗೆ ಮಾಡುವ ವಂದನೆಗಳು! 7ನಿಮ್ಮಲ್ಲಿ ರಾಜ್ಯವಾಳುತ್ತಿದ್ದ ಏರಿಯನು ನಮ್ಮ ಪ್ರಧಾನಯಾಜಕನಾಗಿದ್ದ ಒನೀಯನಿಗೆ, 'ನೀವು ನಮ್ಮ ಸಹೋದರರು,' ಎಂದು ಸೂಚಿಸುವ ಕಾಗದಗಳನ್ನು ಈ ಮೊದಲೇ ಬರೆದಿದ್ದನು. 8ಇದು ಈ ಕಾಗದದೊಂದಿಗೆ ಲಗತ್ತಿಸಿರುವ ಪ್ರತಿಯಿಂದ ವ್ಯಕ್ತವಾಗುವುದು. ಒನೀಯನು, ತನ್ನ ಬಳಿಗೆ ಕಳುಹಿಸಲಾಗಿದ್ದ ನಿಮ್ಮ ರಾಯಭಾರಿಯನ್ನು ಬಹು ಆದರದಿಂದ ಸತ್ಕರಿಸಿ, ಸ್ನೇಹಸಂಬಂಧವನ್ನು ಖಚಿತಪಡಿಸುವ ಪತ್ರಗಳನ್ನು ಸ್ವೀಕರಿಸಿದನು. 9ಮೇಲಾಗಿ, ನಮಗೆ ಉತ್ತೇಜನ ಕೊಡುವ ಪವಿತ್ರ ಗ್ರಂಥಗಳೇ ನಮ್ಮ ಕೈಯಲ್ಲಿರುವಾಗ ಇಂಥವುಗಳ ಅಗತ್ಯವೇನೂ ನಮಗಿಲ್ಲ. 10ಆದರೂ ನಾವು ನಿಮ್ಮಿಂದ ಸಂಪೂರ್ಣ ಅಗಲಿಹೋಗಬಾರದೆಂದೂ ನಿಮ್ಮೊಂದಿಗೆ ನಮಗಿರುವ ಬಾಂಧವ್ಯವನ್ನೂ ಸ್ನೇಹವನ್ನೂ ಪುನಶ್ಚೇತನಗೊಳಿಸಬೇಕೆಂದೂ ಇವುಗಳನ್ನೂ ಕಳುಹಿಸಲು ಯತ್ನಿಸಿದ್ದೇವೆ. ಏಕೆಂದರೆ ನೀವು ಪತ್ರ ಕಳುಹಿಸಿ ಬಹುಕಾಲ ಗತಿಸಿಹೋಗಿದೆ. 11ನಾವಂತೂ ಎಲ್ಲ ಕಾಲಗಳಲ್ಲು, ನಮ್ಮ ಹಬ್ಬಹರಿದಿನಗಳಲ್ಲು, ನಾವು ಅರ್ಪಿಸುವ ಬಲಿಗಳಲ್ಲು ಹಾಗೂ ನಮ್ಮ ಪ್ರಾರ್ಥನೆಗಳಲ್ಲು ನಿರಂತರವಾಗಿ ನಿಮ್ಮನ್ನು ನೆನಪುಮಾಡಿಕೊಳ್ಳುತ್ತೇವೆ. ಹೀಗೆ ಸಹೋದರರನ್ನು ಸ್ಮರಿಸಿಕೊಳ್ಳುವುದು ಸೂಕ್ತವೂ ಸಮಂಜಸವೂ ಆಗಿದೆ. 12ಮೇಲಾಗಿ, ನಿಮ್ಮ ಕೀರ್ತಿಯನ್ನು ಕೇಳಿ ಆನಂದಿಸುತ್ತೇವೆ. 13ನಮ್ಮನ್ನಾದರೋ ಅನೇಕ ಕಷ್ಟ

ಕಾದಾಟಗಳು ಆವರಿಸಿಕೊಂಡಿದ್ದವು. ನಮ್ಮ ಸುತ್ತಲಿರುವ ಅರಸರು ನಮ್ಮ ಮೇಲೆ ಯುದ್ಧ ಮಾಡಿದರು.
14ಈ ಸಮರಗಳಲ್ಲಿ ನಿಮಗೂ ನಿಮ್ಮ ಪಕ್ಷದವರಿಗೂ ಮಿತ್ರರಿಗೂ ತೊಂದರೆಕೊಡುವ ಮನಸ್ಸು ನಮಗಿರಲಿಲ್ಲ.
15ಏಕೆಂದರೆ ಮೇಲಿಂದ ಬರುವ ಸಹಾಯ ನಮ್ಮ ನೆರವಿಗಿದೆ; ನಮ್ಮ ಶತ್ರುಗಳಿಂದ ನಾವು ಬಿಡುಗಡೆ
ಹೊಂದಿದ್ದೇವೆ; ನಮ್ಮ ಶತ್ರುಗಳಾದರೋ ಕುಗ್ಗಿಹೋದರು. 16ಸದ್ಯಕ್ಕೆ ನಾವು ಅಂತಿಯೋಕನ ಮಗ
ನುಮೆನಿಯನನ್ನೂ ಯಾಸೋನನ ಮಗ ಅಂತಿಮತರನನ್ನೂ ಆರಿಸಿಕೊಂಡು ಅವರನ್ನು ರೋಮನರ ಬಳಿಗೆ
ಕಳುಹಿಸಿ, ಮೊದಲಿದ್ದ ಸ್ನೇಹಸಂಬಂಧವನ್ನು ಪುನಶ್ಚೇತನಗೊಳಿಸಲಿದ್ದೇವೆ. 17ಆದುದರಿಂದ ನಿಮ್ಮ ಕಡೆಗೂ
ಹೋಗಿ ನಿಮ್ಮನ್ನು ವಂದಿಸಿ, ನಿಮ್ಮ ಬಾಂಧವ್ಯವನ್ನು ಹೊಸದಾಗಿಸುವುದರ ಬಗ್ಗೆ ಬರೆದ ಈ ಪತ್ರಗಳನ್ನು
ನಿಮಗೆ ಕೊಡಬೇಕೆಂದು ಅಪ್ಪಣೆಮಾಡಿದ್ದೇವೆ. 18ಇವುಗಳಿಗೆ ನೀವು ಉತ್ತರಕೊಟ್ಟರೆ ಒಳಿತಾಗುವುದು."

19 ಒನೀಯನಿಗೆ ಅವರು ಬರೆದ ಕಾಗದದ ಪ್ರತಿಯಿದು:

20 "ಸ್ಪಾರ್ಟನರ ಅರಸ ಏರಿಯನು, ಪ್ರಧಾನ ಯಾಜಕನಾದ ಒನೀಯನಿಗೆ ಮಾಡುವ
ವಂದನೆಗಳು! 21ಸ್ಪಾರ್ಟನರ ಮತ್ತು ಯೆಹೂದ್ಯರ ಸಂಬಂಧವಾಗಿ ಅವರು ಸಹೋದರರೆಂದೂ
ಅಬ್ರಹಾಮನ ಸಂತಾನದವರೆಂದೂ ಬರವಣಿಗೆಯಲ್ಲೆ ಕಂಡುಬಂದಿದೆ. 22ಇದು ನಮಗೆ ಅರಿಕೆ
ಆಗಿರುವುದರಿಂದ ನೀವು ನಿಮ್ಮ ಕ್ಷೇಮವನ್ನು ಕುರಿತು ಬರೆದರೆ ಒಳಿತು. 23ನಾವಾದರೋ ನಿಮಗೆ ಬರೆದು
ತಿಳಿಸುವುದೇನೆಂದರೆ: ನಿಮ್ಮ ದನಕರುಗಳೂ ನಿಮ್ಮ ಸೊತ್ತೂ ನಮ್ಮದು. ನಮ್ಮದೂ ನಿಮ್ಮದಲ್ಲವೇ? ಈ ರೀತಿ
ನಿಮಗೆ ವರದಿ ಮಾಡಬೇಕೆಂದು ನಾವು ನಮ್ಮ ಪ್ರತಿನಿಧಿಗಳಿಗೆ ಆಜ್ಞಾಪಿಸಿದ್ದೇವೆ."

### ಯೋನಾತನ ಮತ್ತು ಸಿಮೋನರ ದಂಡಯಾತ್ರೆ

24 ದೆಮೆತ್ರಿಯನ ಸರದಾರರು ಮೊದಲಿಗಿಂತಲೂ ದೊಡ್ಡದಾದ ಸೈನ್ಯವನ್ನು ಕಟ್ಟಿಕೊಂಡು ತನ್ನ
ಮೇಲೆ ಯುದ್ಧಮಾಡುವುದಕ್ಕೆ ಬಂದಿದ್ದಾರೆಂದು ಯೋನಾತನನಿಗೆ ತಿಳಿಯಿತು. 25ಅವನು
ಜೆರುಸಲೇಮಿನಿಂದ ಹೊರಟು ಹಾಮಾತಿನ ಸೀಮೆಯಲ್ಲಿ ಅವರನ್ನು ಸಂಧಿಸಿದನು. ತನ್ನ ಸೀಮೆಯಲ್ಲಿ
ಕಾಲಿಡಲು ಅವರಿಗೆ ಅವಕಾಶವನ್ನೇ ಕೊಡಲಿಲ್ಲ. 26ಬೇಹುಗಾರರನ್ನು ಅವರ ಪಾಳೆಯಕ್ಕೆ ಕಳುಹಿಸಿದನು.
ಅವರು ಹಿಂದಿರುಗಿ ಬಂದು, ರಾತ್ರಿ ವೇಳೆಯಲ್ಲಿ ಇಂಥಿಂಥ ರೀತಿಯಲ್ಲಿ ನಮ್ಮ ಮೇಲೆ ಬೀಳಬೇಕೆಂದು
ಅವರು ಗೊತ್ತುಮಾಡಿ ಕೊಂಡಿದ್ದಾರೆಂದು ತಿಳಿಸಿದರು. 27ಸೂರ್ಯನು ಮುಳುಗಿದಾಗ ಯೋನಾತನನು
ತನ್ನ ಜನರಿಗೆ, "ಎಚ್ಚರವಾಗಿರಿ! ನಿಮ್ಮ ಆಯುಧಗಳನ್ನು ಧರಿಸಿಕೊಂಡೇ ಇರಿ; ರಾತ್ರಿಯೆಲ್ಲಾ ನೀವು ಸಮರಕ್ಕೆ
ಸನ್ನದ್ಧರಾಗಿರಬೇಕು," ಎಂದು ಆಜ್ಞಾಪಿಸಿ, ಪಾಳೆಯದ ಸುತ್ತಲೂ ಪಹರೆಯವರನ್ನು ಇರಿಸಿದನು.
28ಯೋನಾತನನೂ ಅವನ ಜನರೂ ಸಮರ ಸನ್ನದ್ಧರಾಗಿದ್ದಾರೆಂದು ಶತ್ರುಗಳು ಕೇಳಿ, ಅಂಜಿ,
ಅಂತರಂಗದಲ್ಲೇ ನಡುಗಿದರು; ಮತ್ತು ಪಾಳೆಯದಲ್ಲಿ ಬೆಂಕಿಮಾಡಿ ಓಡಿಹೋದರು. 29ಆದರೆ ಈ ಸಂಗತಿ
ಯೋನಾತನನಿಗೂ ಅವನ ಜನರಿಗೂ ಬೆಳಗಾಗುವವರೆಗೆ ತಿಳಿಯಲಿಲ್ಲ. ಏಕೆಂದರೆ ಬೆಂಕಿ ಮಾತ್ರ ಅವರಿಗೆ
ಕಾಣುತ್ತಿತ್ತು. 30ಬೆಳಿಗ್ಗೆ ಯೋನಾತನನು ಅವರನ್ನು ಬೆನ್ನಟ್ಟಿದನು. ಆದರೆ ಅವರನ್ನು ಹಿಡಿಯಲಿಕ್ಕಾಗಲಿಲ್ಲ.
ಅವರು ಆಗಲೇ ಎಲ್ಯೂತರಸ್ ನದಿಯನ್ನು ದಾಟಿ ಹೋಗಿದ್ದರು. 31ಆಗ ಯೋನಾತನನು
ಜೆಬೆದಾಯರೆಂದೆನಿಸಿದ ಅರಬ್ಬಿಯರ ಕಡೆಗೆ ಹೊರಳಿ, ಅವರನ್ನು ಸಂಹರಿಸಿ, ಅವರ ಕೊಳ್ಳೆಯನ್ನು
ದಮಸ್ಕಸ್ಸಿಗೆ ತೆಗೆದುಕೊಂಡು ಹೋದನು. 32ತರುವಾಯ ಅಲ್ಲಿಂದ ಬಂದು ಆ ಸೀಮೆಯನ್ನೆಲ್ಲಾ
ಹಾದುಹೋದನು.

33 ಇತ್ತ ಸಿಮೋನನು ಹೊರಟು ಅಷ್ಕೆಲೋನಿನ ಹಾಗು ಅದರ ನೆರೆಯಲ್ಲಿದ್ದ ಕೋಟೆಗಳವರೆಗೆ
ಪ್ರಯಾಣ ಮಾಡುತ್ತಾ ಜೊಪ್ಪದ ಕಡೆಗೆ ತಿರುಗಿ, ಅದನ್ನು ಕೈವಶಮಾಡಿಕೊಂಡನು. 34ಏಕೆಂದರೆ ಅಲ್ಲಿದ್ದವರು
ಆ ಕೋಟೆಯನ್ನು ದೆಮೆತ್ರಿಯನ ಬೆಂಬಲಿಗರಿಗೆ ಒಪ್ಪಿಸುವ ಹವಣಿಕೆಯಲ್ಲಿದ್ದಾರೆಂದು ಅವನು ಕೇಳಿದ್ದನು.
ಆದ್ದರಿಂದ ಅದನ್ನು ಕಾಯುವುದಕ್ಕಾಗಿ ಅಲ್ಲಿ ಒಂದು ರಕ್ಷಣಾ ದಳವನ್ನಿಟ್ಟನು.

35 ಯೋನಾತನನು ಹಿಂದಿರುಗಿ ಬಂದು, ಜನರ ಹಿರಿಯರನ್ನು ಒಟ್ಟಿಗೆ ಕರೆದು, ಜುದೇಯದಲ್ಲಿರುವ
ಕೋಟೆಗಳನ್ನು ಕಟ್ಟುವ ಬಗ್ಗೆ ಆಲೋಚಿಸಿದನು. 36ಜೆರುಸಲೇಮಿನ ಗೋಡೆಗಳನ್ನು ಎತ್ತರಿಸುವುದು,
ಮಾರುವುದು ಹಾಗು ಕೊಳ್ಳುವುದು ನಡೆಯದಂತೆ ಕೋಟೆಯನ್ನು ಪೇಟೆಯಿಂದ ಬೇರ್ಪಡಿಸುವುದು ಮತ್ತು

ಅವುಗಳ ನಡುವೆ ದೊಡ್ಡ ದಿಬ್ಬವೊಂದನ್ನು ನಿರ್ಮಿಸುವುದು ಇವುಗಳನ್ನು ಕುರಿತು ಅವರೊಂದಿಗೆ ಸಮಾಲೋಚಿಸಿದನು. 37ತರುವಾಯ, ಆ ದಿಬ್ಬ ಕಟ್ಟುವುದಕ್ಕೆ ಅವರು ಕೂಡಿಬಂದರು. ಆಗ ಪೂರ್ವ ದಿಕ್ಕಿನಲ್ಲಿದ್ದ ಹಳ್ಳದ ಕಡೆಯ ಗೋಡೆ ಬಿದ್ದು ಹೋಗಿದ್ದರಿಂದ ಖಫೆನಾಥ ಎಂಬ ಭಾಗವನ್ನು ಸರಿಪಡಿಸಿದನು. 38ಸಿಮೋನನು ಇಳುಕಲು ಸೀಮೆಯಲ್ಲಿ, ಅದೀದ ಪಟ್ಟಣವನ್ನು ಕಟ್ಟಿಸಿ, ಭದ್ರಗೊಳಿಸಿ, ಅದಕ್ಕೆ ಬಾಗಿಲು ಅಗುಳಿಗಳನ್ನು ಹಾಕಿಸಿದನು.

### ಯೋನಾತನನು ತ್ರಿಫೋನನ ಕೈದಿ

39 ತ್ರಿಫೋನನು ಅರಸ ಅಂತಿಯೋಕನನ್ನು ಸೋಲಿಸಿ ತಾನೇ ಕಿರೀಟವನ್ನು ಧರಿಸಿ, ಏಷ್ಯ ಸೀಮೆಯನ್ನು ಆಳಬೇಕೆಂದು ಹವಣಿಸಿದನು. 40ಆದರೆ ಯೋನಾತನನು ಹಾಗೆ, ಮಾಡಗೊಡಲಿಕ್ಕಿಲ್ಲೆಂದು ಅಂಜಿದನು. ಆದುದರಿಂದ ಯೋನಾತನನನ್ನು ಸಂಹರಿಸುವ ಬಗೆಯನ್ನು ಹುಡುಕಿ ಬೇತ್ಯಾನಿಗೆ ಹೊರಟು ಬಂದನು. 41ಯೋನಾತನನು ಅವನನ್ನು ಎದುರಿಸುವುದಕ್ಕೆ ನಲವತ್ತು ಸಾವಿರ ಒಳ್ಳೆಯ ಯೋಧರನ್ನು ಕರೆದುಕೊಂಡು ಬೇತ್ಯಾನಿಗೆ ಬಂದನು. 42ಅವನು ಮಹಾಸೈನ್ಯದೊಂದಿಗೆ ಬಂದುದನ್ನು ತ್ರಿಫೋನನು ಕಂಡು ಅವನ ಮೇಲೆ ಕೈಮಾಡಲು ಅಂಜಿದನು. 43ಅವನನ್ನು ಬರಮಾಡಿಕೊಂಡು ತನ್ನ ಸ್ನೇಹಿತರೆಲ್ಲರ ಮುಂದೆ ಅವನನ್ನು ಪ್ರಶಂಸಿಸಿ, ಕಾಣಿಕೆಗಳನ್ನು ಕೊಟ್ಟು, ತನಗೇ ಎಂಬಂತೆ ಅವನಿಗೆ ವಿಧೇಯರಾಗಿರಬೇಕೆಂದು ತನ್ನ ಸೈನ್ಯದವರಿಗೆಲ್ಲಾ ಆಜ್ಞಾಪಿಸಿದನು. 44ಅನಂತರ ಯೋನಾತನನಿಗೆ, "ನಮ್ಮಲ್ಲಿ ಯುದ್ಧ ಪ್ರಶ್ನೆಯೇ ಇಲ್ಲವಲ್ಲಾ? ನೀನು ಈ ಜನಕ್ಕೆಲ್ಲಾ ತೊಂದರೆ ಕೊಟ್ಟದ್ದೇಕೆ? 45ಅವರನ್ನು ಅವರವರ ಮನೆಗೆ ಕಳುಹಿಸಿಬಿಡು; ಆದರೆ ನಿನ್ನ ಜೊತೆಯಲ್ಲಿರುವುದಕ್ಕೆ ಕೆಲವರನ್ನು ಮಾತ್ರ ಆಯ್ದುಕೊಂಡು ನನ್ನ ಸಂಗಡ ಪ್ತೊಲೆಮಾಯಕ್ಕೆ, ಬಾ; ಅದನ್ನೂ ಉಳಿದ ದುರ್ಗಗಳನ್ನೂ ಪಡೆಗಳನ್ನೂ ಅರಸನ ಎಲ್ಲ ಅಧಿಕಾರಿಗಳನ್ನೂ ನಿನ್ನ ವಶಕ್ಕೆ ಕೊಟ್ಟು ನಾನು ಹೊರಟು ಹೋಗುತ್ತೇನೆ. ಇದಕ್ಕಾಗಿಯೇ ನಾನು ಬಂದದ್ದು," ಎಂದು ಹೇಳಿದನು. 46ಯೋನಾತನನು ಅವನನ್ನು ನಂಬಿ, ಅವನು ಹೇಳಿದಂತೆ ಸೈನ್ಯವನ್ನು ಕಳುಹಿಸಿಬಿಟ್ಟನು. ಅವರು ಜುದೇಯ ನಾಡಿಗೆ ಹೊರಟು ಹೋದರು. 47ಆದರೆ ತನಗೋಸ್ಕರ ಅವನು ಮೂರು ಸಾವಿರ ಜನರನ್ನು ಉಳಿಸಿಕೊಂಡನು; ಮತ್ತು ಅವರಲ್ಲಿ ಎರಡು ಸಾವಿರ ಜನರನ್ನು ಗಲಿಲೇಯದಲ್ಲಿ ಬಿಟ್ಟು, ಒಂದು ಸಾವಿರ ಜನರು ತನ್ನ ಸಂಗಡ ಹೋಗುವಂತೆ ಮಾಡಿದನು. 48ಯೋನಾತನನು ಪ್ತೊಲೆಮಾಯದವರು ಅದರ ಬಾಗಿಲುಗಳನ್ನು ಮುಚ್ಚಿ, ಅವನನ್ನು ಹಿಡಿದುಕೊಂಡು, ಅವನ ಸಂಗಡ ಇದ್ದವರನ್ನೆಲ್ಲ ಕತ್ತಿಯಿಂದ ಸಂಹರಿಸಿದರು. 49ತ್ರಿಫೋನನು ಯೋನಾತನನ ಜನರನ್ನೆಲ್ಲ ಸಂಹರಿಸಲು ತನ್ನ ಕಾಲ್ದಳವನ್ನೂ ರಾಹುತರನ್ನೂ ಗಲಿಲೇಯದ ದೊಡ್ಡ ಬಯಲು ಸೀಮೆಗೆ ಕಳುಹಿಸಿದನು. 50ಯೋನಾತನನೂ ಅವನ ಜೊತೆ ಇದ್ದವರೆಲ್ಲರೂ ಸೆರೆಹಿಡಿಯಲ್ಪಟ್ಟು ನಾಶವಾದರೆಂಬ ವಾರ್ತೆಯನ್ನು ಯೆಹೂದ್ಯ ಸೈನಿಕರೆಲ್ಲರು ಕೇಳಿ, ಒಬ್ಬರನ್ನೊಬ್ಬರು ಹುರಿದುಂಬಿಸಿ, ಯುದ್ಧಸನ್ನದ್ಧರಾಗಿ ಒಬ್ಬರನ್ನೊಬ್ಬರು ಅಂಟಿಕೊಂಡು ಹೋರಾಡಲು ಸಜ್ಜಾದರು. 51ಅವರನ್ನು ಬೆನ್ನಟ್ಟಿ ಬಂದವರು, ಅವರು ತಮ್ಮ ಪ್ರಾಣಕ್ಕಾಗಿ ಕಾದಾಡಲು ಸಿದ್ಧರಾಗಿದ್ದಾರೆಂದು ಕಂಡು, ಹಿಂದಕ್ಕೆ ತಿರುಗಿದರು. 52ಸೈನಿಕರೆಲ್ಲರೂ ಸಮಾಧಾನದಿಂದ ಜುದೇಯ ನಾಡಿಗೆ ಹಿಂದಿರುಗಿ ಬಂದು, ಯೋನಾತನನಿಗಾಗಿ ಹಾಗು ಅವನ ಸಂಗಡಿಗರಿಗಾಗಿ ಗೋಳಾಡಿದರು. ಅವರೆಲ್ಲರು ಭಯಪೀಡಿತರಾದರು. ಇಸ್ರಯೇಲರೆಲ್ಲರು ಬಹಳವಾಗಿ ಅತ್ತು ಗೋಳಾಡಿದರು. 53ನೆರೆಹೊರೆಯಲ್ಲಿದ್ದ ಅನ್ಯಜನರು, "ಇವರನ್ನು ಈಗ ಪೂರ್ತಿ ನಾಶಗೊಳಿಸಬಹುದು; ಏಕೆಂದರೆ ಇವರಿಗೆ ಈಗ ದೊರೆಯೂ ಇಲ್ಲ, ಯಾವ ಸಹಾಯಕನೂ ಇಲ್ಲ. ಆದುದರಿಂದ ನಾವೀಗ ಅವರ ಮೇಲೆ ಯುದ್ಧಮಾಡಿ, ಜನಾಂಗಗಳಿಂದ ಅವರ ಹೆಸರನ್ನೇ ಅಳಿಸಿಬಿಡೋಣ," ಎಂದುಕೊಂಡರು.

### ಯೆಹೂದ್ಯರ ನಾಯಕನಾಗಿ ಸಿಮೋನ್

**13** ತ್ರಿಫೋನನು ಜುದೇಯ ನಾಡನ್ನು ಹೊಕ್ಕು, ಅದನ್ನು ಪೂರ್ತಿಯಾಗಿ ನಾಶಮಾಡಬೇಕೆಂದು ಬಲವಾದ ಸೈನ್ಯವನ್ನು ಶೇಖರಿಸಿದ್ದಾನೆಂಬ ಸಮಾಚಾರ ಸಿಮೋನನಿಗೆ ಮುಟ್ಟಿತು. 2ಇತ್ತ ಜನರು ಬಹಳವಾಗಿ ಅಂಜಿ

ನಡುಗುತ್ತಿದ್ದಾರೆಂದು ತಿಳಿದು ಜೆರುಸಲೇಮಿಗೆ ಹೋಗಿ, ಜನರನ್ನೆಲ್ಲಾ ಒಟ್ಟಿಗೆ ಕೂಡಿಸಿ, ಅವರನ್ನು
ಧೈರ್ಯಪಡಿಸಿದನು. 3ಅವರಿಗೆ, "ನಾನು, ನನ್ನ ಸಹೋದರರು ಹಾಗು ನನ್ನ ತಂದೆಯ ಮನೆಯವರು
ನಮ್ಮ ಧರ್ಮದ ಮತ್ತು ಮಹಾದೇವಾಲಯದ ಪರವಾಗಿ ಮಾಡಿದ ಎಲ್ಲ ಕಾರ್ಯಗಳನ್ನೂ ಅನುಭವಿಸಿದ
ಯುದ್ಧ, ಕಷ್ಟಗಳನ್ನೂ ನೀವು ಸ್ವತಃ ಬಲ್ಲವರಾಗಿದ್ದೀರಿ. 4ಇದರಿಂದಲೇ, ಇಸ್ರಯೇಲರ ಸಲುವಾಗಿ ನನ್ನ
ಸಹೋದರರೆಲ್ಲರೂ ಅಳಿದು, ನಾನೊಬ್ಬನೇ ಉಳಿದುಕೊಂಡಿದ್ದೇನೆ. 5ಈಗ ಎಂತಹ ಕಷ್ಟಕಾಲ ಒದಗಿದರೂ
ನನ್ನ ಪ್ರಾಣವನ್ನು ಉಳಿಸಿಕೊಳ್ಳುವುದು ನನ್ನಿಂದ ದೂರವಾಗಿರಲಿ. 6ನನ್ನ ಸಹೋದರರಿಗಿಂತ ನಾನು
ಉತ್ತಮನಲ್ಲ; ಹೇಗಾದರೂ ನನ್ನ ಜನಾಂಗದ, ಮಹಾದೇವಾಲಯದ ಮತ್ತು ನಮ್ಮ ಮಡದಿ ಮಕ್ಕಳ
ಪ್ರಯುಕ್ತ ನಾನು ಸೇಡು ತೀರಿಸಿಕೊಳ್ಳುವೆನು. ಏಕೆಂದರೆ ಅನ್ಯಜನಗಳೆಲ್ಲಾ ನಮ್ಮ ಮೇಲಿನ ದ್ವೇಷದಿಂದ
ನಮ್ಮನ್ನು ಹಾಳುಮಾಡಲು ಕೂಡಿಕೊಂಡಿದ್ದಾರೆ," ಎಂದು ಹೇಳಿದನು.

7 ಈ ಮಾತುಗಳನ್ನು ಕೇಳಿ ಜನರ ಮನಸ್ಸು ಚೇತರಿಸಿಕೊಂಡಿತು. 8ಅವರು ಗಟ್ಟಿಯಾಗಿ ಕೂಗಿ,
"ಯೂದನ ಮತ್ತು ನಿನ್ನ ತಮ್ಮ ಯೋನಾತನನ ಸ್ಥಾನದಲ್ಲಿ ನೀನೇ ನಮ್ಮ ನಾಯಕನಾಗಿರು. 9ನೀನೇ ನಮ್ಮ
ಯುದ್ಧವನ್ನು ನಡೆಸು; ನೀನು ಹೇಳುವುದೆಲ್ಲವನ್ನೂ ನಾವು ಮಾಡುತ್ತೇವೆ," ಎಂದು ಉತ್ತರಕೊಟ್ಟರು. 10ಆಗ
ಸಿಮೋನನು ಯೋಧರೆಲ್ಲರನ್ನೂ ಕೂಡಿಸಿಕೊಂಡು, ಲಘುವಾಗಿ ಜೆರುಸಲೇಮಿನ ಗೋಡೆಗಳನ್ನು ಕಟ್ಟಿ
ಪೂರೈಸಿ, ಸುತ್ತಲೂ ಅವುಗಳನ್ನು ಭದ್ರಪಡಿಸಿದನು. 11ಅಬ್ಷಾಲೋಮನ ಮಗ ಯೋನಾತನನನ್ನು ಮಹಾ
ಸೈನ್ಯದೊಡನೆ ಜೊಪ್ಪಕ್ಕೆ ಕಳುಹಿಸಿದನು. ಅವನು ಅದರೊಳಗಿದ್ದವರನ್ನೆಲ್ಲ ಹೊರಗೆ ಹಾಕಿ ಅಲ್ಲಿ ಬಿಡಾರ
ಮಾಡಿದನು.

**ತ್ರಿಫೋನನನ್ನು ಹೊರದೂಡಿದ ಸಿಮೋನ**

12 ತ್ರಿಫೋನನು ಜುದೇಯ ನಾಡನ್ನು ಪ್ರವೇಶಿಸುವುದಕ್ಕಾಗಿ ಮಹಾಸೈನ್ಯದೊಂದಿಗೆ
ಪ್ತೊಲೆಮಾಯವನ್ನು ಬಿಟ್ಟು ಹೊರಟನು. ಯೋನಾತನನು ಸಹ ಬಂಧಿಯಾಗಿ ಅವನ ಕೂಡ ಬಂದನು.
13ಸಿಮೋನನು ಬೈಲಿಗೆ ಎದುರಾಗಿ ಅದೀದದಲ್ಲಿ ಪಾಳೆಯ ಮಾಡಿಕೊಂಡನು. 14ತನ್ನ ತಮ್ಮ ಯೋನಾತನನ
ಬದಲಾಗಿ ಸಿಮೋನನು ಎದ್ದಿದ್ದಾನೆಂದೂ ತನ್ನೊಂದಿಗೆ ಯುದ್ಧಹೂಡುವ ಹವಣಿಕೆಯಲ್ಲಿದ್ದಾನೆಂದೂ
ತ್ರಿಫೋನನು ತಿಳಿದುಕೊಂಡು ಅವನ ಬಳಿಗೆ ರಾಯಭಾರಿಗಳನ್ನು ಕಳುಹಿಸಿದನು. 15ಅವನಿಗೆ, "ನಿನ್ನ ತಮ್ಮ
ಯೋನಾತನನು ತನಗಿದ್ದ ಸ್ಥಾನಮಾನಗಳ ನಿಮಿತ್ತ ಅರಸನ ಭಂಡಾರಕ್ಕೆ ಸಲ್ಲಿಸಬೇಕಾಗಿದ್ದ ಹಣದ ಕಾರಣ
ನಾವು ಅವನನ್ನು ಕೈದಿಯಾಗಿ ಇಟ್ಟುಕೊಂಡಿದ್ದೇವೆ. 16ಆದುದರಿಂದ ಈಗ ನೀನು 3000 ಕಿಲೋಗ್ರಾಂ
ಬೆಳ್ಳಿಯನ್ನು ನಮಗೆ ಕಳುಹಿಸಿಕೊಡು; ಮತ್ತು ಅವನು ಬಿಡುಗಡೆ ಹೊಂದಿದನಂತರ ನಮ್ಮ ಮೇಲೆ ಮತ್ತೆ
ಬೀಳದಂತೆ ಅವನ ಮಕ್ಕಳಲ್ಲಿ ಇಬ್ಬರನ್ನು ನಮ್ಮ ಕಡೆಗೆ ಒತ್ತೆಯಾಳಾಗಿ ಕಳುಹಿಸು; ಆಗ ನಾವು ಅವನನ್ನು
ಬಿಡುಗಡೆ ಮಾಡುವೆವು," ಎಂದು ಹೇಳಿದನು.

17 ಅವರು ಮೋಸದಿಂದ ಹೀಗೆ ಮಾತಾಡುತ್ತಿದ್ದಾರೆಂದು ಸಿಮೋನನಿಗೆ ತಿಳಿದಿದ್ದರೂ ಅವನು
ಹಣವನ್ನೂ ಮಕ್ಕಳನ್ನೂ ಕಳುಹಿಸಿದನು. 18ಜನರು, "ಇವನು ಹಣವನ್ನೂ ಮಕ್ಕಳನ್ನೂ
ಕಳುಹಿಸಲಿಲ್ಲವಾದ್ದರಿಂದ ಅವನು ನಾಶವಾದನು," ಎನ್ನಬಾರದೆಂದೂ ತಾನು ಈ ಕಾರಣ ಅವರ ದ್ವೇಷಕ್ಕೆ
ಗುರಿಯಾಗಬಾರದೆಂದೂ ಆ ಮಕ್ಕಳನ್ನೂ 3000 ಕಿಲೋಗ್ರಾಂ ಬೆಳ್ಳಿಯನ್ನು ಕಳುಹಿಸಿದನು. 19ಆದರೆ
ತ್ರಿಫೋನನು ವಂಚನೆಮಾಡಿ ಯೋನಾತನನನ್ನು ಬಿಡುಗಡೆಮಾಡಲೇ ಇಲ್ಲ.

20 ಇದಾದ ಮೇಲೆ ತ್ರಿಫೋನನು ನಾಡನ್ನು ಆಕ್ರಮಿಸಿ, ಅದನ್ನು ನಾಶಮಾಡಲು ಬಂದನು.
ಅದೊರಾಕ್ಕೆ ಹೋಗುವ ಮಾರ್ಗವಾಗಿ ಸುತ್ತುವರಿದೂ ಬಂದನು. ಸಿಮೋನನೂ ಅವನ ಸೈನ್ಯದವರೂ
ಅವನು ಹೋದಲ್ಲೆಲ್ಲಾ ಪ್ರತಿಯೊಂದು ಸ್ಥಳದಲ್ಲಿ ಅವನಿಗೆ ಅಡ್ಡಬರುವಂತೆ ಹೋಗುತ್ತಿದ್ದರು.
21ಕೋಟೆಯಲ್ಲಿದ್ದವರು ತ್ರಿಫೋನಿನ ಬಳಿಗೆ ರಾಯಭಾರಿಗಳನ್ನು ಕಳುಹಿಸಿ, ಅರಣ್ಯ ಮಾರ್ಗವಾಗಿ ಬೇಗ
ತಮ್ಮ ಕಡೆಗೆ ಬರಬೇಕೆಂದೂ ತಮಗೆ ದವಸಧಾನ್ಯಗಳನ್ನು ಒದಗಿಸಬೇಕೆಂದೂ ಹೇಳಿದರು. 22ತ್ರಿಫೋನನು
ಹೋಗುವುದಕ್ಕೆ ತನ್ನ ಅಶ್ವಬಲವನ್ನೆಲ್ಲಾ ಸಜ್ಜುಗೊಳಿಸಿದನು. ಆ ದಿನ ರಾತ್ರಿ ಬಹಳ ಹಿಮಬಿದ್ದಿತ್ತು. ಹಿಮದ
ನಿಮಿತ್ತ ಅಂದು ಹೊರಡಲು ಆಗಲಿಲ್ಲ. ಅವನು ಅಲ್ಲಿಂದ ಹೊರಟು ಗಿಲ್ಯಾದ ಸೀಮೆಗೆ ಬಂದನು. 23ಅವನು

ಬಸ್ಕಾಮಾ ಊರಿಗೆ ಬಂದಾಗ ಯೋನಾತನನನ್ನು ಕೊಂದುಹಾಕಿದನು; ಅಲ್ಲಿಯೇ ಅವನಿಗೆ ಸಮಾಧಿ ಆಯಿತು. 24ಆಮೇಲೆ ತ್ರಿಫೋನನು ಹಿಂದಿರುಗಿ ತನ್ನ ನಾಡಿಗೆ ತೆರಳಿದನು.

**ಯೋನಾತನನ ಶವಸಂಸ್ಕಾರ**

25 ಸಿಮೋನನು ತನ್ನ ತಮ್ಮ ಯೋನಾತನನ ಶವವನ್ನು ತರಿಸಿಕೊಂಡು ಅದನ್ನು ತನ್ನ ಪಿತೃಗಳ ಊರಾದ ಮೋದೀನದಲ್ಲಿ ಭೂಸ್ಥಾಪನೆಮಾಡಿದನು. 26ಇಸ್ರಯೇಲರೆಲ್ಲರೂ ಬಹಳವಾಗಿ ಗೋಳಾಡಿ, ಅವನಿಗಾಗಿ ಬಹುದಿನದವರೆಗೂ ಶೋಕಿಸಿದರು. 27ಸಿಮೋನನು ತನ್ನ ತಂದೆಯ ಮತ್ತು ಸಹೋದರರ ಸಮಾಧಿಯನ್ನು ಇಕ್ಕಡೆ ನುಣುಪಾದ ಕಲ್ಲುಗಳಿಂದ ಎಲ್ಲರಿಗೂ ಕಾಣುವಂತೆ ಎತ್ತರವಾಗಿ ಕಟ್ಟಿಸಿದನು. 28ಮತ್ತು ಅಲ್ಲಿ ತನ್ನ ತಂದೆ, ತಾಯಿ ಮತ್ತು ನಾಲ್ಕುಜನ ತಮ್ಮಂದಿರ ಸ್ಮಾರಕವಾಗಿ ಒಂದರ ಮುಂದೆ ಒಂದರಂತೆ ಶಂಕು ಸ್ತಂಭಗಳನ್ನು ನಿಲ್ಲಿಸಿದನು. 29ಒಳ್ಳೇ ಚಾಕಚಕ್ಯತೆಯಿಂದ ಅವುಗಳ ಸುತ್ತಲೂ ದೊಡ್ಡ ದೊಡ್ಡ ಕಂಬಗಳನ್ನು ನಿಲ್ಲಿಸಿ, ಆ ಕಂಬಗಳ ಮೇಲೆ ಶಾಶ್ವತ ಸ್ಮಾರಕವಾಗಿರಲೆಂದು ಎಲ್ಲ ತರದ ಆಯುಧಗಳನ್ನು ಮಾಡಿಸಿದನು; ಇದಲ್ಲದೆ, ಸಮುದ್ರದಲ್ಲಿ ಪ್ರಯಾಣ ಮಾಡುವವರೆಲ್ಲರಿಗೂ ಕಾಣಿಸುವಂತೆ ಆ ಆಯುಧಗಳ ಬಳಿಯಲ್ಲಿ ಹಡಗುಗಳನ್ನು ಕೆತ್ತಿಸಿದನು. 30ಮೋದೀನದಲ್ಲಿ ಹೀಗೆ ಕಟ್ಟಿಸಿದ ಸಮಾಧಿ ಇಂದಿನವರೆಗೂ ಇದೆ. 31ತ್ರಿಫೋನನು ಕಿರಿಯ ಅಂತಿಯೋಕನೊಂದಿಗೆ ಮೋಸದಿಂದ ನಡೆದುಕೊಂಡು ಅವನನ್ನು ಕೊಂದು ಅವನ ಸ್ಥಳದಲ್ಲಿ ಆಳಿದನು. 32ತಾನೇ ಏಷ್ಯದ ಕಿರೀಟವನ್ನು ಧರಿಸಿಕೊಂಡು ನಾಡಿಗೆ ದೊಡ್ಡ ವಿಪತ್ತನ್ನು ತಂದನು. 33ಸಿಮೋನನು ಜುದೇಯದ ದುರ್ಗಗಳನ್ನು ಕಟ್ಟಿಸಿ, ಅವುಗಳ ಸುತ್ತಲೂ ಎತ್ತರವಾದ ಬುರುಜುಗಳನ್ನು ನಿಲ್ಲಿಸಿ, ದೊಡ್ಡ ಗೋಡೆಗಳನ್ನು ಕಟ್ಟಿಸಿ, ಅವುಗಳಿಗೆ ಬಾಗಿಲು ಅಗುಳಿಗಳನ್ನು ಮಾಡಿಸಿದನು. 34ತ್ರಿಫೋನನು ಮಾಡಿದುದೆಲ್ಲವೂ ಸುಲಿಗೆಯೇ ಆಗಿದ್ದುದರಿಂದ ಸಿಮೋನನು ಕೆಲವು ಜನರನ್ನು ಆಯ್ಕೆಮಾಡಿ ನಾಡನ್ನು ಕಪ್ಪಕಾಣಿಕೆಗಳಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳಲು ಅವರನ್ನು ಅರಸ ದೆಮೆತ್ರಿಯನ ಬಳಿಗೆ ಕಳುಹಿಸಿದನು. 35ಅರಸ ದೆಮೆತ್ರಿಯನು ಈ ರೀತಿ ಉತ್ತರಕೊಟ್ಟು ಕಳುಹಿಸಿದನು: ಅವನು ಬರೆದ ಕಗದ ಹೀಗಿದೆ:

> 36 “ಪ್ರಧಾನಯಾಜಕನೂ ರಾಜಮೈತ್ರಿಯೂ ಆದ ಸಿಮೋನನಿಗೂ ಹಿರಿಯರಿಗೂ ಯೆಹೂದ್ಯ ಜನಾಂಗಕ್ಕೂ ರಾಜ ದೆಮೆತ್ರಿಯನ ವಂದನೆಗಳು! 37ತಾವು ಕಳುಹಿಸಿದ ಬಂಗಾರದ ಕಿರೀಟವೂ ಖರ್ಜೂರ ಕೊಂಬೆಯೂ ಬಂದು ಸೇರಿದವು. ನಾವು ನಿಮ್ಮೊಂದಿಗೆ ಸ್ಥಿರವಾದ ಶಾಂತಿಸಂಧಾನವನ್ನು ಮಾಡಿಕೊಳ್ಳಲು ಹಾಗು ನಿಮಗೆ ಸವಲತ್ತುಗಳನ್ನು ಕೊಡಬೇಕೆಂದು ನಮ್ಮ ಸರದಾರರಿಗೆ ಬರೆಯಲು ಸಿದ್ಧರಾಗಿದ್ದೇವೆ. 38ನಾವು ನಿಮ್ಮೊಂದಿಗೆ ಮಾಡಿರುವ ಪ್ರತಿಯೊಂದು ಒಪ್ಪಂದವೂ ಸ್ಥಿರವಾಗಿರುವುವು; ನೀವು ಕಟ್ಟಿಸಿದ ದುರ್ಗಗಳು ನಿಮ್ಮವೇ ಆಗಿರಲಿ. 39ಈವರೆಗೆ ಆದ ತಪ್ಪುನೆಪ್ಪುಗಳನ್ನೂ ನೀವು ಕೊಡಲು ತಪ್ಪಿದ ಕಪ್ಪವನ್ನೂ ಮನ್ನಿಸುತ್ತೇವೆ. ಇದಲ್ಲದೆ ಜೆರುಸಲೇಮಿನಲ್ಲಿ ಎತ್ತಲಾಗುತ್ತಿದ್ದ ಬೇರಾವ ಸುಂಕವಾದರು ಇನ್ನೂ ಉಳಿದಿದ್ದರೆ ಅದನ್ನು ಇನ್ನು ತೆರಬೇಕಾಗಿಲ್ಲ. 40ಸೈನ್ಯ ಸಿಬ್ಬಂದಿಯಲ್ಲಿ ಸೇರಿಕೊಳ್ಳುವುದಕ್ಕೆ ತಕ್ಕವರಾದ ಜನರು ನಿಮ್ಮಲ್ಲಿ ಇದ್ದರೆ ಅವರು ಸೇರಿಕೊಳ್ಳಲಿ. ನಮ್ಮ ನಿಮ್ಮ ನಡುವೆ ಸಮಾಧಾನವಿರಲಿ.”

41 170ನೇ ವರ್ಷ ಅನ್ಯರು ಹೊರಿಸಿದ್ದ ನೊಗವನ್ನು ಇಸ್ರಯೇಲಿನ ಮೇಲಿಂದ ಕಿತ್ತು ಹಾಕಲಾಯಿತು. 42ಅಂದಿನಿಂದ ಜನರು, ‘ಘನ ಪ್ರಧಾನ ಯಾಜಕನು, ಯೆಹೂದ್ಯರ ಅಧಿಪತಿಯು ಹಾಗು ನಾಯಕನು ಆದ ಸಿಮೋನನ ಅಧಿಪತ್ಯದ ಮೊದಲನೇ ವರ್ಷದಲ್ಲಿ’ ಎಂದು ತಮ್ಮ ದಸ್ತಾವೇಜು ಹಾಗು ಕರಾರು ಪತ್ರಗಳಲ್ಲಿ ಬರೆಯಲಾರಂಭಿಸಿದರು.

**ಗಜರಾದ ಮೇಲೆ ದಾಳಿ**

43 ಆ ದಿನಗಳಲ್ಲಿ ಸಿಮೋನನು ಗಜರಾದ ಮೇಲೆ ದಂಡೆತ್ತಿ ಹೋಗಿ ಮುತ್ತಿಗೆಹಾಕಿದನು. ಮುತ್ತಿಗೆಯ ಒಂದು ಯಂತ್ರವನ್ನು ಮಾಡಿಸಿ, ಪಟ್ಟಣದ ಸಮೀಪಕ್ಕೆ ತೆಗೆದುಕೊಂಡು ಬಂದು, ಒಂದು ಬುರುಜಿನ ಮೇಲೆ ಧಾಳಿಮಾಡಿ ಅದನ್ನು ಹಿಡಿದುಕೊಂಡನು. 44ಯಂತ್ರದಲ್ಲಿದ್ದವರು ಪಟ್ಟಣದೊಳಗೆ ಧುಮುಕಿದರು. ಆಗ

ಪಟ್ಟಣದಲ್ಲೆಲ್ಲಾ ಕೋಲಾಹಲವೆದ್ದಿತು. 45ಅದರ ನಿವಾಸಿಗಳು ಭಯದಿಂದ ತಮ್ಮ ಬಟ್ಟೆಗಳನ್ನು
ಹರಿದುಕೊಂಡು, ತಮ್ಮ ಮಡದಿಮಕ್ಕಳೊಂದಿಗೆ ಕೋಟೆಯ ಗೋಡೆಯ ಮೇಲೆ ಏರಿಹೋಗಿ, ಗಟ್ಟಿಯಾಗಿ
ಕೂಗುತ್ತಾ ತಮಗೆ ಸಹಾಯ ಮಾಡಬೇಕೆಂದು ಸಿಮೋನನಿಗೆ ಮೊರೆಯಿಟ್ಟರು. 46“ನಮ್ಮ ಕೆಟ್ಟತನಕ್ಕೆ ತಕ್ಕಂತೆ
ನಮ್ಮನ್ನು ಶಿಕ್ಷಿಸದೆ ದಯಾಪೂರ್ವಕವಾಗಿ ನಡೆದುಕೋ,” ಎಂದು ಹೇಳಿದರು. 47ಸಿಮೋನನು
ಅವರೊಂದಿಗೆ ಒಪ್ಪಂದ ಮಾಡಿಕೊಂಡು, ಯುದ್ಧವನ್ನು ನಿಲ್ಲಿಸಿ, ಅವರನ್ನು ಪಟ್ಟಣದ ಹೊರಗೆ ಹಾಕಿಸಿದನು.
ತರುವಾಯ ಮೂರ್ತಿಗಳಿದ್ದ ಮನೆಗಳನ್ನು ಶುಚಿಮಾಡಿಸಿ ಹಾಡುತ್ತಾ ಹರಸುತ್ತಾ ನಗರವನ್ನು ಸೇರಿದನು.
48ಅನಂತರ ಅಲ್ಲಿದ್ದ ಹೊಲಸನ್ನೆಲ್ಲ ತೆಗೆದು ಹಾಕಿಸಿ, ಧರ್ಮಶಾಸ್ತ್ರವನ್ನು ಕೈಗೊಳ್ಳುವಂಥವರನ್ನೇ ಅದರಲ್ಲಿ
ಇಟ್ಟನು. ಇದಲ್ಲದೆ, ಮೊದಲಿಗಿಂತಲೂ ಹೆಚ್ಚಾಗಿ ಅದನ್ನು ಭದ್ರಗೊಳಿಸಿ, ತನ್ನ ವಾಸಕ್ಕಾಗಿ ಅಲ್ಲಿಯೇ ಒಂದು
ಮನೆಯನ್ನು ಕಟ್ಟಿಸಿದನು.

### ಜೆರುಸಲೇಮ್ ಕೋಟೆಯ ಸ್ವಾಧೀನ

49 ಇದರಿಂದ ಜೆರುಸಲೇಮಿನ ಕೋಟೆಯಲ್ಲಿ ಇದ್ದವರಿಗೆ ನಾಡಿನಲ್ಲಿ ಹೋಗಿ ಬರುವುದೂ
ಕೊಂಡುಕೊಳ್ಳುವುದೂ ನಿಂತುಹೋಗಿ ಅವರು ಉಪವಾಸವಿದ್ದರು. ಅನೇಕರು ಕೂಳಿಲ್ಲದೆ ಸತ್ತುಹೋದರು.
ಆಗ ತಮ್ಮೊಂದಿಗೆ ಸಂಧಾನ ಮಾಡಿಕೊಳ್ಳಬೇಕೆಂದು ಅವರು ಸಿಮೋನನನ್ನು ಬೇಡಿಕೊಂಡರು. ಅವನು
ಒಪ್ಪಿದನು. 50ಬಳಿಕ ಅವರನ್ನು ಅಲ್ಲಿಂದ ಹೊರಗೆ ಅಟ್ಟಿ, ಅಲ್ಲಿದ್ದ ಹೊಲಸನ್ನೆಲ್ಲ ತೆಗೆಸಿ ಕೋಟೆಯನ್ನು
ಶುದ್ಧಮಾಡಿಸಿದನು. 51171ನೇ ವರ್ಷದ ಎರಡನೆಯ ತಿಂಗಳಿನ ಇಪ್ಪತ್ಮೂರನೆಯ ದಿನ ಇಸ್ರಯೇಲರ ಮಹಾ
ಶತ್ರು ಅಳಿದನೆಂಬುದರ ನೆನಪಿಗಾಗಿ ಅವರು ಸ್ತೋತ್ರ ಸಲ್ಲಿಸುತ್ತಾ ಖರ್ಜೂರ ಗರಿ, ಕಿನ್ನರಿ, ತಾಳ,
ತಂತಿವಾದ್ಯಗಳೊಂದಿಗೆ ಸಂಗೀತ ಕೀರ್ತನೆಗಳನ್ನು ಹಾಡುತ್ತಾ ಅದನ್ನು ಪ್ರವೇಶಿಸಿದರು. 52ಈ ದಿನವನ್ನು
ಪ್ರತಿ ವರ್ಷವೂ ಬಹು ಸಂಭ್ರಮದಿಂದ ಆಚರಿಸಬೇಕೆಂದು ಅವನು ಆಜ್ಞೆ ಮಾಡಿದನು. ಇದಲ್ಲದೆ ದುರ್ಗದ
ಪಕ್ಕದಲ್ಲಿದ್ದ ದೇವಾಲಯದ ದಿಬ್ಬವನ್ನು ಮೊದಲಿಗಿಂತಲೂ ಹೆಚ್ಚಾಗಿ ಭದ್ರಪಡಿಸಿ, ಅವನೂ ಅವನ ಜನರೂ
ಅಲ್ಲಿಯೇ ವಾಸಮಾಡಿದರು. 53ತನ್ನ ಮಗ ಯೋವಾನನು ಕೆಚ್ಚೆದೆಯ ವೀರನೆಂದು ಸಿಮೋನನು ಅರಿತು
ಅವನನ್ನೇ ದಂಡಿಗೆಲ್ಲ ನಾಯಕನನ್ನಾಗಿ ನೇಮಿಸಿ ತಾನು ಗಜರಾದಲ್ಲಿ ವಾಸಮಾಡಿದನು.

### ಸ್ತುತ್ಯಾರ್ಹನಾದ ಸಿಮೋನ

**14** 172ನೇ ವರ್ಷದಲ್ಲಿ ಅರಸ ದೆಮೆತ್ರಿಯನು, ತ್ರಿಫೋನಿನ ಮೇಲೆ ದಂಡೆತ್ತಿ ಹೋಗುವುದಕ್ಕೆ ಸಹಾಯ
ಪಡೆಯಲು ತನ್ನ ಸೈನ್ಯವನ್ನೆಲ್ಲ ಕೂಡಿಸಿಕೊಂಡು ಮೇದ್ಯವನ್ನು ಪ್ರವೇಶಿಸಿದನು. 2ದೆಮೆತ್ರಿಯನು ತನ್ನ ಗಡಿಯ
ಒಳಗೆ ಬಂದಿರುವನೆಂಬ ವರ್ತಮಾನವನ್ನು ಮೇದ್ಯರ ಮತ್ತು ಪರ್ಷಿಯರ ಅರಸನಾದ ಅರಸಕಿಯನು ಕೇಳಿ,
ಅವನನ್ನು ಜೀವಂತ ಹಿಡಿದು ತರುವುದಕ್ಕೆ ತನ್ನ ಸೇನಾಧಿಪತಿಗಳಲ್ಲೊಬ್ಬನನ್ನು ಕಳುಹಿಸಿದನು. 3ಅವನು
ಹೋಗಿ, ದೆಮೆತ್ರಿಯನ ಸೈನ್ಯವನ್ನು ಸದೆಬಡಿದು ಅವನನ್ನು ಹಿಡಿದುಕೊಂಡು ಬಂದು ಅರಸಕಿಯನಿಗೆ
ಒಪ್ಪಿಸಿದನು. ಅರಸಕಿಯನು ಅವನನ್ನು ಸೆರೆಯಲ್ಲಿಟ್ಟನು.

4 ಸಿಮೋನನ ಕಾಲದಲ್ಲೆಲ್ಲಾ ಸಮಾಧಾನವಿತ್ತು
ಜುದೇಯಕೆ
ಹಿತವನ್ನೇ ಬಯಸುತ್ತಾ ಬಂದನವನು
ತನ್ನ ಜನಕೆ
ಅವನ ಘನತೆ ಗೌರವಗಳಿಗೆ ದೊರಕಿತ್ತು
ಜನರ ಮೆಚ್ಚುಗೆ.
5 ಜೊಪ್ಪವನು ಬಂದರಾಗಿ ಮಾರ್ಪಡಿಸಿದವನು
ಅವನೇ
ಅದೇ ಹೆಬ್ಬಾಗಿಲಾಯಿತು ಭೂಮಧ್ಯ

ದ್ವೀಪಗಳಿಗೆ
ಮುಕುಟಪ್ರಾಯವಾಯಿತು ಅವನ
ವೀರಕೃತ್ಯಗಳಿಗೆ.
6 ರಾಷ್ಟ್ರದ ಮೇರೆಗಳನು ವಿಸ್ತರಿಸಿದನು
ಸ್ವಾಧೀನಪಡಿಸಿಕೊಂಡನು ಇಡೀ ನಾಡನು.
7 ಸೆರೆಹಿಡಿದು ತಂದನು ಅನೇಕ ಯುದ್ಧ
ಕೈದಿಗಳನು
ಅವನ ಕೈವಶವಾಯಿತು ಗಜರಾ, ಬೆತ್ಸೂರ,
ಹಾಗೂ ಕೋಟೆಯ ಆಡಳಿತವು.
ತೊಲಗಿಸಿದನು ಅಲ್ಲಿದ್ದ ಹೊಲಸನ್ನೆಲ್ಲಾ
ಪ್ರತಿಭಟಿಸುವವರಾರೂ ಅವನಿಗಿರಲಿಲ್ಲ.
8 ಸಾಗುವಳಿ ಮಾಡುತ್ತಿದ್ದರು ಜನರು
ಹೊಲಗಳನ್ನು ನೆಮ್ಮದಿಯಿಂದ
ಬೆಳೆಯನ್ನು ಪಡೆಯುತ್ತಿದ್ದರು
ಹುಲುಸಾಗಿ ಭೂಮಿಯಿಂದ
ಒಳ್ಳೊಳ್ಳೆ ಫಲಗಳು ದೊರಕುತ್ತಿದ್ದವು
ಬಯಲಿನ ಮರಗಳಿಂದ.
9 ಹಿರಿಯರು ಕುಳಿತುಕೊಳ್ಳುತ್ತಿದ್ದರು ಬೀದಿಯ
ಚೌಕಗಳಲಿ
ಶುಭಸಮಾಚಾರಗಳನೆ ಕುರಿತು
ಹರಟೆ ವೈಭವದಿಂದ ಮೆರೆದರು
ಸಮರವಸ್ತ್ರಗಳಲಿ.
10 ಆಹಾರ ಸಾಮಗ್ರಿಗಳನ್ನೊದಗಿಸಿದನು
ಎಲ್ಲ ಪಟ್ಟಣಗಳಿಗೆ
ಶಸ್ತ್ರಾಸ್ತ್ರಗಳನ್ನೇರ್ಪಡಿಸಿದನು ಅವುಗಳ
ರಕ್ಷಣೆಗೆ
ಅವ ಕೀರ್ತಿ ಹಬ್ಬಿತು ನಾಡಿನ ಕಟ್ಟಕಡೆಗೆ.
11 ಶಾಂತಿಸಮಾಧಾನವಿತ್ತು ನಾಡಿನಲ್ಲೆಲ್ಲಾ
ಆನಂದದಿಂದ ನಲಿದಾಡಿದರು
ಇಸ್ರಯೇಲರೆಲ್ಲಾ.
12 ಪ್ರತಿಯೊಬ್ಬನು ಕುಳಿತನು ತನ್ನ ದ್ರಾಕ್ಷಾಲತೆಯ,
ಅಂಜೂರ ಮರದ ನೆರಳಲೆ
ಬೆದರಿಕೆಯೊಡ್ಡುವವರಾರೂ ಇರಲಿಲ್ಲ
ಅವರಿಗೆ.
13 ದಂಡೆತ್ತಿ ಬರುವಂಥವರಾರೂ ಇರಲಿಲ್ಲ
ಸೋತುಹೋಗಿದ್ದರು ಅಂದಿನ
ರಾಜರುಗಳೆಲ್ಲಾ.
14 ದೀನದಲಿತರಿಗೆ ಧೈರ್ಯತುಂಬುತ್ತಿದ್ದನು,
ಅಧರ್ಮಿಗಳನು, ದುಷ್ಟರನು
ದಮನಮಾಡುತ್ತಿದ್ದನು.

15 ಧರ್ಮಶಾಸ್ತ್ರವನು ಕೈಗೊಳ್ಳುತ್ತಿದ್ದನು
ಆಸಕ್ತಿಯಿಂದ
ಅಲಂಕರಿಸಿದನು ದೇವಾಲಯವನು ನೂತನ
ಪ್ರಭೆಯಿಂದ
ಪವಿತ್ರಾಲಯಕೆ ಪಾತ್ರೋಪಕರಣಗಳನು
ಒದಗಿಸಿದನು ಉದಾರದಿಂದ.

16 ಯೋನಾತನನು ಕಾಲವಾದನೆಂದು ರೋಮಿಗೂ ಸ್ಪಾರ್ಟಗೂ ತಿಳಿದುಬಂದಾಗ ಅವರು ಬಹಳ
ವ್ಯಸನಪಟ್ಟರು. 17ಆದರೆ ಅವನಿಗೆ ಬದಲಾಗಿ ಅವನ ಅಣ್ಣ ಸಿಮೋನನು ಪ್ರಧಾನ ಯಾಜಕನಾಗಿದ್ದಾನೆಂದು
ಹಾಗು ಅವನೇ ಆ ನಾಡನ್ನೂ ಅದರ ಪಟ್ಟಣಗಳನ್ನೂ ಆಳುತ್ತಿದ್ದಾನೆಂದೂ ಗೊತ್ತಾಯಿತು. 18ಆಗ ಅವನ
ಸಹೋದರ ಯೂದ ಹಾಗು ಯೋನಾತನರೊಂದಿಗೆ ಸ್ಥಿರಗೊಳಿಸಿದ್ದ ಮಿತ್ರತ್ವವನ್ನು ಹೊಸದಾಗಿಸಲು
ಅವನಿಗೆ ತಾಮ್ರಪತ್ರಗಳನ್ನು ಬರೆದು ಕಳುಹಿಸಿದರು. 19ಆ ಪತ್ರಗಳನ್ನು ಜೆರುಸಲೇಮಿನಲ್ಲಿ ಸಭೆಯ ಮುಂದೆ
ಓದಲಾಯಿತು. 20ಸ್ಪಾರ್ಟನರು ಕಳುಹಿಸಿದ ಪತ್ರದ ಪ್ರತಿಯಿದು:

"ನಮ್ಮ ಸಹೋದರ ಹಾಗು ಪ್ರಧಾನ ಯಾಜಕ ಸಿಮೋನನಿಗೂ, ಹಿರಿಯರಿಗೂ, ಯಾಜಕರಿಗೂ,
ಮಿಕ್ಕ ಯೆಹೂದ್ಯ ಜನತೆಗೂ ಸ್ಪಾರ್ಟದ ಅಧಿಪತಿಗಳೂ ನಾಗರಿಕರೂ ಮಾಡುವ ವಂದನೆಗಳು!
21ನಮ್ಮ ಜನಗಳ ಬಳಿಗೆ ನೀವು ಕಳುಹಿಸಿದ ರಾಯಭಾರಿಗಳು ನಿಮ್ಮ ಗೌರವ ಪ್ರತಿಭೆಗಳನ್ನು ಕುರಿತು
ವರದಿಮಾಡಿದರು. ಅವರು ಬಂದದ್ದರಿಂದ ನಮಗೂ ಆನಂದವಾಯಿತು. 22ಅವರು ಹೇಳಿದ
ಸಂಗತಿಗಳನ್ನು ನಮ್ಮ ಜನಾಂಗದ ದಿನ ಚರ್ಯೆಯ ಗ್ರಂಥದಲ್ಲಿ ಹೀಗೆ ಬರೆದಿಟ್ಟಿದ್ದೇವೆ: 'ಯೆಹೂದ್ಯರ
ರಾಯಭಾರಿಗಳಾದ ಅಂತಿಯೋಕನ ಮಗ ನುಮೆನಿಯನೂ ಯಾಸೋನನ ಮಗ ಅಂತಿಪತರನೂ
ಅವರೊಂದಿಗಿದ್ದ ನಮ್ಮ ಸ್ನೇಹವನ್ನು ಪುನಶ್ಚೇತನಗೊಳಿಸುವುದಕ್ಕೆ ನಮ್ಮಲ್ಲಿಗೆ ಬಂದಿದ್ದರು. 23ಜನರು
ಅವರನ್ನು ಆದರದಿಂದ ಸತ್ಕರಿಸಿದ್ದನ್ನೂ ಹಾಗು ಅವರು ವರದಿಮಾಡಿದ್ದನ್ನೂ ಸ್ಪಾರ್ಟದ
ಸ್ಮರಣೆಯಲ್ಲಿ ಉಳಿಯಲೆಂದು ಅವುಗಳ ಪ್ರತಿಯನ್ನು ಸಾರ್ವಜನಿಕ ದಿನಚರ್ಯೆಯ ಗ್ರಂಥದಲ್ಲಿ
ಬರೆದಿಡಲು ಅನುಮೋದಿಸಿದರು. ಈ ವಿಷಯಗಳ ಪ್ರತಿಯನ್ನು ಮಾಡಿ, ಅದನ್ನು ಪ್ರಧಾನ ಯಾಜಕ
ಸಿಮೋನನಿಗೆ ಕಳುಹಿಸಲು ಅನುವಾದರು."

24 ಇದಾದ ತರುವಾಯ ಸಿಮೋನನು ರೋಮನರ ಸಂಗಡ ತಮ್ಮ ಸಂಬಂಧವನ್ನು
ಸ್ಥಿರಗೊಳಿಸುವುದಕ್ಕೆಂದು ಅರ್ಧ ಟನ್ ತೂಕದ ಬಂಗಾರದ ಗುರಾಣಿಯೊಂದನ್ನು ನುಮೆನಿಯನ
ಮುಖಾಂತರ ರೋಮಿಗೆ ಕಳುಹಿಸಿದನು.

25 ಜನರು ಇದನ್ನು ಕೇಳಿ, "ನಾವು ಸಿಮೋನನ ಮತ್ತು ಅವನ ಮಕ್ಕಳ ಉಪಕಾರವನ್ನು
ನೆನಪಿನಲ್ಲಿಡುವ ಬಗೆಯೆಂತು? 26ಬಲಶಾಲಿಗಳಾದ ಅವನು, ಅವನ ಸಹೋದರರು ಹಾಗು ಅವನ
ತಂದೆಯ ಮನೆಯವರು ಇಸ್ರಯೇಲರ ಶತ್ರುಗಳನ್ನು ಯುದ್ಧದಲ್ಲಿ ಓಡಿಸಿ, ಇಸ್ರಯೇಲರಿಗೆ ಸ್ವಾತಂತ್ರ್ಯವನ್ನು
ಸಂಪಾದಿಸಿಕೊಟ್ಟಿದ್ದಾರೆ," ಎಂದು ಮೆಚ್ಚಿಕೊಂಡರು. 27ಈ ಕೆಳಗೆ ಬರೆದಿರುವ ಮಾತುಗಳನ್ನು ತಾಮ್ರಪತ್ರಗಳ
ಮೇಲೆ ಬರೆದು ಸಿಯೋನ್ ಗುಡ್ಡದ ಮೇಲೆ ಕಂಬಕ್ಕೆ ಹಚ್ಚಿದರು. ಆ ಬರಹದ ಪ್ರತಿಯಿದು:

28 "172ನೇ ವರ್ಷದ ಭಾದ್ರಪದ ಮಾಸದ ಹದಿನೆಂಟನೆಯ ದಿನ, ಅಂದು ಸಿಮೋನನ
ಯಾಜಕತ್ವದ ಮೂರನೆಯ ವರ್ಷ, 'ಅಸರ ಮೇಳದಲ್ಲಿ, ಯಾಜಕರು, ಜನರು, ಜನಾಂಗದವರು,
ಸರದಾರರು ಮತ್ತು ನಾಡಿನ ಹಿರಿಯರು ನೆರೆದಿದ್ದ ಮಹಾಸಭೆಯಲ್ಲಿ, 29ನಮಗೆ ತಿಳಿಯಪಡಿಸಿದ ಸಂಗತಿ
ಏನೆಂದರೆ: ನಮ್ಮ ನಾಡಿನಲ್ಲಿ ಯುದ್ಧ ಪ್ರಸಂಗಗಳು ಒದಗಿದ ಕಾಲದಲ್ಲೆಲ್ಲಾ ನಮ್ಮ ದೇವಾಲಯವೂ
ಧರ್ಮವೂ ನೆಲೆಗೊಳ್ಳಲೆಂದು ರೋವಾರೀಬನ ಸಂತಾನದ ಮತ್ತಾತಿಯನ ಮಗ ಸಿಮೋನನೂ ಅವನ
ಸಹೋದರರೂ ತಮ್ಮನ್ನೇ ಗಂಡಾಂತರಗಳಿಗೆ ಗುರಿಮಾಡಿಕೊಂಡು, ತಮ್ಮ ಜನಾಂಗದ ಶತ್ರುಗಳನ್ನು
ಎದುರಿಸಿದರು. 30ಯೋನಾತನನು ಜನಾಂಗವನ್ನು ಒಂದುಗೂಡಿಸಿ, ಅವರ ಪ್ರಧಾನಯಾಜಕನಾಗಿ ದುಡಿದು,

ಮಡಿದು, ತನ್ನ ಪಿತೃಗಳ ಬಳಿಗೆ ಸೇರಿದನು. 31ನಾಡಿನ ಶತ್ರುಗಳು ನಾಡಿನ ಮೇಲೆ ದಂಡೆತ್ತಿ ಬಂದು,
ಅದನ್ನು ಪೂರ್ತಿ ನಾಶಗೊಳಿಸಬೇಕೆಂದು ಅವರ ಮಹಾದೇವಾಲಯದ ಮೇಲೆ ಕೈಯೆತ್ತಿದಾಗ, ಸಿಮೋನನು
ತಲೆಯೆತ್ತಿದನು. 32ತನ್ನ ಜನಾಂಗಕ್ಕಾಗಿ ಕಾದಾಡಿದನು. ತನ್ನ ಸ್ವಂತ ಆಸ್ತಿಯಿಂದ ಅಪಾರ ವೆಚ್ಚಮಾಡಿ, ತನ್ನ
ಜನಾಂಗದ ಶೂರಪುರುಷರಿಗೆ ಆಯುಧಗಳನ್ನು ಒದಗಿಸಿಕೊಟ್ಟನು. 33ಅವರಿಗೆ ಸಂಬಳವನ್ನು ಕೊಟ್ಟನು.
ಜುದೇಯದ ಪಟ್ಟಣಗಳನ್ನು ಹಾಗು ಜುದೇಯದ ಗಡಿನಾಡಿನಲ್ಲಿ ಮೊದಲು ಶತ್ರುಗಳ ಸನ್ನಾಹವಿದ್ದ
ಬೇತ್ಸೂರೆಯನ್ನೂ ಬಲಗೊಳಿಸಿದನು. 34ಅಲ್ಲಿ ಯೆಹೂದ್ಯರ ರಕ್ಷಣಾಸೈನ್ಯವನ್ನಿಟ್ಟನು. ಇದಲ್ಲದೆ, ಸಮುದ್ರದ
ದಡದಲ್ಲಿರುವ ಜೊಪ್ಪವನ್ನು ಮತ್ತು ಈ ಮುಂಚೆ ಶತ್ರುಗಳು ವಾಸಿಸುತ್ತಿದ್ದ ಅಜೋತದ ಗಡಿಯಲ್ಲಿರುವ
ಗಜರವನ್ನು ಭದ್ರಗೊಳಿಸಿದನು. ಅಲ್ಲಿ ಯೆಹೂದ್ಯರನ್ನು ಇರಿಸಿ, ಈ ಊರುಗಳ ಸುಧಾರಣೆಗೆ ಬೇಕಾದ
ಸಾಮಗ್ರಿಗಳನ್ನು ಅವುಗಳಲ್ಲಿಟ್ಟನು. 35ಜನರು ಸಿಮೋನನ ವಿಶ್ವಾಸವನ್ನೂ ಅವನು ತನ್ನ ಜನಾಂಗಕ್ಕೆ
ತರಬೇಕೆಂದಿದ್ದ ಗೌರವವನ್ನೂ ಮನಗಂಡರು. ಅವನು ಎಲ್ಲಾ ವಿಧದಲ್ಲಿ ತನ್ನ ಜನಾಂಗದ ಏಳಿಗೆಗಾಗಿ
ಉದ್ಯುಕ್ತನಾಗಿದ್ದುದನ್ನು ಹಾಗು ತನ್ನ ಜನಾಂಗಕ್ಕೆ ನ್ಯಾಯಾಸಕ್ತನಾಗಿಯೂ ಸತ್ಯಸಂಧನಾಗಿಯೂ
ನಡೆದುಕೊಳ್ಳುತ್ತಾ ಬಂದುದನ್ನು ಸ್ಮರಿಸಿ, ಅವನನ್ನು ತಮ್ಮ ನಾಯಕನನ್ನಾಗಿಯೂ
ಪ್ರಧಾನಯಾಜಕನನ್ನಾಗಿಯೂ ಮಾಡಿಕೊಂಡರು.

36 “ಆ ದಿನಗಳಲ್ಲಿ ಅವನು ಕೈಗೊಳ್ಳುತ್ತಿದ್ದ ಎಲ್ಲ ಕಾರ್ಯಗಳೂ ಸಫಲವಾಗುತ್ತಿದ್ದವು; ನಾಡಿನಲ್ಲೂ
ದಾವೀದನಗರದಲ್ಲೂ ಜೆರುಸಲೇಮಿನಲ್ಲೂ ಇದ್ದ ಅನ್ಯಜನರನ್ನು ಹೊರದೂಡಿದನು. ಏಕೆಂದರೆ ಅವರು
ಕೋಟೆಯಲ್ಲಿದ್ದುಕೊಂಡು, ಆಗಾಗ್ಗೆ ಅದರೊಳಗಿಂದ ಹೊರಬಿದ್ದು, ದೇವಾಲಯದ ಸುತ್ತಮುತ್ತಲು
ಹೊಲೆಮಾಡುತ್ತಾ ಅದರ ಶುದ್ಧತೆಗೆ ಭಂಗತರುತ್ತಿದ್ದರು. 37ಅಲ್ಲಿ ಯೆಹೂದ್ಯರನ್ನು ಇರಿಸಿದ್ದಲ್ಲದೆ, ನಾಡಿನ
ಮತ್ತು ನಗರದ ಸಂರಕ್ಷಣೆಗಾಗಿ ಅದನ್ನು ಭದ್ರಪಡಿಸಿ, ಜೆರುಸಲೇಮಿನ ಗೋಡೆಗಳನ್ನು ಎತ್ತರಿಸಿದನು.
38ಆದುದರಿಂದ ಅರಸ ದೆಮೆತ್ರಿಯನು ಅವನ ಪ್ರಧಾನಯಾಜಕತ್ವವನ್ನು ಸ್ಥಿರಗೊಳಿಸಿದನು; ತನ್ನ ಆಪ್ತ
ಮಿತ್ರರಲ್ಲೇ ಅವನನ್ನು ಒಬ್ಬನನ್ನಾಗಿ ಪರಿಗಣಿಸಿದನು. 39ಅವನನ್ನು ಬಹಳವಾಗಿ ಪುರಸ್ಕರಿಸಿದನು.
40ಏಕೆಂದರೆ ರೋಮನರು, ಯೆಹೂದ್ಯರನ್ನು ತಮ್ಮ ಮಿತ್ರರೆಂದೂ ಬಂಧುಗಳೆಂದೂ ಸಹೋದರರೆಂದೂ
ಕರೆದುದಲ್ಲದೆ, ಸಿಮೋನನು ಕಳುಹಿಸಿದ ರಾಯಭಾರಿಗಳನ್ನು ಗೌರವದಿಂದ ಬರಮಾಡಿಕೊಂಡರೆಂದು
ಅವನು ಕೇಳಿದ್ದನು.

41 “ಆದುದರಿಂದ ಯೆಹೂದ್ಯರು ಹಾಗು ಯಾಜಕರು ಒಮ್ಮತದಿಂದ ತೀರ್ಮಾನಿಸಿದುದು
ಏನೆಂದರೆ: ನಂಬಿಕೆಗೆ ಯೋಗ್ಯನಾದ ಪ್ರವಾದಿ ಒಬ್ಬನು ಎದ್ದು ಕಾಣುವವರೆಗೆ, ಸಿಮೋನನೇ ತಮ್ಮಲ್ಲಿ
ನಾಯಕನೂ ಪ್ರಧಾನಯಾಜಕನೂ ಆಗಿರಲಿ. 42ಅವನೇ ದಳವಾಯಿಯಾಗಿದ್ದು, ಪವಿತ್ರಾಲಯದ
ಮೇಲ್ವಿಚಾರಣೆ ನೋಡಿಕೊಳ್ಳಲಿ. ಅದಲ್ಲದೆ, ಜನರು ಮಾಡಬೇಕಾದ ಕೆಲಸಗಳನ್ನು ಅವರವರಿಗೆ ನೇಮಿಸಿ,
ಪ್ರಾಂತ್ಯಾಧಿಕಾರಿಗಳನ್ನೂ ಸೈನ್ಯಾಧಿಕಾರಿಗಳನ್ನೂ ಕೋಟೆಗಾರರನ್ನೂ ಗೊತ್ತುಮಾಡಲಿ.
43ಮಹಾಪವಿತ್ರಾಲಯದ ಮೇಲ್ವಿಚಾರಣೆ ಅವನ ಕೈಯಲ್ಲಿರಲಿ; ಎಲ್ಲರೂ ಅವನು ಹೇಳಿದಂತೆ ಕೇಳಲಿ.
ನಾಡಿನ ಎಲ್ಲ ಅಧಿಕೃತ ಪತ್ರ ವ್ಯವಹಾರಗಳು ಅವನ ಹೆಸರಿನಲ್ಲಿಯೇ ಲಿಖಿತವಾಗಲಿ. ಅವನು ರಾಜವಸ್ತ್ರವನ್ನು
ಧರಿಸಿಕೊಂಡು ಬಂಗಾರದ ಆಭರಣಗಳನ್ನು ಹಾಕಿಕೊಳ್ಳಲಿ.

44 “ಜನತೆಯಲ್ಲಾಗಲಿ ಯಾಜಕರಲ್ಲಾಗಲಿ ಯಾರೂ ಯಾವ ವಿಷಯದಲ್ಲಿಯೂ ಈ
ತೀರ್ಮಾನವನ್ನು ಅಲ್ಲಗಳೆಯಬಾರದು. ಅವನು ಕೊಡಲಿರುವ ಅಪ್ಪಣೆಯನ್ನು ಎದುರಿಸಬಾರದು. ಅವನನ್ನು
ಬಿಟ್ಟು ಯಾರೂ ಸಭೆಯನ್ನು ಕೂಡಿಸಬಾರದು. ಅವನಲ್ಲದೆ ಯಾರೂ ರಾಜವಸ್ತ್ರಧಾರಣೆ ಮಾಡಬಾರದು.
ಬಂಗಾರದ ಒಡ್ಯಾಣವನ್ನು ಹಾಕಿಕೊಳ್ಳಬಾರದು. 45ಯಾರಾದರೂ ಈ ತೀರ್ಮಾನವನ್ನು ಮೀರಿ ನಡೆದರೆ
ಅಂಥವನು ಶಿಕ್ಷೆಗೆ ಗುರಿಯಾಗಬೇಕು. 46ಸಿಮೋನನು ಈ ಮಾತುಗಳಿಗನುಸಾರ ನಡೆದಂತೆ ಅವನಿಗಾಗಿ
ವ್ಯವಸ್ಥೆಮಾಡಲು ಎಲ್ಲ ಜನರೂ ಸಮ್ಮತಿಸಿದರು. 47ಸಿಮೋನನು ಇದೆಲ್ಲವನ್ನೂ ಅಂಗೀಕರಿಸಿ, ಪ್ರಧಾನ
ಯಾಜಕರ ಪಾಲಕನೂ ದಳವಾಯಿಯೂ ಆಗಿರಲೂ ಎಲ್ಲರ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲೂ ಒಪ್ಪಿದನು.”

48 ಈ ಬರಹವನ್ನು ತಾಮ್ರಪತ್ರಗಳ ಮೇಲೆ ಬರೆದು ಪವಿತ್ರಾಲಯದ ಆವರಣದಲ್ಲಿ ಎಲ್ಲರಿಗೂ
ಕಾಣುವ ಸ್ಥಳದಲ್ಲಿ ಇರಿಸಬೇಕೆಂದು ಅವರು ಆಜ್ಞಾಪಿಸಿದರು. 49ಮಾತ್ರವಲ್ಲದೆ, ಅವು ಸಿಮೋನನ ಮತ್ತು

ಅವನ ಮಕ್ಕಳ ಹತ್ತಿರವೂ ಇರುವಂತೆ ಅವುಗಳ ಪ್ರತಿಗಳನ್ನು ಖಜಾನೆಯ ಕೋಣೆಯಲ್ಲಿ ಇರಿಸಬೇಕೆಂದು ಆಜ್ಞಾಪಿಸಿದರು.

### ಸಿಮೋನನ ಬೆಂಬಲಕ್ಕಾಗಿ 7ನೇ ಅಂತಿಯೋಕನ ಕೋರಿಕೆ

**15** ಅರಸ ದೆಮೆತ್ರಿಯನ ಮಗ ಅಂತಿಯೋಕನು, ಯಾಜಕನೂ ಯೆಹೂದ್ಯರ ಜನಪಾಲಕನೂ ಆಗಿದ್ದ
ಸಿಮೋನನಿಗೂ ಇಡೀ ಜನಾಂಗಕ್ಕೂ, ಸಮುದ್ರದ ದ್ವೀಪಗಳಿಂದ ಪತ್ರಗಳನ್ನು ಕಳುಹಿಸಿದನು. 2ಅವುಗಳಲ್ಲಿದ್ದ
ಸಂಗತಿ ಈ ವಿಧವಾಗಿದ್ದಿತು:

"ಪ್ರಧಾನಯಾಜಕನೂ ಜನಪಾಲಕನೂ ಆದ ಸಿಮೋನನಿಗೂ ಯೆಹೂದ್ಯ ಜನಾಂಗಕ್ಕೂ ಅರಸ
ಅಂತಿಯೋಕನು ಮಾಡುವ ಅಭಿವಂದನೆಗಳು! 3ಕೆಲವು ಜನ ಪುಂಡರು ನಮ್ಮ ಪೂರ್ವಜರ ರಾಜ್ಯವನ್ನು
ತಮ್ಮ ವಶಮಾಡಿಕೊಂಡಿದ್ದಾರೆ; ಆ ರಾಜ್ಯವನ್ನು ಪುನಃ ತೆಗೆದುಕೊಂಡು ಅದನ್ನು ಪೂರ್ವಸ್ಥಿತಿಗೆ
ತರಬೇಕೆಂಬುದು ನನ್ನ ಉದ್ದೇಶವಾಗಿದೆ. ಅದಕ್ಕಾಗಿ ವಿದೇಶಿಯ ಸೈನಿಕರ ಒಂದು ದಂಡನ್ನು ಕೂಡಿಸಿದ್ದೇನೆ
ಮತ್ತು ಯುದ್ಧದ ಹಡಗುಗಳನ್ನೂ ತಯಾರಿಸಿಕೊಂಡಿದ್ದೇನೆ. 4ಮೇಲಾಗಿ, ನಮ್ಮ ದೇಶವನ್ನು ನಾಶಮಾಡಿ,
ರಾಜ್ಯದಲ್ಲಿ ಅನೇಕ ನಗರಗಳನ್ನು ಹಾಳುಗೈದಿರುವವರನ್ನು ದಂಡಿಸುವುದಕ್ಕಾಗಿ ಆ ದೇಶದಲ್ಲಿ
ಕಾಲಿಡಬೇಕೆಂದು ನಾನು ಮನಸ್ಸು ಮಾಡಿದ್ದೇನೆ. 5ಆದುದರಿಂದ ನನ್ನ ಹಿಂದೆ ರಾಜ್ಯವಾಳಿದ ಅರಸರುಗಳು
ಯಾವ ಕರ, ಕಂದಾಯ, ಕಾಣಿಕೆಗಳನ್ನು ನಿನಗೆ ಬಿಟ್ಟುಕೊಟ್ಟಿರುವರೋ ಅವೆಲ್ಲವುಗಳನ್ನು ನಾನೂ
ಬಿಟ್ಟುಕೊಟ್ಟಿರುವೆನು. 6ನಿನ್ನ ನಾಡಿಗಾಗಿ ಬೇಕಾದ ನಾಣ್ಯಗಳನ್ನು ನಿನ್ನ ಮುದ್ರೆಯಿಂದಲೇ
ತಯಾರಿಸಿಕೊಳ್ಳುವಂತೆ ನಿನಗೆ ಅನುಮತಿ ಕೊಡುತ್ತೇನೆ. 7ಜೆರುಸಲೇಮ್ ಹಾಗು ಮಹಾದೇವಾಲಯವು
ಸ್ವತಂತ್ರವಾಗಿರಬೇಕು. ನೀನು ತಯಾರಿಸಿಕೊಂಡ ಆಯುಧಗಳೂ ನೀನು ಕಟ್ಟಿಸಿದ ಮತ್ತು ಈಗ ನಿನ್ನ
ವಶದಲ್ಲಿರುವ ದುರ್ಗಗಳೂ ನಿನ್ನವು ಆಗಿಯೇ ಇರಲಿ. 8ಈಗ ಅರಸನಿಗೆ ಸಲ್ಲತಕ್ಕದ್ದೂ, ಮುಂದೆ
ಎಂದೆಂದಿಗೂ ಅವನಿಗೆ ಸಲ್ಲಬೇಕಾದದ್ದೂ ಎಲ್ಲವೂ ನಿನಗೇ ಸಂದಾಯವಾಗಲಿ. 9ಮೇಲಾಗಿ ನಾವು ನಮ್ಮ
ರಾಜ್ಯವನ್ನು ಸ್ಥಿರಗೊಳಿಸಿದನಂತರ ನಿನ್ನ ಕೀರ್ತಿಯು ಜಗತ್ತಿನಲ್ಲೆಲ್ಲಾ ಬೆಳಗುವಂತೆ ನಿನ್ನನ್ನೂ ನಿನ್ನ
ಜನಾಂಗವನ್ನೂ ಪವಿತ್ರಾಲಯವನ್ನೂ ಪುರಸ್ಕರಿಸುತ್ತೇವೆ."

10 174ನೇ ವರ್ಷ ಅಂತಿಯೋಕನು ಹೊರಟು ತನ್ನ ಪೂರ್ವಜರ ನಾಡಿಗೆ ಬಂದನು. ಎಲ್ಲ
ಸೈನಿಕರೂ ಅವನನ್ನು ಕೂಡಿಕೊಂಡರು; ತ್ರಿಫೋನನ ಹತ್ತಿರ ಕೆಲವೇ ಜನರು ಉಳಿದುಕೊಂಡರು. 11ಅರಸ
ಅಂತಿಯೋಕನು ಅವನನ್ನು ಬೆನ್ನಟ್ಟಿದ್ದರಿಂದ ಅವನು ಪಲಾಯನ ಮಾಡುತ್ತಾ ಸಮುದ್ರದ ಬಳಿಯಲ್ಲಿರುವ
ಡೋರಕ್ಕೆ ಬಂದನು. 12ಏಕೆಂದರೆ ಕಷ್ಟಗಳು ತನ್ನ ಮೇಲೆ ಬಂದೆರಗಿವೆ ಎಂಬುದನ್ನೂ ತನ್ನ ಸೈನಿಕರು
ತನ್ನನ್ನು ಬಿಟ್ಟು ಹೋದರೆಂಬುದನ್ನೂ ಅವನು ಅರಿತಿದ್ದನು. 13ಅಂತಿಯೋಕನು ಡೋರದ ಎದುರಾಗಿ
ಪಾಳೆಯ ಮಾಡಿದನು. ಅವನ ಬಳಿಯಲ್ಲೇ ಒಂದು ಲಕ್ಷ ಇಪ್ಪತ್ತು ಸಾವಿರ ಯೋಧರೂ ಎಂಟು ಸಾವಿರ
ರಾಹುತರೂ ಇದ್ದರು. 14ಅವನು ಪಟ್ಟಣವನ್ನು ಸುತ್ತಲೂ ಮುತ್ತಿದನು. ಹಡಗು ಪಡೆಯು ಸಮುದ್ರದ
ಮೇಲಿಂದ ಹಲ್ಲೆಯಲ್ಲಿ ಕೂಡಿಕೊಂಡಿತು. ಹೀಗೆ ಅವರು ಭೂಮಿಯ ಕಡೆಯಿಂದಲೂ ಸಮುದ್ರದ
ಕಡೆಯಿಂದಲೂ ಪಟ್ಟಣವನ್ನು ಮುತ್ತಿ, ಹೊರಗೆ ಹೋಗುವುದಕ್ಕಾಗಲಿ ಒಳಗೆ ಬರಲಿಕ್ಕಾಗಲಿ ಯಾರಿಗೂ
ಅವಕಾಶ ಕೊಡಲಿಲ್ಲ.

15 ನುಮೆನಿಯನು ಹಾಗು ಅವನ ಸಂಗಡಿಗರು ರೋಮಿನಿಂದ ಅರಸರುಗಳಿಗೂ ದೇಶಗಳಿಗೂ
ಪತ್ರಗಳನ್ನು ತೆಗೆದುಕೊಂಡು ಬಂದರು. ಅವುಗಳಲ್ಲಿ ಹೀಗೆ ಬರೆದಿತ್ತು:

16 "ರಾಜನಾದ ಪ್ತೊಲೆಮೇಯನಿಗೆ ಮುಖ್ಯಾಧಿಕಾರಿಯಾದ ಲೂಸ್ಯನು ಮಾಡುವ
ಅಭಿವಂದನೆಗಳು! 17ತರುವಾಯ, ಹಿಂದಿನ ಮೈತ್ರಿಯನ್ನೂ ಸಂಬಂಧವನ್ನೂ ನೂತನಗೊಳಿಸುವುದಕ್ಕೆ
ಸಿಮೋನನಿಂದಲೂ ಯೆಹೂದ್ಯ ಜನರಿಂದಲೂ ಯೆಹೂದ್ಯ ರಾಯಭಾರಿಗಳು ನಮ್ಮ ಸ್ನೇಹಿತರಂತೆ ಹಾಗು
ಸಹ ಪಕ್ಷದವರಂತೆ ನಮ್ಮ ಬಳಿಗೆ ಬಂದರು. 18ಮೇಲಾಗಿ, ಅರ್ಧ ಟನ್ ತೂಕದ ಬಂಗಾರದ
ಗುರಾಣಿಯನ್ನು ತಂದರು. 19ಆದುದರಿಂದ ನಾವು ಆಯಾ ಅರಸುಗಳಿಗೂ ದೇಶಗಳವರಿಗೂ ಪತ್ರ ಬರೆದು

ನೀವಾರೂ ಅವರಿಗೆ ಕೇಡು ಬಗೆಯಬಾರದು, ಅವರೊಂದಿಗೂ ಅವರ ಪಟ್ಟಣಗಳ ಮತ್ತು ದೇಶದ ಮೇಲೆಯೂ ಯುದ್ಧ ಹೂಡಬಾರದು; ಅವರೊಂದಿಗೆ ಯುದ್ಧ ಮಾಡುವವರ ಪಕ್ಷವಹಿಸಬಾರದು ಎಂದು ತೀರ್ಮಾನಿಸಿದೆವು. 20ಇದಲ್ಲದೆ, ಅವರು ಕಳುಹಿಸಿದ ಗುರಾಣಿಯನ್ನು ಸ್ವೀಕರಿಸುವುದು ನಮಗೆ ಉಚಿತವೆನಿಸಿತು. 21ಆದುದರಿಂದ ಪುಂಡರು ಯಾರಾದರೂ ಅವರ ದೇಶದಿಂದ ನಿಮ್ಮ ಕಡೆಗೆ ಓಡಿಬಂದಿದ್ದರೆ ಅವರನ್ನು ಪ್ರಧಾನಯಾಜಕ ಸಿಮೋನನಿಗೆ ಒಪ್ಪಿಸಿಕೊಡಿ; ಅವನು ತಮ್ಮ ನಿಯಮದ ಪ್ರಕಾರ ಅವರನ್ನು ದಂಡಿಸಲಿ."

22 ಇದೇ ಸಂಗತಿಯನ್ನು ಅವನು, ಅರಸ ದೆಮೆತ್ರಿಯನಿಗೂ ಅತ್ತಲ, ಅರಥಿ, ಆರ್ಸಕಿ ಎಂಬ ರಾಜರಿಗೂ ನಾನಾ ದೇಶಗಳಿಗೂ ಬರೆದನು; 23ಅವು ಯಾವುವೆಂದರೆ, ಸಂಪ್ಸಕೆ, ಸ್ಪಾರ್ಟರದೇಶ, ದೀಲೊಸ್, ಮಿಂದೊಸ್, ಸಿಕ್ಯೋನ್, ಕಾರಿಯ, ಸಾಮೊಸ್, ಪಂಫೀಲಿಯ, ಲೀಸಿಯ, ಹಲಿಕಾರ್ನಸಸ್ಸ್, ಕೋಸ್, ಸೀದೆ, ಅರಡ, ರೋದ, ಫಸೇಲಿ, ಗೊರ್ತುನ, ಕ್ನೀದ, ಸೈಪ್ರಸ್, ಸಿರೇನ್ ಇವುಗಳೇ. 24ಅದರ ಪ್ರತಿಯನ್ನು ಪ್ರಧಾನ ಯಾಜಕ ಸಿಮೋನನಿಗೆ ಕಳುಹಿಸಿದನು.

ಸಿಮೋನನಿಂದ ಬೇರ್ಪಡೆಯಾದ ಅಂತಿಯೋಕ

25 ಅರಸ ಅಂತಿಯೋಕನು ಎರಡನೆಯ ಸಲ ಡೋರದ ಎದುರು ಪಾಳೆಯ ಮಾಡಿಕೊಂಡು ಪ್ರತಿನಿತ್ಯವೂ ತನ್ನ ಸೈನ್ಯವನ್ನು ಅದರ ಮೇಲೆ ಬಿಡುತ್ತಾ ಯುದ್ಧಯಂತ್ರಗಳನ್ನು ಹೂಡುತ್ತಾ ತ್ರಿಫೋನನು ಒಳಗೂ ಹೊರಗೂ ಹೋಗದಂತೆ ಅದನ್ನು ಮುಚ್ಚಿಬಿಟ್ಟನು. 26ಸಿಮೋನನು ಅವನ ಪಕ್ಷದವರಾಗಿ ಕಾದಾಡಲು ಆಯ್ಕೆಯಾದ ಎರಡು ಸಾವಿರ ಕಾಲಾಳುಗಳನ್ನೂ ಬಹಳ ಬೆಳ್ಳಿ ಬಂಗಾರ ಮತ್ತು ಯುದ್ಧ ಸಾಧನಗಳನ್ನೂ ಕಳುಹಿಸಿದನು. 27ಆದರೆ ಅಂತಿಯೋಕನು ಅವುಗಳನ್ನು ಸ್ವೀಕರಿಸಲಿಲ್ಲ. 28ಮಾತ್ರವಲ್ಲ, ಹಿಂದೆ ಮಾಡಿದ ಒಡಂಬಡಿಕೆಯನ್ನು ಮುರಿದು ಅವನಿಗೆ ವಿಮುಖನಾದನು. ತರುವಾಯ ತನ್ನ ಸ್ನೇಹಿತರಲ್ಲಿ ಒಬ್ಬನಾದ ಅಥೆನೋಬಿಯನೆಂಬವನನ್ನು ಅವನ ಸಂಗಡ ಈ ರೀತಿ ಮಾತಾಡಲು ಕಳುಹಿಸಿದನು. "ನನ್ನ ರಾಜ್ಯದ ಪಟ್ಟಣಗಳಾಗಿರುವ ಜೊಪ್ಪ, ಗಜರ, ಜೆರುಸಲೇಮಿನ ಕೋಟೆ ಇವುಗಳನ್ನು ನಿಮ್ಮ ವಶದಲ್ಲಿಟ್ಟು ಕೊಂಡಿರುವಿರಿ. 29ಅದು ಮಾತ್ರವಲ್ಲದೆ, ಅವುಗಳ ಸುತ್ತಲಿನ ಪ್ರದೇಶಗಳನ್ನು ಹಾಳುಮಾಡಿ, ದೇಶದಲ್ಲಿ ಬಹಳ ಹಾನಿಮಾಡಿದ್ದೀರಿ ಮತ್ತು ನನ್ನ ರಾಜ್ಯದಲ್ಲಿರುವ ಅನೇಕ ಪಟ್ಟಣಗಳನ್ನು ನಿಮ್ಮ ಅಧೀನದಲ್ಲಿಟ್ಟುಕೊಂಡಿದ್ದೀರಿ. 30ನೀವು ಹಿಡಿದಿಟ್ಟುಕೊಂಡಿರುವ ಪಟ್ಟಣಗಳನ್ನೆಲ್ಲ ಈಗ ನಮಗೆ ಒಪ್ಪಿಸಿರಿ; ಅದು ಮಾತ್ರವಲ್ಲದೆ ಜುದೇಯದ ಗಡಿಯ ಆಚೆಯಲ್ಲಿ ನೀವು ನಿಮ್ಮ ಅಧೀನದಲ್ಲಿ ಇಟ್ಟುಕೊಂಡಿರುವ ಎಲ್ಲ ಸ್ಥಳಗಳ ಕಪ್ಪವನ್ನೂ ನಮಗೆ ಒಪ್ಪಿಸಿರಿ. 31ಇಲ್ಲದಿದ್ದರೆ, ಅವುಗಳ ಬದಲಾಗಿ 17,000 ಕಿಲೋಗ್ರಾಂ ಬೆಳ್ಳಿಯನ್ನು ಹಾಗು ನೀವು ಮಾಡಿದ ನಷ್ಟದ ನಿಮಿತ್ತ ಪಟ್ಟಣಗಳ ಕಪ್ಪದ ರೂಪದಲ್ಲಿ ಬೇರೆ 17,000 ಕಿಲೋಗ್ರಾಂ ಬೆಳ್ಳಿಯನ್ನೂ ಕೊಡಿ; ಇಲ್ಲವಾದರೆ ನಾವು ಬಂದು ನಿಮ್ಮ ಮೇಲೆ ಯುದ್ಧಮಾಡುತ್ತೇವೆ."

32 ಅರಸನ ಸ್ನೇಹಿತನಾದ ಅಥೆನೋಬಿಯನು ಜೆರುಸಲೇಮಿಗೆ ಬಂದು, ಅಲ್ಲಿ ಸಿಮೋನನ ವೈಭವವನ್ನೂ ಬೆಳ್ಳಿ ಬಂಗಾರದ ಪಾತ್ರೆಗಳಿಂದ ತುಂಬಿದ ಭೋಜನಶಾಲೆಯನ್ನೂ ಅವನ ಪರಿಚಾರಕರ ಸಮೂಹವನ್ನೂ ಕಂಡು ಆಶ್ಚರ್ಯಚಕಿತನಾದನು. 33ತರುವಾಯ ಅರಸನ ಮಾತುಗಳನ್ನು ತಿಳಿಸಿದನು. ಸಿಮೋನನು ಉತ್ತರಕೊಟ್ಟು, "ಬೇರೆಯವರ ಭೂಮಿಯನ್ನಾಗಲಿ, ಪರರಿಗೆ ಸೇರಿದ ಯಾವುದನ್ನಾಗಲಿ ನಾವು ತೆಗೆದುಕೊಂಡಿಲ್ಲ; ನಮ್ಮ ಪೂರ್ವಜರ ಸೊತ್ತನ್ನೇ ತೆಗೆದುಕೊಂಡಿದ್ದೇವೆ. 34ಅದು ಅನ್ಯಾಯವಾಗಿ ಕೆಲವು ವೇಳೆ ಶತ್ರುಗಳ ಕೈಸೇರಿತ್ತು; ಆದರೆ ಈಗ ಅನುಕೂಲವಿದ್ದುದರಿಂದ ನಮ್ಮ ಮತ್ತು ನಮ್ಮ ಪೂರ್ವಜರ ಸೊತ್ತನ್ನು ಸುಭದ್ರವಾಗಿ ಇಟ್ಟುಕೊಂಡಿದ್ದೇವೆ. 35ಜೊಪ್ಪ, ಗಜರ, ಇವುಗಳನ್ನು ಕುರಿತು ಕೇಳುತ್ತೀಯೋ? ಅಲ್ಲಿಯವರು ನಮ್ಮ ನಾಡನ್ನೆಲ್ಲಾ ಹಾಳುಮಾಡಿ, ನಮ್ಮ ಜನರಿಗೆ ಬಹಳ ನಷ್ಟವನ್ನುಂಟುಮಾಡಿದ್ದಾರೆ. ಆದರೂ ಅವುಗಳ ಪರವಾಗಿ 3400 ಕಿಲೋಗ್ರಾಂ ಬೆಳ್ಳಿಯನ್ನು ಕೊಡುತ್ತೇನೆ," ಎಂದು ಹೇಳಿದನು.

36 ಅಥೆನೋಬಿಯನು ಮರುಮಾತೊಂದನ್ನೂ ಆಡದೆ, ಕುಪಿತನಾಗಿ ಅರಸನ ಬಳಿಗೆ ಬಂದು ಸಿಮೋನನು ಆಡಿದ ಮಾತುಗಳನ್ನೂ ಅವನ ವೈಭವವನ್ನೂ ತಾನು ಅಲ್ಲಿ ಕಂಡದ್ದೆಲ್ಲವನ್ನೂ ತಿಳಿಸಿದನು. 37ಅರಸನು ರೌದ್ರಾವೇಶಗೊಂಡನು. ಇತ್ತ ತ್ರಿಫೋನನು ಹಡಗು ಹತ್ತಿ ಒರ್ಥೋಸಿಯಕ್ಕೆ ಓಡಿಹೋದನು.

38 ಅರಸನು ಕೆಂಡೆಬಿಯನನ್ನು ಸಮುದ್ರ ಕರಾವಳಿಯ ನಾಯಕನನ್ನಾಗಿ ನೇಮಿಸಿ ಅವನಿಗೆ ಕಾಲ್ದಳವನ್ನೂ ಕುದುರೆದಳವನ್ನೂ ಕೊಟ್ಟು, 39ಜುದೇಯದ ಎದುರು ಪಾಳೆಯಮಾಡುವಂತೆಯೂ ಕಿದ್ರೋನನ್ನು ಕಟ್ಟಿ, ಹೆಬ್ಬಾಗಿಲುಗಳನ್ನು ಭದ್ರಪಡಿಸಿ, ಅಲ್ಲಿಯ ಜನರೊಂದಿಗೆ ಯುದ್ಧ ಹೂಡುವಂತೆಯೂ ಆಜ್ಞಾಪಿಸಿದನು. 40ತಾನು ತ್ರಿಫೋನನನ್ನು ಬೆನ್ನಟ್ಟಿದನು. ಕೆಂಡೆಬಿಯನು ಯಮ್ನಿಯಕ್ಕೆ ಬಂದು ಅಲ್ಲಿಯ ಜನರನ್ನು ಕಾಡುವುದಕ್ಕೂ ಜುದೇಯದಲ್ಲಿ ನುಗ್ಗಿ ಅಲ್ಲಿಯ ಜನರನ್ನು ಹಿಡಿಯುವುದಕ್ಕೂ ಕೊಲ್ಲುವುದಕ್ಕೂ ಆರಂಭಿಸಿದನು. 41ಕೆಂಡೆಬಿಯನು ಅರಸನ ಅಪ್ಪಣೆಯ ಮೇರೆಗೆ ಕಿದ್ರೋನನ್ನು ಕಟ್ಟಿ, ಅಲ್ಲಿ ರಾಹುತರನ್ನೂ ಕಾಲಾಳುಗಳನ್ನೂ ಇಟ್ಟು, ಅವರು ಅಲ್ಲಿಂದ ಹೊರಬಿದ್ದು, ಜುದೇಯದ ಹಾದಿಗಳ ಮೇಲೆ ದಾಳಿಮಾಡುವಂತೆ ವ್ಯವಸ್ಥೆ ಮಾಡಿದನು.

### ಸಿಮೋನನ ಮಕ್ಕಳು ಕೆಂಡೆಬಿಯನ ಮೇಲೆ ಗಳಿಸಿದ ಜಯ

**16** ಯೊವಾನನು ಜಗರದಿಂದ ಬಂದು, ಕೆಂಡೆಬಿಯನು ಏನು ನಡೆಸಿದ್ದಾನೆ ಎಂಬುದನ್ನು ತನ್ನ ತಂದೆ ಸಿಮೋನನಿಗೆ ತಿಳಿಸಿದನು. 2ಸಿಮೋನನು ತನ್ನಿಬ್ಬರು ಹಿರಿಯ ಮಕ್ಕಳಾದ ಯೂದನನ್ನೂ ಯೊವಾನ್ನನನ್ನೂ ಕರೆದು, ಅವರಿಗೆ, "ನಾನೂ ನನ್ನ ಸಹೋದರರೂ ನನ್ನ ತಂದೆಯ ಮನೆಯವರೂ ನಮ್ಮ ಯೌವನಾರಭ್ಯ ಈ ದಿನದವರೆಗೂ ಇಸ್ರಯೇಲರ ಯುದ್ಧಗಳನ್ನು ನಡೆಸುತ್ತಾ ಬಂದಿದ್ದೇವೆ. ಅನೇಕಾವರ್ತಿ ನಾವು ಇಸ್ರಯೇಲರನ್ನು ಬಿಡುಗಡೆಮಾಡಲು ಮಾಡಿದ ನಮ್ಮ ಯತ್ನಗಳೆಲ್ಲವೂ ಕೈಗೂಡಿದವು. 3ನಾನೀಗ ಮುದುಕನಾಗಿದ್ದೇನೆ. ನೀವಾದರೋ ದೇವರ ದಯೆಯಿಂದ ಪ್ರಾಯಕ್ಕೆ ಬಂದಿದ್ದೀರಿ. ನೀವು ನನ್ನ ಮತ್ತು ನನ್ನ ತಮ್ಮನ ಸ್ಥಳದಲ್ಲಿದ್ದು ನಮ್ಮ ಜನಾಂಗಕ್ಕಾಗಿ ಹೋಗಿ ಯುದ್ಧಮಾಡಿ; ಪರಲೋಕದಿಂದ ಬರುವ ಸಹಾಯವು ನಿಮ್ಮ ಸಂಗಡ ಇರಲಿ," ಎಂದು ಹೇಳಿದನು.

4 ಯೊವಾನ್ನನು ಆ ನಾಡಿನಿಂದ ಇಪ್ಪತ್ತು ಸಾವಿರ ಯೋಧರನ್ನೂ ರಾಹುತರನ್ನೂ ಆಯ್ದುಕೊಂಡನು. ಅವರು ಕೆಂಡೆಬಿಯನ ವಿರೋಧವಾಗಿ ಹೊರಟು ಮೋದೀನದಲ್ಲಿ ತಂಗಿದರು. 5ಬೆಳಿಗ್ಗೆ ಎದ್ದು ಬಂದು ನೋಡಲಾಗಿ ಕಾಲಾಳುಗಳ ಮತ್ತು ಕುದುರೆ ಸವಾರರ ಮಹಾಸೈನ್ಯವೊಂದು ಅವರ ಎದುರಿಗೆ ಬರುವುದು ಕಾಣಿಸಿತು. 6ಆದರೆ ಇಬ್ಬಣಗಳ ನಡುವೆ ಹಳ್ಳವೊಂದಿತ್ತು. ಯೊವಾನ್ನನೂ ಅವನ ಜನರೂ ಶತ್ರುವಿನ ಎದುರಿಗೆ ಪಾಳೆಯ ಮಾಡಿದರು. ಅವನ ಜನರು ಹಳ್ಳವನ್ನು ದಾಟಿ ಹೋಗಲು ಅಂಜುತ್ತಿರುವುದನ್ನು ಕಂಡು ತಾನೇ ಮೊದಲು ಅದನ್ನು ದಾಟಿ ಹೋದನು. ಜನರು ಅದನ್ನು ಕಂಡು ತಾವೂ ಅವನ ಹಿಂದೆ ದಾಟಿದರು. 7ಜನರನ್ನು ಎರಡು ಭಾಗವಾಗಿ ವಿಂಗಡಿಸಿ, ಕಾಲಾಳುಗಳ ನಡುವೆ ರಾಹುತರನ್ನು ನಿಲ್ಲಿಸಿದನು. ಆದರೆ ಶತ್ರುಗಳ ರಾಹುತರು ಹೇರಳವಾಗಿದ್ದರು. 8ಅವರು ಕೊಂಬುಗಳನ್ನು ಊದಿದರು. ಕೆಂಡೆಬಿಯನೂ ಅವನ ಸೈನ್ಯವೂ ಪರಾಜಯ ಹೊಂದಿದರು. ಅವರಲ್ಲಿ ಅನೇಕರು ಗಾಯಗೊಂಡು ನೆಲಕ್ಕುರುಳಿದರು; ಉಳಿದವರು ದುರ್ಗಗಳಿಗೆ ಓಡಿಹೋದರು. 9ಅದೇ ಸಮಯಕ್ಕೆ ಯೊವಾನ್ನನ ತಮ್ಮ ಯೂದನೂ ಗಾಯಗೊಂಡನು. ಆದರೆ ಯೊವಾನ್ನನು, ಕೆಂಡೆಬಿಯನು ಕಟ್ಟಿದ್ದ ಕಿದ್ರೋನಿನವರೆಗೆ ಬರುವ ತನಕ ಅವರನ್ನು ಬೆನ್ನಟ್ಟಿದನು. 10ಅವರು ಅಜೋತಿನ ಅಡವಿಯಲ್ಲಿದ್ದ ಬುರುಜುಗಳಿಗೆ ಓಡಿಹೋದರು. ಅವನು ಆ ಊರನ್ನು ಬೆಂಕಿಯಿಂದ ಸುಟ್ಟುಬಿಟ್ಟನು. ಅವರಲ್ಲಿ ಸುಮಾರು ಎರಡು ಸಾವಿರ ಜನರು ಸತ್ತರು. ಯೊವಾನ್ನನು ಸಮಾಧಾನದಿಂದ ಜುದೇಯಕ್ಕೆ ಹಿಂದಿರುಗಿದನು.

### ಸಿಮೋನನ ಮತ್ತು ಅವನ ಇಬ್ಬರು ಮಕ್ಕಳ ವಧೆ

11 ಅಬೂಬನ ಮಗ ಪ್ತೊಲೆಮೇಯನು ಜೆರಿಕೋವಿನ ಬಯಲುಸೀಮೆಯ ಮೇಲೆ ಸರದಾರನಾಗಿ ನೇಮಕವಾಗಿದ್ದನು. ಅವನಲ್ಲಿ ಬಹಳ ಬೆಳ್ಳಿ ಬಂಗಾರವಿತ್ತು. 12ಪ್ರಧಾನಯಾಜಕನ ಅಳಿಯನೂ ಅವನಾಗಿದ್ದನು. 13ಉಬ್ಬಿದ ಮನಸ್ಸು ಉಳ್ಳವನಾಗಿ ಆ ಪ್ರಾಂತ್ಯವನ್ನು ಆತನೇ ವಶಮಾಡಿಕೊಳ್ಳಬೇಕೆಂದು ಇಷ್ಟಪಟ್ಟನು. 14ಸಿಮೋನನನ್ನೂ ಅವನ ಮಕ್ಕಳನ್ನೂ ನಿರ್ಮೂಲ ಮಾಡಬೇಕೆಂದು ಮೋಸದ ಹಂಚಿಕೆ ಮಾಡಿದನು. ಸಿಮೋನನು ತನ್ನ ನಾಡಿನಲ್ಲಿದ್ದ ಪಟ್ಟಣಗಳಿಗೆ ಭೇಟಿಕೊಟ್ಟು ಅವು ವ್ಯವಸ್ಥಿತವಾಗಿರುವಂತೆ

ನೋಡಿಕೊಳ್ಳುತ್ತಿದ್ದನು. ಹೀಗಿರುವಲ್ಲಿ 177ನೇ ವರ್ಷದ ಹನ್ನೊಂದನೆಯ ತಿಂಗಲಾದ ಶೆಬಾತ್ ತಿಂಗಳು
ಅವನೂ ಅವನ ಮಕ್ಕಳಾದ ಮತ್ತಾತಿಯನೂ ಯೂದನೂ ಜೆರಿಕೋವಿಗೆ ಬಂದರು. 15ಅಬೂಬನ ಮಗನು
ತಾನು ಕಟ್ಟಿಸಿದ ದೋಕ್ ಎಂಬ ಚಿಕ್ಕ ದುರ್ಗದಲ್ಲಿ ಅವರನ್ನು ಕಪಟದಿಂದ ಸ್ವೀಕರಿಸಿದನು; ಅವರಿಗಾಗಿ ಒಳ್ಳೆ
ಪಾನಗೋಷ್ಠಿಯನ್ನು ಏರ್ಪಡಿಸಿದನು; ಅಲ್ಲೇ ಜನರನ್ನು ಅಡಗಿಸಿಟ್ಟಿದ್ದನು. 16ಹೀಗಿರಲಾಗಿ, ಸಿಮೋನನೂ
ಅವನ ಮಕ್ಕಳೂ ಕುಡಿದು ಮತ್ತರಾದ ಮೇಲೆ ಪ್ತೊಲೆಮೇಯ ಹಾಗೂ ಅವನ ಜನರೂ ಎದ್ದು ತಮ್ಮ
ಆಯುಧಗಳನ್ನು ತೆಗೆದುಕೊಂಡು ಪಾನಗೋಷ್ಠಿಯಲ್ಲೇ ನುಗ್ಗಿ ಸಿಮೋನನ ಮೇಲೆ ಬಿದ್ದು ಅವನನ್ನೂ
ಅವನಿಬ್ಬರು ಮಕ್ಕಳನ್ನೂ ಅವನ ಕೆಲವು ಸೇವಕರನ್ನೂ ಸಂಹರಿಸಿದರು. 17ಪ್ತೊಲೆಮೇಯನು ಮಹಾಪಾತಕ
ಗೈದನು; ಒಳಿತಿಗೆ ಪ್ರತಿಯಾಗಿ ಕೇಡನ್ನು ಮಾಡಿದನು. 18ಈ ಸಂಗತಿಗಳನ್ನೆಲ್ಲಾ ಅರಸನಿಗೆ ಬರೆದುಕಳುಹಿಸಿ,
ತನ್ನ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಬೇಕು; ಹೀಗಾದಲ್ಲಿ ಅವರ ನಾಡನ್ನೂ ಪಟ್ಟಣಗಳನ್ನೂ ನಿಮ್ಮ
ಸ್ವಾಧೀನ ಮಾಡಿಕೊಡುವೆ ಎಂಬುದಾಗಿ ಅರಿಕೆಮಾಡಿದನು. 19ಯೊವಾನ್ನನನ್ನೂ ನಿರ್ಮೂಲ ಮಾಡುವುದಕ್ಕೆ
ಇತರರನ್ನು ಗಜರಕ್ಕೆ ಕಳುಹಿಸಿದನು; ಸಹಸ್ರಾಧಿಪತಿಗಳಿಗೆ, "ನನ್ನ ಬಳಿಗೆ ಬಂದು ಬೆಳ್ಳಿ, ಬಂಗಾರ,
ಬಹುಮಾನಾದಿಗಳನ್ನು ತೆಗೆದುಕೊಳ್ಳಿರೆಂದು ಪತ್ರಬರೆದು ಕಳುಹಿಸಿದನು. 20ಜೆರುಸಲೇಮನ್ನೂ
ದೇವಾಲಯದ ದಿಬ್ಬವನ್ನೂ ಹಿಡಿದುಕೊಳ್ಳುವುದಕ್ಕೆ ಬೇರೆ ಕೆಲವರನ್ನೂ ಕಳುಹಿಸಿದನು. ಇತ್ತ ಒಬ್ಬನು ಗಜರಕ್ಕೆ
ಓಡಿಹೋಗಿ ಯೊವಾನ್ನನಿಗೆ, 21 "ನಿನ್ನ ತಂದೆಯೂ ತಮ್ಮಂದಿರೂ ನಾಶವಾದರು, ನಿನ್ನನ್ನೂ ಕೊಲ್ಲುವುದಕ್ಕೆ
ಅವನು ಜನರನ್ನು ಕಳುಹಿಸಿದ್ದಾನೆ," ಎಂದು ತಿಳಿಸಿದನು. 22ಅವನು ಇದನ್ನು ಕೇಳಿದಾಗ ಬಹಳ
ಆಶ್ಚರ್ಯಗೊಂಡನು. ತನ್ನನ್ನು ಕೊಲ್ಲುವುದಕ್ಕೆ ಬಂದವರನ್ನು ಹಿಡಿಸಿ, ಕೊಂದು ಹಾಕಿಸಿದನು; ಏಕೆಂದರೆ
ತನ್ನನ್ನು ಸಂಹರಿಸುವುದಕ್ಕೆ ಅವರು ಹವಣಿಸುತ್ತಿದ್ದಾರೆಂಬುದು ಅವನಿಗೆ ತಿಳಿದಿತ್ತು.

23 ಯೊವಾನ್ನನ ಉಳಿದ ಚರಿತ್ರೆ, ಅವನು ಮಾಡಿದ ಶೂರಕೃತ್ಯಗಳು ಹಾಗು ಕಟ್ಟಿದ ಗೋಡೆ
ಮುಂತಾದ ಕಾರ್ಯಗಳು ಮತ್ತು ಅವನ ತಂದೆಯ ತರುವಾಯ ಅವನು ಪ್ರಧಾನ ಯಾಜಕನಾಗಿ
ನೇಮಕವಾದಂದಿನಿಂದ ಸಾಧಿಸಿದ ಎಲ್ಲವು ಪ್ರಧಾನಯಾಜಕರ ಕಾಲವೃತ್ತಾಂತದಲ್ಲಿ ಲಿಖಿತವಾಗಿವೆ.